Secondary.

1	Compulsory	Hindi detailed for	VIII.
2	Do	Non-detailed for	VIII.
3	Compulsory	English detailed for	X.
4	Do	Hindi detailed for	X.
5	Do	Non-detailed for	X.

(*b*) These books have been distributed to the Schools during the period between November 1963 to March 1964.

PAPERS LAID ON THE TABLE.

SRI S. R. KANTHI (Minister for Education).—Sir, on behalf of the Minister for Finance, I beg to lay the Statement of Supplementary and Additional Grants for 1964-65 (First Instalment) as required under article 205 (1) of the Constitution of India.

MR. SPEAKER.—The Supplementary Demands will be placed for discussion on Wednesday, *i.e.*, day after to-morrow.

BANGALORE WATER SUPPLY AND SEWERAGE BILL, 1964.

Motion to pass.

SRI K. PUTTASWAMY (Minister for Municipal Administration).—Sir, I move :

"That the Bangalore Water Supply and Sewerage Bill, 1964 be passed."

MR. SPEAKER.—The question is :

"That the Bangalore Water Supply and Sawerage Bill, 1964 be passed."

The motion was adopted.

MYSORE CO-OPERATIVE SOCIETIES (AMENDMENT) BILL, 1964.

Motion to consider.

SRI RAMAKRISHNA HEGDE (Minister for Co-operation, Panchayat Raj and Development).—Sir, I move :

"That the Mysore Co-operative Societies (Amendment) Bill, 1964 be taken into consideration."

Mr. SPEAKER.—Motion moved :

"That the Mysore Co-operative Societies (Amendment) Bill, 1964 be taken into consideration."

Sri RAMAKRISHNA HEGDE.—Mr. Speaker, Sir, in the year 1959, a consolidated Bill called the Mysore Co-operative Societies Bill was brought before this House and it became an Act in the same year and that legislation came into force with effect from 1st July 1964 In the course of the administration of this legislation and implementation of various schemes, it was found that there is need to change certain provisions of the Act. Therefore, this present amendment Bill has been brought before this House. I would like to mention briefly the main points regarding which the amendments have been proposed. It is regarding three points. Firstly, in the present Act, a provision for setting up a separate co-operative tribunal has not been made. It has been found necessary with the increasing scope in the co-operative field that a separate tribunal should be started to deal with all disputes and appeals regarding the administration of co-operative law.

And secondly, there has been a complaint that when new persons apply for membership to any co-operative institution, the application for admission is kept pending for a long time and no decision is taken and therefore, in many places even though persons were qualified to become members, they were denied the opportunity by certain interested parties in the institution. Though there was a proposition in the existing Act for an appeal against the refusal to admit a member, the Act is silent, what should happen if no decision is taken by the society. Therefore, in this Bill a provision has been made that if a particular co-operative institution does not decide on the application for admission within three months, then it should be presumed that the society has refused admission to that person so that the person concerned can appeal to the appropriate authority against the decision of this institution.

Then in the present Act, there is no provision for compulsory contribution by the co-operative institutions to the co-operative educational fund. We have co-operative unions at the State level and at the district level. It is also proposed to have co-operative unions at the taluk level. The State co-operative union and the district co-operative unions are established with the object of developing co-operative leadership, spreading education regarding co-operation, running training colleges and other institutions and so on and so forth. But unless sufficient financial provision is also made, these institutions will not be able to decide the duties that we have cast on them. As I said, there is a provision in the existing Act that the co-operative institutions may contribute, but in practice either because there is no compulsion or it has not been made obligatory on the part of these institutions under the Act or they are not very much interested in this aspect of the work, sufficient contributions are not forthcoming, and that has hampered the work of these co-operative unions. Therefore, a provision has been

made in the amendment Bill that co-operative institutions which declare a certain specified percentage of dividend will contribute at a certain specified rate to the co-operative education fund.

The most important provision in this amendment Bill relates to land development banks. Hon'bel Members are aware that there is a separate chapter in the existing Act regarding Land Mortgage Banks. These banks were established for the purpose of advancing loans to agriculturists, to redeem their old debts and also to undertake development work on agricultural lands. Since the original object of starting the land mortgage banks was to enable agriculturists to discharge their prior debts by mortgaging the land to the banks, they were called land "mortgage banks". Now conditions have changed and the time has come when the agriculturists have to invest captial in developing agricultural lands. I do not mean to say that all prior debts and all indebtedness of the agricultural community have been completely wiped out but a time has come when we haveto lay greater emphasis on the development of land, so that the land may yield better production and the economic standards of the agriculturists may improve. Therefore, it was decided, firstly, to make a change in the nomenclature of the bank. It is proposed in this Bill to call these banks as "Land Development Banks". There has been considerable criticism on the floor of this House as well as outside about the enormous delay in the Central and primary land mortgage banks in sanctioning applications for loans. Even today there was a question in the Honse seeking information as to the time taken by the land mortgage bank in deciding applications received from a particular area. This delay is caused not merely by the administrative delays and defects–which the Government is very anxious to remove–but mainly because of certain procedural defects. According to the existing procedure, the land mortgage bank has to obtain information regarding the encumbrances and other liabilities on the property of the applicant. Many a time, it is not only difficult for the agriculturists to furnish all these information, but in many cases it is impossible, with the results the agriculturist feels tired of this procedure and is almost forced to take loans from other sources. Therefore it is absolutely necessary that the procedure is made as simple as possible. With that object in view, and having studied the provisions in the Acts prevailing in the other States of our country, certain changes have been introduced in this Bill. I do not wish to go into details. Clause 13 and the following clauses deal with the details.

There are a few more changes which are of lesser importance. They are brought here because of certain difficulties experienced in the administration of this law.

This is totally a non-controversial bill and I am sure the Hon'ble Members will welcome this measure and approve this Bill.

ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಸಭಾಪತಿಯವರೆ, ಈಗತಾನೆ ಸಹಕಾರ ಸಚಿವರು ಸಹಕಾರ ಕಾನೂನಿಗೆ ಸಂಬಂಧಪಟ್ಟ ತಿದ್ದುಪಡಿ ಮಸೂದೆಯನ್ನು ಸಭೆಯ ಮುಂದಿಡತಕ್ಕ ಕಾಲದಲ್ಲಿ ಮೂಲ ಕಾನೂನನ್ನು ತಿದ್ದುಪಡಿ ಮಾಡುವುದಕ್ಕೆ ಕಾರಣಗಳನ್ನು ಕೊಡುವಾಗ ಮೂರು ಮುಖ್ಯ

(ಶ್ರೀ ಎಸ್. ಶಿವಪ್ಪ)

ಕಾರಣಗಳನ್ನು ಸಭೆಯ ಮುಂದೆ ಹೇಳಿದ್ದಾರೆ. ಸಹಕಾರ ಸಂಘಗಳು ನಮ್ಮ ದೇಶದಲ್ಲಿ ಎಷ್ಟು ಮಟ್ಟಿಗೆ ಕೆಲಸ ಮಾಡುತ್ತವೆಯೋ ಅದರ ಮೇಲೆ ನಮ್ಮ ದೇಶದಲ್ಲಿ ಸಹಕಾರ ತತ್ವ ಜಯಪ್ರದವಾಗುವುದಕ್ಕೆ ಕಾರಣವಾಗುತ್ತದೆ. ಇವೊತ್ತು ನಮ್ಮ ದೇಶದಲ್ಲಿ ಸಹಕಾರ ಸಂಘಗಳು ಸಮಾಜವಾದದ ತಳಹದಿಗಾಗಿ ಕೆಲಸಮಾಡಬೇಕಾಗಿದೆ. ಸಮಾಜವಾದದ ತತ್ವವನ್ನು ಅಂಗೀಕಾರ ಮಾಡುವುದೇ ಸರಕಾರದ ನೀತಿಯಾಗಿದ್ದರೆ, ಈ ಸಹಕಾರ ಸಂಘಗಳು ಎಷ್ಟುಮಟ್ಟಿಗೆ ಕೆಲಸಮಾಡಿದರೆ ಅಷ್ಟುಮಟ್ಟಿಗೆ ಸಮಾಜವಾದದ ನೀತಿ ಕಾರ್ಯಗತವಾಗುವುದಕ್ಕೆ ನೆರವಾಗುತ್ತದೆ. ಸಹಕಾರಸಂಸ್ಥೆಗಳು ಚೆನ್ನಾಗಿ ಕೆಲಸಮಾಡುವುದಕ್ಕಾಗಿ ಕೆಲವು ತಿದ್ದುಪಡಿಗಳನ್ನು ತಂದಿದ್ದೇವೆಂದು ಹೇಳಿದ್ದಾರೆ. ಈ ತಿದ್ದುಪಡಿಗಳ ಮೇಲೆ ಮಾತನಾಡುವುದಕ್ಕೆ ಮೊದಲು ಈ ಹೊತ್ತು ನಮ್ಮ ದೇಶದಲ್ಲಿ ಸಹಕಾರ ಸಂಸ್ಥೆಗಳು ಎಷ್ಟುಮಟ್ಟಿಗೆ ಕೆಲಸಮಾಡುತ್ತಿವೆ ಮತ್ತು ಅವುಗಳನ್ನು ಯಾವ ದಿಕ್ಕಿನಲ್ಲಿ ಸರಿಪಡಿಸಬೇಕೆಂದು ಅಳತೆ ಮಾಡಬೇಕಾಗಿದೆ. ನಮ್ಮ ದೇಶದಲ್ಲಿ ಈ ಸಹಕಾರ ಸಂಸ್ಥೆಗಳ ಮೂಲಕ ಅನೇಕ ದೊಡ್ಡ ದೊಡ್ಡ ಕೆಲಸಗಳನ್ನು ಮಾಡಬೇಕೆಂದು ನಿರ್ಧಾರ ಮಾಡಿಕೊಂಡಿದ್ದೇವೆ.

1-30 P.M.

ಇವತ್ತಿನ ದಿವಸ ಸಹಕಾರ ಸಂಸ್ಥೆಗಳ ಮುಖಾಂತರ ದೊಡ್ಡ ದೊಡ್ಡ ಕೈಗಾರಿಕೆಗಳನ್ನು ಸ್ಥಾಪನೆ ಮಾಡಿದ್ದೀರಿ. ನಿತ್ಯ ಜೀವನಕ್ಕೆ ಬೇಕಾಗುವ ಎಲ್ಲ ಪದಾರ್ಥಗಳನ್ನೂ ಸಹಕಾರ ಸಂಘಗಳ ಮುಖಾಂತರ ಮಾರಾಟ ಮಾಡಬೇಕು ಎಂಬ ಉದ್ದೇಶ ಇದೆ. ರೈತರಿಗೆ ಅನುಕೂಲವಾಗುವಂತೆ ಸಾಲ ಕೊಡುವ ಏರ್ಪಾಡನ್ನು ಸಹ ಸಹಕಾರ ಸಂಸ್ಥೆಗಳ ಮುಖಾಂತರ ಇಟ್ಟುಕೊಂಡಿದ್ದೀರಿ. ಈ ನೀತಿಯನ್ನು ಎಲ್ಲರೂ ಒಪ್ಪುತ್ತಾರೆ. ಇದು ಶ್ಲಾಘನೀಯವಾದುದು. ಇಂಥ ಒಂದು ಸ್ತುತ್ಯ ಕಾರ್ಯ ಮಾಡಬೇಕು, ಶ್ಲಾಘನೀಯವಾದ ಕೆಲಸ ಜರುಗಬೇಕು ಎಂಬ ಆಶೆ ಬಹುಪಾಲು ನಿರಾಶೆಯಾಗಿದೆ. ಯಾಕೆಂದರೆ ಈ ಸಂಸ್ಥೆಗಳು ಯಶಸ್ವಿಯಾಗಿಲ್ಲ. ಆದರ್ಶಪ್ರಾಯವಾಗಿ ನಡೆದಿಲ್ಲ. ಇದು ಅನೇಕ ರಿಪೋರ್ಟುಗಳಿಂದ ಗೊತ್ತಾಗುತ್ತದೆ. ಇಂದು ಸಹಕಾರ ಸಂಘಗಳು ಕೊಳಕು ಗುಂಡಿಗಳಾಗಿವೆ. ಬೆಳೆ ಉತ್ಪಾದನೆ ಮಾಡುವವ ಮತ್ತು ಬಳಕೆದಾರನ ಮಧ್ಯೆ ವ್ಯಾಪಾರಸ್ಥರ ಹತೋಟಿ ಕಡಿಮೆ ಮಾಡಿ ಸಹಕಾರ ಸಂಘಗಳ ಮುಖಾಂತರ ಎಲ್ಲಾ ಏರ್ಪಾಡು ಮಾಡಬೇಕೆಂಬುದು ಸಹಕಾರ ಸಂಘಗಳ ಮೂಲ ಉದ್ದೇಶವಾಗಿದೆ. ಈ ಪವಿತ್ರ ಜವಾಬ್ದಾರಿ ಕೆಲಸವನ್ನು ಸಹಕಾರ ಸಂಘಗಳು ಎಷ್ಟರಮಟ್ಟಿಗೆ ಮಾಡಿವೆ ಎಂಬುದನ್ನು ನಾವು ಇಂದು ಅಳತೆ ಮಾಡಬೇಕಾಗಿದೆ. ಸರಕಾರದ ಕೈ ಇದರಲ್ಲಿ ಇರುವುದರಿಂದ ಈ ಪವಿತ್ರ ಕಾರ್ಯ ಸರಿಯಾಗಿ ನಡೆಯುತ್ತಿಲ್ಲ. ಸಹಕಾರ ಸಂಸ್ಥೆಗಳಿಗೆ ನಾಮಕರಣ ಮಾಡಿ ತಮಗೆ ಬೇಕಾದ ವ್ಯಕ್ತಿಗಳನ್ನು ಇದರಲ್ಲಿ ಇಟ್ಟಿದ್ದೀರಿ. ಇದನ್ನು ತಮ್ಮದೊಂದು ಸಂಸ್ಥೆಯನ್ನಾಗಿ ಮಾಡಿಕೊಂಡಿದ್ದೀರಿ. ಸಹಕಾರ ಸಂಸ್ಥೆ ಇಂದು ಸಾಹುಕಾರರ ಸಂಸ್ಥೆಯಾಗಿ ಪರಿವರ್ತನೆಯಾಗಿದೆ. ದೊಡ್ಡ ದೊಡ್ಡ ಬಂಡವಾಳದಾರರು ತಮ್ಮ ಜನರನ್ನು ಸೇರಿಸಿಕೊಂಡು ಒಂದು ಸೊಸೈಟಿ ಮಾಡಿಕೊಂಡು ಸಹಕಾರ ಸಂಘ ಎಂಬ ಬೋರ್ಡು ಹಾಕಿಕೊಂಡು ಹೆಚ್ಚಿನ ಲಾಭ ಪಡೆಯುತ್ತಿದ್ದಾರೆ. ಸರಕಾರದಿಂದ ದೊರೆಯುವ ಎಲ್ಲಾ ಪ್ರಯೋಜನ ಹೊಂದುತ್ತಿದ್ದಾರೆ. ತಮ್ಮ ಮನೆಯ ಜನರನ್ನೇ ಸೇರಿಸಿಕೊಂಡು ಸಹಕಾರ ಸಂಘ ಮಾಡಿ ಎಲ್ಲಾ ಪ್ರಯೋಜನ ಹೊಂದುತ್ತಿದ್ದಾರೆಂದು ಅನೇಕರು ಈ ಸಭೆಯಲ್ಲಿ ಅಪಾದನೆ ಮಾಡಿದ್ದಾರೆ. ಇದನ್ನು ಸರಿಪಡಿಸದೇ ಹೋದರೆ ಸಹಕಾರ ಸಂಘಗಳ ಉದ್ದೇಶ ಯಶಸ್ವಿಯಾಗಿ ಜರುಗುವುದಿಲ್ಲ. ಬಹು ನಿರ್ದಾಕ್ಷಿಣ್ಯವಾಗಿ ಸೂಕ್ತ ಕ್ರಮ ತೆಗೆದುಕೊಂಡರೆ ಅಂದಿಗೆ ಸಹಕಾರ ಸಂಘಗಳು ಯಶಸ್ವಿಯಾಗುತ್ತದೆ ಎಂದು ಹೇಳುತ್ತೇನೆ. ದೊಡ್ಡ ದೊಡ್ಡ ವ್ಯಕ್ತಿಗಳನ್ನು ಬಿಟ್ಟುಕೊಟ್ಟು ಸಣ್ಣ ಬಡಪಾಯಿ ವ್ಯಕ್ತಿಗಳನ್ನು ಶಿಕ್ಷೆಗೆ ಗುರಿ ಮಾಡಿದರೆ ಅದರಿಂದ ಒಳ್ಳೆಯದಾಗುವುದಿಲ್ಲ. ದೊಡ್ಡ ದೊಡ್ಡ ಸೊಸೈಟಿಗಳಲ್ಲಿ ಏನು ಲೋಪಗಳು ಕಂಡು ಬಂದಿದೆ ಎಂಬುದಕ್ಕೆ ಅಂಕಿಅಂಶಗಳ ಆಧಾರದೊಂದಿಗೆ ಅಂಥ ಅಪಾದನೆಗಳನ್ನು ಸಭೆಯ ಮುಂದೆ ತಂದಿಟ್ಟಿದ್ದೇವೆ. ಸಹಕಾರ ಸಚಿವರು ಉತ್ತರ ಕೊಡುವ ಕಾಲದಲ್ಲಿ ಇಂಥ ಅಪಾದನೆಗಳ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದಾರೆ ಎಂಬುದನ್ನು ಸಭೆಗೆ ತಿಳಿಸಬೇಕು. ನಮ್ಮ ನಿತ್ಯ ಜೀವನಕ್ಕೆ ಬೇಕಾಗುವ ಆಹಾರ ಪದಾರ್ಥಗಳ ಹಂಚುವಿಕೆಯನ್ನು ಸಹಕಾರ ಸಂಘಗಳಿಗೆ ಕೊಡುತ್ತಿದ್ದೀರಿ. ಇದಕ್ಕಾಗಿ ಸ್ಟೇಟ್ ಮಾರ್ಕೆಟಿಂಗ್ ಸೊಸೈಟಿ ಮಾಡಿದ್ದೀರಿ. ಇದರಲ್ಲಿ ಬಹಳ ಅನ್ಯಾಯ ನಡೆಯುತ್ತಿದೆ. ನಾನು ಯಾವ ವ್ಯಕ್ತಿಯ ಮೇಲೆ ಆರೋಪ ಮಾಡುವುದಿಲ್ಲ. ಎಷ್ಟು ಯಶಸ್ವಿಯಾಗಿ ಕೆಲಸ ಮಾಡಬೇಕೋ ಅಷ್ಟು ಯಶಸ್ವಿಯಾಗಿ ಕೆಲಸ ಮಾಡುತ್ತಿಲ್ಲ. ಇದಕ್ಕೆ ತೀವ್ರ ಗಮನ ಕೊಟ್ಟು ತೀವ್ರ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಸ್ಟೇಟ್ ಮಾರ್ಕೆಟಿಂಗ್ ಸೊಸೈಟಿ ರೀ ಆರ್ಗನೈಜ್ ಮಾಡಬೇಕು. ಇಂಥ ಸೊಸೈಟಿ ಏರ್ಪಾಡು ಮಾಡುವುದರಿಂದ ದೇಶದಲ್ಲಿ ಸಹಕಾರ ಸಂಘಗಳಲ್ಲಿ ಜನರಿಗೆ ನಂಬಿಕೆ

ಬರಬೇಕು. ಆದರೆ ನಂಬಿಕೆ ಬರುತ್ತಾ ಇಲ್ಲ. ಸಹಕಾರ ಸಂಸ್ಥೆಗಳು ಚೆನ್ನಾಗಿ ಕೆಲಸ ಮಾಡಿದರೆ ನಮ್ಮ ದೇಶದಲ್ಲಿ ಒಳ್ಳೇ ಪರಿಣಾಮ ಉಂಟುಮಾಡಬಹುದು. ನಮ್ಮ ಮೈಸೂರು ಸಂಸ್ಥಾನದಲ್ಲಿ ಕೋಟ್ಯಾಧೀಶರು ಇಲ್ಲ. ಮಧ್ಯಮ ವರ್ಗದವರೇ ಹೆಚ್ಚಾಗಿದ್ದಾರೆ. ಹತ್ತಾರು ಜನ ಸೇರಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡಬೇಕಾಗಿದೆ. ಇಲ್ಲದಿದ್ದರೆ ಹೊರಗಿನವರು ಯಾರಾದರೂ ಸಿಂಧಿ ಆಗಲಿ, ಪಂಜಾಬಿಯಾಗಲಿ ಬಂದು ಇಲ್ಲಿಯ ಪ್ರಯೋಜನ ಪಡೆದು ಸಂಪತ್ತನ್ನು ತೆಗೆದುಕೊಂಡು ಹೋಗಬಹುದು. ಇದನ್ನು ಖಂಡಿತವಾಗಿ ತಪ್ಪಿಸಬೇಕಾಗಿದೆ. ಒಂದು ನಿರ್ದಿಷ್ಟವಾದ ನೀತಿಯನ್ನು ಹಾಕಿಕೊಂಡು ನ್ಯಾಯವಾದ ರೀತಿಯಲ್ಲಿ ಎಚ್ಚರಿಕೆಯಿಂದ ಮುಂದುವರಿಯಬೇಕು. ಈ ಮಸೂದೆಯಲ್ಲಿ ಅಪೆಲೇಟ್ ಟ್ರಿಬ್ಯೂನಲ್ ರಚನೆ ಮಾಡುವುದಕ್ಕೆ ಅವಕಾಶ ಇದೆ. ಒಬ್ಬ ನ್ಯಾಯಾಧೀಶರು ಇದರ ಅಧ್ಯಕ್ಷರಾಗಿ ಇರತಕ್ಕದ್ದು ಮತ್ತು ಮೂರು ಜನ ಸದಸ್ಯರು ಇರತಕ್ಕದ್ದು ಎಂದಿದೆ. ಅನ್ಯಾಯ ಪರಿಹಾರ ಮಾಡುವುದಕ್ಕೆ ಒಂದು ದಾರಿ ಇರಬೇಕು, ನ್ಯಾಯ ದೊರಕಬೇಕು ಎಂಬ ಉದ್ದೇಶದಿಂದ ಟ್ರಿಬ್ಯೂನಲ್ ಮಾಡಿದ್ದೀರಿ. ಈ ಅಪೆಲೇಟ್ ಟ್ರಿಬ್ಯೂನಲ್ಲುಗಳು ಈಗಾಗಲೇ ಅನೇಕವಿವೆ. ರೆವಿನ್ಯೂ ಅಪೆಲೇಟ್ ಟ್ರಿಬ್ಯೂನಲ್, ಇತ್ಯಾದಿ, ಅನೇಕ ಟ್ರಿಬ್ಯೂನಲ್ಲುಗಳನ್ನು ನಮ್ಮ ರಾಜ್ಯದಲ್ಲಿ ರಚನೆಮಾಡಿದ್ದೀರ. ಅದೇ ರೀತಿಯಾಗಿ, ಇನ್ನೂ ಒಂದು ಹೊಸ ಅಪೆಲೇಟ್ ಟ್ರಿಬ್ಯೂನಲ್ ಜಾಸ್ತಿ ಮಾಡಿ, ಅವಕ್ಕೆ ಒಂದು ಲಕ್ಷ ರೂಪಾಯಿ ಖರ್ಚು ಮಾಡಿ, ಅಪೆಲೇಟ್ ಟ್ರಿಬ್ಯೂನಲ್ ಆಯಿತು ಅಂದರೆ ಅದರಿಂದ ಏನೂ ಪ್ರಯೋಜನವಾಗಲಾರದು. ಕೇವಲ -4 ದೊಡ್ಡ ದೊಡ್ಡ ವ್ಯಕ್ತಿಗಳಿಗೆ ಕೆಲಸ ಕೊಡಬೇಕೆಂಬ ದೃಷ್ಟಿಯಿಂದ ಅಪೆಲೇಟ್ ಟ್ರಿಬ್ಯೂನಲ್ ಮಾಡಿದರೆ ಇದರಿಂದ ನಾವು ಏನು ಸಾಧನೆ ಮಾಡಬಹುದು ? ಅದರಿಂದ ಏನೂ ಆಗುವುದಿಲ್ಲ, ಏಕೆಂದರೆ ಟ್ರಿಬ್ಯೂನಲ್ಲುಗಳ ಅನುಭವ ನಮಗೆ ಬಹಳ ಇದೆ. ಈ ಟ್ರಿಬ್ಯೂನಲ್ ಮಾಡುವ ಕಾಲಕ್ಕೆ ತಾವು ಒಂದು ನಿಷ್ಪಕ್ಷಪಾತವಾದ ನೀತಿಯನ್ನು ಅನುಸರಿಸಿ, ಸಹಕಾರದ ತತ್ವದ ಜಯಪ್ರದಕ್ಕಾಗಿ ಯಾವ ವ್ಯಕ್ತಿಯನ್ನು ಹಾಕಿದರೆ ಟ್ರಿಬ್ಯೂನಲ್ ಅದರ ಉದ್ದೇಶವನ್ನು ನೆರವೇರಿಸುತ್ತದೆ ಎಂಬ ದೃಷ್ಟಿಯಿಂದ ಚುನಾಯಿಸಬೇಕು. ಅದು ಬಿಟ್ಟು ಸರಕಾರದ ಕೃಪಾಕಟಾಕ್ಷದಿಂದ ನಿಮ್ಮ ಪ್ರೀತಿಗೋಸ್ಕರವಾಗಿ, ಸಹಾಯಕ್ಕೋಸ್ಕರವಾಗಿ ನಿಮಗೆ ಬೇಕಾದ ವ್ಯಕ್ತಿಗಳನ್ನು ಟ್ರಿಬ್ಯೂನಲ್ಲುಗಳಿಗೆ ಏರಿಸುವುದಾದರೆ, ಈ ಟ್ರಿಬ್ಯೂನಲ್ಲಿನಿಂದ ಏನೇನೂ ಪ್ರಯೋಜನವಾಗಲಾರದು ಎಂದು ಹೇಳಬೇಕಾಗಿದೆ. ಆವಾಗ ಟ್ರಿಬ್ಯೂನಲ್ಲಿನಿಂದ ನ್ಯಾಯಕ್ಕಿಂತ ಹೆಚ್ಚಾಗಿ ಅನ್ಯಾಯವಾಗುವ ಸಂದರ್ಭಗಳಿವೆ. ತಾವು ಈ ಟ್ರಿಬ್ಯೂನಲ್ಲುಗಳನ್ನು ಮಾಡತಕ್ಕಂಥ ಕಾಲದಲ್ಲಿ, ಕೆಲವರು ನಿರುದ್ಯೋಗಿಗಳಿಗೆ ಕೆಲಸ ಕೊಡಬೇಕೆಂಬ ಒಂದೇ ಒಂದು ದೃಷ್ಟಿಯನ್ನು ಇಟ್ಟುಕೊಳ್ಳಬೇಡಿ. ಅವರಲ್ಲಿ ಶಕ್ತರಾದಂಥ, ಪ್ರವೀಣರಾದಂಥ ಮೇಧಾವಿಗಳನ್ನು ನೇಮಕ ಮಾಡಿದರೆ ಬಹಳ ಅನುಕೂಲವಾಗುತ್ತದೆ. ಇವು ನಿರುದ್ಯೋಗಿಗಳಿಗೆ ಸ್ಥಾನವನ್ನು ಕಲ್ಪನೆ ಮಾಡತಕ್ಕಂಥ ಟ್ರಿಬ್ಯೂನಲ್‌ಗಳಾಗಬಾರದು. ನಮ್ಮ ಹಿಂದಿನ ಅನುಭವಗಳಿಂದ ಹೇಳುವುದಾದರೆ, ಟ್ರಿಬ್ಯೂನಲ್ಲುಗಳೆ ಆಗಲಿ, ಕಾರ್ಪೊರೇಶನ್ನುಗಳೆ ಆಗಲಿ, ನಾವು ಏನು ಒಂದು ಸದುದ್ದೇಶವನ್ನು ಇಟ್ಟುಕೊಂಡು ಸೃಷ್ಟಿ ಮಾಡುತ್ತೇವೋ, ಅವು ನೆರವೇರಿಲ್ಲ; ಅವನ್ನು ಮೇಲಿಂದಮೇಲೆ, ಟೀಕೆ ಮಾಡುವುದರ ಮುಖಾಂತರ ನಿದರ್ಶನವನ್ನು ಈ ಸಭೆಯ ಮುಂದೆ ಇಟ್ಟಿದ್ದೇವೆ. ಅದೇ ರೀತಿ ಈ ಟ್ರಿಬ್ಯೂನಲ್ಲೂ ಆಗಬಾರದು. ಇದಕ್ಕೆ 1 ಲಕ್ಷ ರೂಪಾಯಿ ಖರ್ಚು ಮಾಡುತ್ತೀರ. ಇದರ ವ್ಯಾಪಕತೆ ಏನು ಎಂಬುದನ್ನು ಈ ಸಭೆಗೆ, ಎಲ್ಲ ಸಂಶಯಗಳನ್ನೂ ದೂರ ಮಾಡುವ ರೀತಿಯಲ್ಲಿ ಮಂತ್ರಿಗಳು ಕೊಡಬೇಕು ಎಂದು ಸೂಚನೆ ಮಾಡುತ್ತೇನೆ.

ಕೋ-ಆಪರೇಟಿವ್ ಎಜ್ಯುಕೇಶನ್ ಫಂಡಿಗೆ ಕಂಪಲ್ಸರಿಯಾಗಿ ಕೊಡಬೇಕೆಂದು ಇಲ್ಲಿ ಸೆಕ್ಷನ್ 11ರಲ್ಲಿ ನಮೂದಿಸಿದ್ದೀರಿ. ನಿಜ, ಈ ಸಹಕಾರ ವಿದ್ಯಾಭ್ಯಾಸ ಸಾಕಷ್ಟು ನಡೆಯಬೇಕೆಂಬುದರಲ್ಲಿ ಏನೇನೂ ಸಂಶಯವಿಲ್ಲ. ಯಾವತರಹ ಡಿವಿಡೆಂಡು ಸೊಸೈಟಿ ಕೊಡದಿದ್ದರೂ ಎಜುಕೇಶನ್ ಫಂಡಿಗೆ ಕಂಟ್ರಿಬ್ಯೂಟ್ ಮಾಡಬೇಕೆಂದು ಇದರಲ್ಲಿ ನಮೂದು ಮಾಡಿದ್ದೀರ. ಎಜುಕೇಷನ್ ಫಂಡ್ ಆಗಬೇಕಾದರೆ ಸಹಕಾರ ಸಂಸ್ಥೆಗಳು ತಮ್ಮ ಕಾರ್ಯ ಕ್ಷೇತ್ರದಲ್ಲಿ ಹೆಚ್ಚಿನ ಕೆಲಸ ಮಾಡಬೇಕು. ಹಾಗೆಯೇ ಸೊಸೈಟಿಗಳು ತಮ್ಮ ಬಂಡವಾಳವನ್ನು ಹೆಚ್ಚಿಸಿಕೊಳ್ಳಲು ಅವಕಾಶ ಮಾಡಿಕೊಡತಕ್ಕದ್ದು ಮೊದಲನೆಯ ಕರ್ತವ್ಯ. ಸೊಸೈಟಿಗಳು ತಮ್ಮ ಬಂಡವಾಳವನ್ನು ಹೆಚ್ಚಿಸಿ, ಸಾಕಷ್ಟು ಬಲವಾಗಿ ಬೆಳೆದು ರಿಜರ್ವ್ ಫಂಡ್ ಕೂಡಿಹಾಕಿಕೊಂಡರೆ, ಆಗ ಎಜುಕೇಷನ್ ಫಂಡಿಗೆ ಸ್ವಲ್ಪ ಭಾಗ ಕೊಡಿ ಎಂದರೆ ಕೊಡುತ್ತಾರೆ. ಇವತ್ತು ಡಿವಿಡೆಂಡ್ ಕೊಡದಿರುವ ಸೊಸೈಟಿಗಳನ್ನು ಎಜುಕೇಶನ್ ಫಂಡಿಗೆ ಕಂಪಲ್ಸರಿಯಾಗಿ ಕೊಡಿ ಅಂದರೆ ಕಷ್ಟ. ಸೊಸೈಟಿಗಳು ಒಪ್ಪಲಿ ಒಪ್ಪದಿರಲಿ, ಕಂಪಲ್ಸರಿಯಾಗಿ ಕೊಡಬೇಕೆಂದರೆ, ಯಾವ ಸೊಸೈಟಿಗೆ ಸ್ವಯಂ ಆಡಳಿತ ಅಧಿಕಾರವನ್ನು ಕೊಟ್ಟಿದ್ದೀರೋ ಅದನ್ನು ಕಿತ್ತುಕೊಂಡ ಹಾಗಾಗುತ್ತದೆ. ಯಾವ ಸೊಸೈಟಿಯೇ ಇರಲಿ, ಅದರ ಜನರಲ್ ಬಾಡಿ ಒಪ್ಪಿ ಕೊಟ್ಟರೆ ಸರಿ, ಅವರ ತೀರ್ಮಾನಕ್ಕೆ ಬಿಟ್ಟುಬಿಟ್ಟರೆ ಸಂತೋಷ. ಅವರು ಸಂತೋಷಪಟ್ಟು ಕೊಟ್ಟರೆ ಯೂನಿಯನ್ ತೆಗೆದುಕೊಳ್ಳಬೇಕೆ ಹೊರತು, ಇಂಥ ಡೈರೆಕ್ಟಿವ್ ಕೊಟ್ಟು ಅದಕ್ಕೆ ಕೊಡಬೇಕೆಂದು ಹೇಳುವುದು ಸ್ವಯಂ ಆಡಳಿತ ಅಧಿಕಾರವೇನಿದೆಯೋ ಅದನ್ನು ಕಿತ್ತುಕೊಂಡ ಹಾಗಾಗುತ್ತದೆ. ಇದನ್ನು ಸ್ವಲ್ಪ

(ಶ್ರೀ ಎಸ್. ಶಿವಪ್ಪ)

ಮಟ್ಟಿಗೆ ಬದಲಾಯಿಸಬೇಕು ಎಂದು ಹೇಳುತ್ತೇನೆ. ಕೋ-ಆಪರೇಟಿವ್ ಯೂನಿಯನ್ ಫಂಡಿಗೆ, ಸೊಸೈಟಿ ವರ್ಷವರ್ಷ ನಡೆಯುವ ಜನರಲ್‌ಬಾಡಿ ಮೀಟಿಂಗಿನ ಒಪ್ಪಿಗೆ ಪಡೆದು ಕೊಡಬೇಕು. ಈ ನಿಲುವನ್ನು ಕೊಟ್ಟು ಸ್ವಯಂ ಆಡಳಿತದಲ್ಲಿರತಕ್ಕಂಥ ಕಾರ್ಯವನ್ನು ಮಾಡಬೇಕು. ಅಂಥ ಅವಕಾಶವನ್ನು ಮಾಡದೆ ನೀವೆ ಡೈರೆಕ್ಟಿವ್ ಕೊಟ್ಟು, ಅವರು ಮ್ಯಾನಡೇಟರಿಯಾಗಿ ಕೊಡತಕ್ಕದು ಅಂದರೆ ಸಹಕಾರ ತತ್ವಕ್ಕೆ ಅಷ್ಟು ಒಳ್ಳೆಯದಲ್ಲ. ಕೋ-ಆಪರೇಟಿವ್ ಎಜುಕೇಶನ್ ಫಂಡನ್ನು ನಿರ್ಮಾಣ ಮಾಡಿರುವುದು ಎಷ್ಟೇ ಒಳ್ಳೆಯದಿದ್ದರೂ, ಆ ಫಂಡು ನಿರ್ಮಾಣ ಮಾಡುವ ಕಾಲದಲ್ಲಿ ಸರಕಾರ ತಾನೇ ಸೊಸೈಟಿಗಳಿಗೆ ಆದೇಶ ನೀಡಿ ಕಂಪಲ್ಸರಿಯಾಗಿ ವಸೂಲು ಮಾಡುವ ತತ್ವವನ್ನು ನಾನು ವಿರೋಧಿಸುತ್ತೇನೆ.

ತಾವು ಎಲ್ಲದಕ್ಕಿಂತ ಹೆಚ್ಚಾಗಿ ಈ ಮಸೂದೆಯಲ್ಲಿ ತಿದ್ದುಪಡಿ ಮಾಡಿರತಕ್ಕಂಥ ಮಹತ್ವದ ವಿಚಾರವೆಂದರೆ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕುಗಳು ಎಂದು ಹೇಳಿದಿರಿ. ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕುಗಳು ಎಂಬ ಒಂದು ಹೊಸ ಹೆಸರನ್ನು ತಾವ ಸೂಚನೆ ಮಾಡಿದ್ದೀರಿ. ಇದುವರೆಗೆ ಅದಕ್ಕೆ ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕ್ ಎಂಬ ಹೆಸರಿತ್ತು. ಇವತ್ತು ಅದಕ್ಕೇ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್ ಎಂಬ ಒಂದು ಹೆಸರನ್ನು ಇಟ್ಟಿದ್ದೀರಿ. ಉದ್ದೇಶವಾದರೂ ಕೂಡ ಇಷ್ಟೆ. ಭೂಮಿಯನ್ನು ನಂಬಿರತಕ್ಕಂಥ ರೈತನಿಗೆ, ಭೂಮಿ ಉತ್ಪಾದನೆಗೆ ವ್ಯವಸಾಯವನ್ನು ಅಭಿವೃದ್ಧಿ ಮಾಡುವುದಕ್ಕೋಸ್ಕರ ಸಾಲದ ರೂಪವಾಗಿ ಕೊಡತಕ್ಕ ಹಣವನ್ನು ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕುಗಳ ಮುಖಾಂತರ ಕೊಡುವ ಒಂದು ಪದ್ಧತಿಯನ್ನು ಅನುಸರಿಸುತ್ತಾ ಬಂದಿದ್ದೀರಿ. ಇವತ್ತು ಆ ಹೆಸರನ್ನು ಬದಲಾಯಿಸಿದೆ. ತಾವು ಹೇಳುವ ರೀತಿಯಲ್ಲಿ ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕಿನಿಂದ ಸಾಲ ತೆಗೆದುಕೊಳ್ಳಬೇಕಾದರೆ ರೈತನಿಗೆ ಬಹಳ ಕಷ್ಟವಿದೆ. ಒಂದು ಸಾವಿರ ರೂಪಾಯಿ ಸಾಲ ತೆಗೆದುಕೊಳ್ಳಬೇಕಾದರೆ ಅರ್ಧದಷ್ಟು ಹಣವನ್ನು ಖರ್ಚು ಮಾಡಬೇಕಾಗಿತ್ತು. ತಾಲ್ಲೂಕು ಮಟ್ಟದಲ್ಲಿ, ರಾಜ್ಯ ಮಟ್ಟದಲ್ಲಿ ಕೂಡ ಬ್ಯಾಂಕುಗಳು ಸಾಕಷ್ಟಿವೆ. ಇವುಗಳಲ್ಲಿ ಒಂದು ರಿಕಾರ್ಡು ಹೋಗಿ ವಾಪಸ್ಸು ಬರಬೇಕಾದರೆ 12 ತಿಂಗಳು, 20 ತಿಂಗಳು ಹಿಡಿದಿವೆ. ಹೀಗೆ ಬರುವ ಹಣದಲ್ಲಿ ಬಹು ದೀರ್ಘಕಾಲ ಕಚೇರಿಗಳಿಗೆ, ಬ್ಯಾಂಕುಗಳಿಗೆ ಅಲೆದು ಅಲೆದು ಬರುವ ದುಡ್ಡಿನಲ್ಲಿ ಅರ್ಧಭಾಗ ಖರ್ಚು ಮಾಡಿ, ಕೊನೆಗೆ ಉಳಿದ ಅರ್ಧ ಭಾಗವನ್ನು ಕೈಗೆ ತೆಗೆದುಕೊಂಡು ಹೋಗುವ ಸಂದರ್ಭಗಳು ಬಹಳವಿವೆ. ಇಲ್ಲಿ ಸೂಚನೆ ಮಾಡಿರುವಂಥ ರೀತಿಯಲ್ಲಿ ಈ ಒಂದು ವಿಚಾರವನ್ನು ಈ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕುಗಳನ್ನು ಸ್ಥಾಪನೆ ಮಾಡುವ ಕಾಲದಲ್ಲಿ ಹೇಳಿದ್ದೀರಿ. ಈ ಒಂದು ಹೊಸ ಆಡಳಿತವನ್ನು ಮಾಡುವ ಮುಖ್ಯ ಕಾರಣ ಈಗ ಆಗಿರತಕ್ಕ ಅವ್ಯವಸ್ಥೆಯನ್ನು ನಿವಾರಣೆ ಮಾಡುವುದಕ್ಕೋಸ್ಕರ ಎಂದು. ಇದಕ್ಕೋಸ್ಕರ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕುಗಳನ್ನು ಸ್ಥಾಪನೆ ಮಾಡಬೇಕಾಗಿದೆ ಎಂದು ಹೇಳಿದ್ದೀರಿ. ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕಿಗೆ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್ ಎಂದು ಹೆಸರು ಬದಲಾವಣೆಯಾದರೆ ಸಾಲದು. ಕಾರ್ಯಕ್ಷೇತ್ರದಲ್ಲಿ ಯಾವರೀತಿ ಬದಲಾವಣೆಯಾಗುತ್ತದೆಂಬುದು ಮುಖ್ಯವಾದ ಕೆಲಸ. ನೇಮ್ ಬೋರ್ಡು ಬದಲಾಯಿಸಿದರೆ, ಅದರಿಂದಲೇ ಹೆಚ್ಚಿನ ಕಾರ್ಯ ಸಫಲವಾಗುವುದಿಲ್ಲ. ಸಾಲವನ್ನು ಮಂಜೂರು ಮಾಡುವ ಕ್ರಮದಲ್ಲಿ ಒಂದು ಹೊಸ ಬದಲಾವಣೆ ಮಾಡಿದ್ದೇವೆಂದು ಹೇಳುತ್ತಿದ್ದಾರೆ. ಹೊಸ ಬದಲಾವಣೆ ಏನೆಂದರೆ ಸಾಲಕ್ಕೆ ಕೊಟ್ಟ ಅರ್ಜಿಯ ವಿಲೇವಾರಿ ಕ್ರಮದಲ್ಲಿ ಆಗಿರುವ ಬದಲಾವಣೆ. ಅರ್ಜಿಯನ್ನು ಯಾವರೀತಿ ವಿಲೇವಾರಿ ಮಾಡಬೇಕೆಂಬ ಬಗ್ಗೆ ಹೀಗೆ ಹೇಳಿದ್ದಾರೆ :

Mode of dealing with applications for loans.—When an application for a loan is made..... a public notice shall be given of the application... calling upon all persons interested to present their objections to the loan. The State Government may...prescribe the persons by whom such public notice shall be given and the manner in which the objections shall be heard and disposed of

ಇವತ್ತಿನ ದಿವಸ ಸಾಲಕ್ಕೆ ಯಾರಾದರೂ ಅರ್ಜಿ ಹಾಕಿದರೆ, ಅದಕ್ಕೆ ಪಬ್ಲಿಕ್ ನೋಟೀಸ್ ಕೊಟ್ಟು, ಪಬ್ಲಿಕ್ ಹಿಯರಿಂಗ್ ಮಾಡಿ, ಅದನ್ನು ಯಾರಾದರೂ ಅಬ್ಜೆಕ್ಟ್ ಮಾಡಿದರೆ ತಳ್ಳಿ ಹಾಕಬೇಕು ಎಂಬ ಒಂದು ವಿಷಯ ಇಲ್ಲಿದೆ. ಕಿತಾಪತಿ ಹೆಚ್ಚಾಗಿರತಕ್ಕ ನಮ್ಮ ದೇಶದಲ್ಲಿ, ಸಾಲಗಾರರಿಗೆ ನೋಟೀಸು ಕೊಟ್ಟು, ಪಬ್ಲಿಕ್ ಹಿಯರಿಂಗ್ ಮಾಡುತ್ತೇವೆಂದರೆ ಅನೇಕ ವಿಧವಾದ ತಕರಾರುಗಳು ಬರುವ ವಿಷಯವಿದೆ. ಒಂದು ಕಾನೂನು ಮಾರ್ಪಾಟಾಗುತ್ತದೆಂದರೆ, ಸಾಲವನ್ನು ಮಂಜೂರ

ಮಾಡತಕ್ಕ ವಿಚಾರವಾಗಿ ಬಹಳ ಸುಲಭವಾದ ಕ್ರಮ, ದಾರಿ ನಿರೂಪಣೆ ಮಾಡುವ ಉದ್ದೇಶದಿಂದ ಮಾಡಬೇಕು. ಪಬ್ಲಿಕ್ ಹಿಯರಿಂಗ್ ಮಾಡುವುದರಿಂದ, ಪಬ್ಲಿಕ್ಕಿಗೆ ನೋಟೀಸು ಕೊಡುವುದರಿಂದ, ಯಾರಿದ್ದರೂ ಅವರ ತಕರಾರು ಹೇಳಿ ಎಂದು ಅವರಿಗೆ ಅವಕಾಶ ಕೊಡುತ್ತೀರ. ಯಾವ ಅಧಿಕಾರಿಗಳಿರುತ್ತಾರೋ, ಅವರ ಮೇಲೆ ಈ ಅರ್ಜಿ ನಿಲ್ಲುತ್ತದೆ. ಅವರು ವಿಚಾರ ಮಾಡಿ ಯಾವ ರೀತಿ ಬೇಕಾದರೂ ಬರೆಯಬಹುದು. ಒಂದು ನಿರ್ದಿಷ್ಟವಾದ ರೀತಿಯಲ್ಲಿ ಬರೆಯಬೇಕೆಂಬ ಪ್ರೊಸೀಜರಿಲ್ಲ. ಅವರು ಯಾವ ತೀರ್ಮಾನವನ್ನು ಬೇಕಾದರೂ ಕೊಡುವುದಕ್ಕಾಗುತ್ತದೆ ಈವಾಗ ಏನು ನಡೆಯುತ್ತಿದೆಯೋ, ಮುಂದೆಯೂ ಅದೇ ನಡೆಯಬಹುದು. ಅಧಿಕಾರಿಗಳನ್ನು ಒಲಿಸಿಕೊಳ್ಳಬೇಕಾದರೆ ಯಾವರೀತಿ ಮಾಡಬೇಕು ಎಂಬುದು ಮಾಮೂಲಾಗಿ ಬಂದಿದೆ. ಈಗಲೂ ಕೂಡ ಅದಕ್ಕೆ ಬಹಳ ಅವಕಾಶವಿದೆ. ಆದ್ದರಿಂದ ಒಂದು ಪ್ರೊಸೀಜರು ಇರಬೇಕು.

ಶ್ರೀ ರಾಮಕೃಷ್ಣ ಹೆಗ್ಗಡೆ.—ರೂಲ್ಸಿನಲ್ಲಿ ಬರುತ್ತದೆ.

ಶ್ರೀ ಎಸ್. ಶಿವಪ್ಪ.—ಅದನ್ನು ನಿರ್ದಿಷ್ಟವಾಗಿ ಪ್ರೊಸೀಜರಿನಲ್ಲಿ ಹಾಕತಕ್ಕ ಕಾಲದಲ್ಲಿ, ವಿನಾಕಾರಣ ಅರ್ಜಿಯನ್ನು ತಿರಸ್ಕಾರ ಮಾಡಲು ಹೆಚ್ಚಿಗೆ ಅವಕಾಶವನ್ನು ಕೊಡಬಾರದು. ಅದರಿಂದ ಖಂಡಿತವಾಗಿಯೂ ರೈತರಿಗೆ ತೊಂದರೆಯಾಗುತ್ತದೆ. ರೈತರಿಂದ ಬೇರೆ ರೀತಿಯಲ್ಲಿ ಲಂಚರುಷುವತ್ತು ಪಡೆಯುವುದಕ್ಕೆ ಅವಕಾಶ ಉಂಟಾಗಬಹುದು. ಆದ್ದರಿಂದ ರೂಲ್ಸ್ ಮಾಡುವಾಗ ಬಹಳ ಲಿಬರಲ್ ಆಗಿ ಮಾಡಿದರೆ ರೈತನಿಗೆ ತುಂಬಾ ಅನುಕೂಲವಾಗುತ್ತದೆ ಎಂದು ಹೇಳುತ್ತೇನೆ. ಇದರಿಂದ ರೈತರಿಗೆ ತುಂಬಾ ಅನುಕೂಲವಾಗಬೇಕಾಗಿದೆ. ನಮ್ಮ ದೇಶದಲ್ಲಿರತಕ್ಕ ರೈತರಲ್ಲಿ ಶೇಕಡ 90 ಭಾಗ ರೈತರು ಬಡತನದಲ್ಲಿದ್ದಾರೆ. ಅಂತಹವರಿಗೆ ತಾವು ಕೊಡತಕ್ಕ ಸಾಲವನ್ನು ಬಹಳ ಜಾಸ್ತಿಯಾಗಿ ಕೊಡಬೇಕು. ಇದಕ್ಕಾಗಿ ಸೆಂಟ್ರಲ್ ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕನ್ನು ಇಟ್ಟಿದ್ದೀರಿ. ಅವರು ಕೊಡತಕ್ಕ ಸಾಲ ಏನೇನೂ ಸಾಲದು. ಈಗ ಅವರು ಕೊಡುತ್ತಾ ಇರತಕ್ಕದ್ದಕ್ಕೆ ಇನ್ನೂ ಹತ್ತರಷ್ಟಾದರೂ ಕೂಡ ಜಾಸ್ತಿ ಹಣವನ್ನು ಕೊಡಬೇಕು. ಅವರು ಕೊಡತಕ್ಕ ಹಣ ಕಡಿಮೆಯಾದರೆ ಅರ್ಜಿಗಳು ಜಾಸ್ತಿಯಾಗಿ ಲಂಚರುಷುವತ್ತುಗಳು ಜಾಸ್ತಿಯಾಗುತ್ತವೆ. ಯಾರ್ಯಾರು ಕೇಳುತ್ತಾರೋ ಅವರೆಲ್ಲರಿಗೂ ಹಣ ಸಿಕ್ಕುವುದಿಲ್ಲ. ಕೆಲವರಿಗೆ ಮಾತ್ರ ಸಿಕ್ಕುತ್ತದೆ. ಅದರಿಂದ ಕಾಂಪಿಟಿಷನ್ ಹೆಚ್ಚುತ್ತದೆ. ಅದನ್ನು ತಪ್ಪಿಸಬೇಕೆಂಬ ಉದ್ದೇಶದಿಂದಲೇ ಈ ತಿದ್ದುಪಡಿ ಮಸೂದೆಯನ್ನು ತಂದಿದ್ದೀರಿ. ಇದನ್ನು ಸ್ವಾಗತಿಸುತ್ತೇನೆ ಮತ್ತು ನಾನು ಮೊದಲೇ ಹೇಳಿದ ಹಾಗೆ ದೊಡ್ಡ ದೊಡ್ಡ ಸಹಕಾರ ಸಂಘಗಳ ಮೇಲೆ ಸರ್ಕಾರದವರು ತಮ್ಮ ಕಟ್ಟುನಿಟ್ಟಾದ ನೀತಿಯನ್ನು ಇಟ್ಟುಕೊಳ್ಳಬೇಕು. ಇಲ್ಲದೇ ಇದ್ದರೆ ಲಂಗು ಲಗಾಮು ಇಲ್ಲದ ಕುದುರೆಯಂತಾಗುತ್ತದೆ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಂ. ಆರ್. ಪಾಟೀಲ್ (ಹುಬ್ಬಳ್ಳಿ).—ಮಾನ್ಯ ಅಧ್ಯಕ್ಷರೇ, ಸರ್ಕಾರದವರು ನಮ್ಮ ಮುಂದೆ ಮಂಡಿಸಿರುವಂತಹ ಈ ತಿದ್ದುಪಡಿ ವಿಧೇಯಕಕ್ಕೆ ನನ್ನ ಸಾಮಾನ್ಯ ಬೆಂಬಲವನ್ನು ಕೊಡುತ್ತಾ ಇದರಲ್ಲಿರುವಂತಹ ಕೆಲವು ಕಲಂಗಳ ಬಗ್ಗೆ ನನ್ನ ಮನಸ್ಸಿನ ಪ್ರತಿಕ್ರಿಯೆಯನ್ನು ಹೇಳಲಿಕ್ಕೆ ಇಚ್ಛಿಸುತ್ತೇನೆ.

57ನೇ ಕ್ಲಾಸ್‌ನಲ್ಲಿ ಕೋ-ಆಪರೇಟಿವ್ ಸೊಸೈಟಿಗಳವರು ಎಜ್ಯುಕೇಷನ್ ಫಂಡ್‌ಗೆ ಎಷ್ಟು ಕೊಡಬೇಕೆಂಬುದನ್ನು ರೂಲ್ಸ್‌ನಲ್ಲಿ ನಿರ್ಣಯ ಮಾಡಬೇಕೆಂದು ಬರೆದಿದ್ದೀರಿ. ಇದನ್ನು ನೆಟ್ ಪ್ರಾಫಿಟ್ ಮೇಲೆ ನಿರ್ಣಯಿಸಬೇಕೇ ಅಥವಾ ಗ್ರಾಸ್ ಪ್ರಾಫಿಟ್ ಮೇಲೆ ನಿರ್ಣಯಿಸಬೇಕೇ? ಯಾವ ರೇಟ್‌ನಂತೆ ಎಷ್ಟು ಕೊಡಬೇಕೆಂಬುದನ್ನು ಬರೆದಿಲ್ಲ. ಇಂತಹ ಅಧಿಕಾರವನ್ನು ಸರ್ಕಾರದವರು ಇಟ್ಟುಕೊಳ್ಳುವುದಕ್ಕೆ ಯಾವ ಲಂಗು ಲಗಾಮೂ ಇಲ್ಲದೆ, ಪ್ರತಿಬಂಧವೂ ಇಲ್ಲದೆ ಬಿಟ್ಟುಕೊಡುವುದು ಸರಿಯಾಗಿ ಕಾಣುವುದಿಲ್ಲ. ಆದ್ದರಿಂದ ನೆಟ್ ಪ್ರಾಫಿಟ್ ಮೇಲೆ ಒಂದು ಅಥವಾ ಒಂದೂವರೆ ಪರ್ಸೆಂಟ್‌ಗಿಂತ ಮೀರದಂತೆ ಎಂದು ಹೇಳಿ ಒಂದು ಮ್ಯಾಕ್ಸಿಮಮ್ ರೇಟ್ ನಿಗದಿ ಮಾಡುವುದು ಯೋಗ್ಯ ಎಂದು ನನಗೆ ಅನಿಸುತ್ತದೆ. ಆದ್ದರಿಂದ ಈ ನನ್ನ ಸೂಚನೆಯನ್ನು ಮಾನ್ಯ ಮಂತ್ರಿಗಳು ಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

101ನೇ ಕಲಂ (ಬಿ)ನಲ್ಲಿ ಯಾವ ಕಾಲಕ್ಕೆ ಸಹಕಾರ ಸಂಘಗಳ ಹಣದ ವಸೂಲಿ ಸಲುವಾಗಿ ಆಸ್ತಿ ಹರಾಜಾಗುತ್ತದೆ, ಆ ಕಾಲಕ್ಕೆ ಅದನ್ನು ಖರೀದಿ ಮಾಡಲಿಕ್ಕೆ ಯಾರೂ ಸಿಕ್ಕದೇ ಇದ್ದ ಕಾಲಕ್ಕೆ ಏನು ಮಾಡಬೇಕೆಂಬ ಬಗ್ಗೆ ಇದರಲ್ಲಿ ಯೋಚನೆ ಮಾಡಲಾಗಿದೆ? ಈ ಕಲಂನ 3ನೇ ಕಲಂ ಏನಿದೆ ಅದರಲ್ಲಿ ವ್ಯಾಕರಣದ ತಪ್ಪು ಇದೆಯೋ ಅಥವಾ ಇನ್ನೇನಾದರೂ ತಪ್ಪಿದೆಯೋ ಏನೋ ಅರ್ಥವಾಗುವುದಿಲ್ಲ. ಅಂತೂ ಇದರಲ್ಲಿ ದೋಷ ಇದೆ ಎಂದು ಕಂಡು ಬರುತ್ತದೆ, ಸಹಕಾರ ಮಂತ್ರಿಗಳು ಇದನ್ನೂ ಸಹ ಪರಿಶೀಲನೆ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

(ಶ್ರೀ ಎಂ. ಆರ್. ಪಾಟೀಲ್)

104 (ಎ)ನಲ್ಲಿ,

"*Application of this Chapter to Co-operative Societies in other States.*—

"The provisions of this chapter and all rules made under this Act relating to, or in any manner connected with the recovery of the sum specified in section 103 shall apply with such modifications if any, as may be directed by the State Government in regard to the recovery of like sums due to co-operative societies registered or deemed to be registered under any law for the time being in force in any State in India......"

ಎಂದು ಇದೆ.

103ನೇಯ ಸೆಕ್ಷನ್‌ಗೂ ರೆಕವರಿಗೂ ಸಂಬಂಧವೇ ಇಲ್ಲ. 103ನೆಯ ಸೆಕ್ಷನ್ ಇಂಟರಿಮ್ ಅಟ್ಯಾಚ್‌ಮೆಂಟ್‌ಗೆ ಸಂಬಂಧಪಡುತ್ತದೆ. ಆದ್ದರಿಂದ ಈ ಕಲಂನಲ್ಲಿ ದೋಷ ಇದೆಯೋ ಅಥವಾ ವ್ಯಾಕರಣದ ದೋಷ ಇದೆಯೋ ಎಂಬುದನ್ನು ಸರ್ಕಾರದವರು ಪರಿಶೀಲನೆ ಮಾಡಬೇಕಾಗುತ್ತದೆ.

ಕಲಂ 129 ಕ್ಲಾಸ್ (3) ರಲ್ಲಿ

"(iii) for clause (o), the following clause shall be substituted namely.—

"(o) the recruitment and conditions of service of employees of co-operative societies"

ಎಂದು ತಿದ್ದುಪಡಿ ಸೂಚನೆ ಮಾಡಿದ್ದೀರಿ. ಮೊದಲು ಕ್ವಾಲಿಫಿಕೇಷನ್ ಅಂಡ್ ಕಂಡೀಷನ್ ಆಫ್ ಸರ್ವೀಸ್ ಎಂದು ಇತ್ತು. ಅದಕ್ಕೆ ಬದಲಾಗಿ 'ರಿಕ್ರೂಟ್‌ಮೆಂಟ್' ಎಂಬ ಶಬ್ದವನ್ನು ಹಾಕಿದ್ದೀರಿ. ಈ ವಿಷಯದ ಮೇಲೆ ಹೆಚ್ಚು ವೇಳೆ ತೆಗೆದುಕೊಳ್ಳಲಿಕ್ಕೆ ಬಯಸುತ್ತೇನೆ. ಸರ್ಕಾರದವರು ಈ ಕಡೆಗೆ ಹೆಚ್ಚು ಲಕ್ಷ್ಯ ಕೊಡಬೇಕು. ಯಾವುದೇ ಸಹಕಾರ ಸಂಘದ ನೌಕರಿ ವರ್ಗದವರನ್ನು ನೇಮಕ ಮಾಡಬೇಕಾದರೆ ಯಾವ ಪರಿಸ್ಥಿತಿಯಲ್ಲಿ ಎಂಥವರನ್ನು ನೇಮಕ ಮಾಡಬೇಕು, ಯಾರು ನೇಮಕ ಮಾಡಬೇಕು ? ಒಬ್ಬ ಸಿಪಾಯಿಯಿಂದ ಹಿಡಿದು ಮ್ಯಾನೇಜರ್‌ವರೆಗೆ ನೌಕರನ್ನು ನೇಮಿಸುವ ಸಲುವಾಗಿ ತನ್ನ ಕೈಯಲ್ಲಿ ಅಧಿಕಾರವನ್ನು ಪಡೆದುಕೊಳ್ಳಲಿಕ್ಕೆ ನಿಯಮಗಳನ್ನು ಮಾಡಲಿಕ್ಕೆ ಈ ಕಲಂ ಪ್ರಕಾರ ಸರ್ಕಾರಕ್ಕೆ ಅಧಿಕಾರ ಬರುತ್ತದೆ. ಈ ತಿದ್ದುಪಡಿ ಹಿನ್ನೆಲೆ ಏನಿದೆ ಅಥವಾ ಇದನ್ನು ಏಕೆ ತಂದಿದ್ದಾರೆ ಎನ್ನುವಂತಹದನ್ನು ಹೇಳಲಿಕ್ಕೆ ಬರುವುದಿಲ್ಲ. ಆದರೆ ಇದರ ವ್ಯಾಪಕತೆ ಮಾತ್ರ ಬಹಳ ದೊಡ್ಡದಾಗಿದೆ. ಇದರ ಪ್ರಕಾರ ಸರ್ಕಾರದವರಿಗೆ ಇವತ್ತಲ್ಲ ಹತ್ತು ವರ್ಷದ ಮೇಲೆ ಮಾಡಬೇಕು ಎಂದು ಇಚ್ಛೆ ಮಾಡಿದರೂ ಕೂಡ ಶಿಪಾಯಿಯಿಂದ ಹಿಡಿದು ಮ್ಯಾನೇಜರ್‌ವರೆಗೂ ನೌಕರರನ್ನು ಸರ್ಕಾರದವರೇ ನೇಮಿಸಬಹುದು ಅಥವಾ ಸರ್ಕಾರದ ಯಾವುದಾದರೂ ಅಧಿಕಾರಿ ನೇಮಿಸಬಹುದು. ವಗೈರಾ ವಗೈರಿ ಸಹಿತ ಸರ್ಕಾರಕ್ಕೆ ಅಧಿಕಾರ ಇರತಕ್ಕದ್ದು. ಸೊಸೈಟಿಯಲ್ಲಿರತಕ್ಕ ಸೊಸೈಟಿ ನೌಕರರ ಮೇಲೆ ಸೊಸೈಟಿಯಲ್ಲಿ ಯಾವ ತೆರನಾದ ಸಂಬಂಧವೂ ಇಲ್ಲದವರೂ ಸಹಿತ ಅಧಿಕಾರ ಮಾಡಬಹುದು ಎನ್ನುವಷ್ಟು ವ್ಯಾಪ್ತಿ ಇದರಲ್ಲಿ ಉಂಟು. ಸರ್ಕಾರ ಇದನ್ನು ಮಾಡಲಿಕ್ಕೆ ಹೋಗುತ್ತದೆ ಎಂದು ನಾನು ಹೇಳುವುದಿಲ್ಲ. ಆದರೆ ಇವತ್ತು ಈ ತಿದ್ದುಪಡಿ ಏನಿದೆ ಇದರ ಅರ್ಥ ಮಾಡಲಿಕ್ಕೆ ಹತ್ತಿದರೆ ಇಷ್ಟೆಲ್ಲಾ ಅಧಿಕಾರವನ್ನು ಸರ್ಕಾರದವರಿಗೆ ಕೊಡಲಿಕ್ಕೆ ಬರುತ್ತದೆ.

ಕ್ವಾಲಿಫಿಕೇಷನ್ ಎಷ್ಟುಮಟ್ಟಿಗೆ ಎನ್ನುವಂತಹದು ಇದರಲ್ಲಿ ಇಲ್ಲ. ಇದರಲ್ಲಿ ನನಗೆ ತಿಳಿದ ಮಟ್ಟಿಗೆ ಯಾವುದೇ ಒಂದು ಸಹಕಾರ ಸಂಘದಲ್ಲಿನ ನೌಕರರಿಗೆ ಪಗಾರ ಏನಿರಬೇಕು, ಸ್ಕೇಲ್ ಏನಿರಬೇಕು, ಪೆನ್‌ಷನ್ ಗ್ರ್ಯಾಚ್ಯುಯಿಟಿ ಏನಿರಬೇಕು ಎಂಬ ಅನೇಕ ವಿಷಯಗಳನ್ನು ಗೊತ್ತು ಮಾಡಲು ಒಂದು ಪೇ ಕಮಿಷನ್ ಅಂತ ನೇಮಕ ಮಾಡಿ ಅವರಿಗೆ ಏನು ಕೊಡಬಹುದು ಎಂಬುದಕ್ಕೆ ಈ ತಿದ್ದುಪಡಿ ಸಂಬಂಧಪಡಬಹುದು ಎಂದು ನಾನು ತಿಳಿದುಕೊಳ್ಳುತ್ತೇನೆ. ಈ ವಿಷಯದಲ್ಲಿ ನಾನು ಕಳೆದ 10-20 ವರ್ಷಗಳಿಂದ ಸಹಕಾರ ಕ್ಷೇತ್ರದಲ್ಲಿ ಕೆಲಸ ಮಾಡಿದವನಾದ್ದರಿಂದ ನನಗೆ ಬಂದಂಥ ಪ್ರತಿಕ್ರಿಯೆಯನ್ನು ತಮ್ಮ ಮುಂದೆ ಇಡುತ್ತೇನೆ. ಇವತ್ತಿನ ದಿವಸ ಸರ್ಕಾರದವರು ಒಂದು ನಿಯಮ ಮಾಡಬಹುದು. ಮ್ಯಾನೇಜರ್ ಅವರನ್ನು ನೇಮಕ ಮಾಡುವಾಗ ಡೆಪ್ಯುಟಿ ರಿಜಿಸ್ಟ್ರಾರ್ ಅವರು ಅಥವಾ ರಿಜಿಸ್ಟ್ರಾರ್ ಅವರು ನೇಮಕ ಮಾಡಬಹುದು ಅಥವಾ ಸೊಸೈಟಿಗೆ ಸಂಬಂಧವಿಲ್ಲದಂಥ

ಪಿ. ಎಸ್. ಸಿ. ಅವರು ಅಥವಾ ಇನ್ನಾರಾದರೂ ನೇಮಿಸಬಹುದು. ನೇಮಿಸುವ ಅಧಿಕಾರ ಯಾರದ್ದೋ ಅವರೇ ಡಿಸಿಪ್ಲಿನರಿ ಆಕ್ಷನ್ ಕೂಡ ತೆಗೆದುಕೊಳ್ಳಬೇಕಾಗುತ್ತದೆ. ವರ್ಗಾವರ್ಗಿ ಮಾಡಬೇಕಾದರೂ ಸಹಿತ ಅವರೇ ಮಾಡಬೇಕಾಗುತ್ತದೆ. ಎಂದ ಮೇಲೆ ಇದು ಎಲ್ಲಿಗೆ ಹೋಗಬಹುದು ? ಸರ್ಕಾರದವರು ಪ್ರತಿಯೊಂದು ಸಹಕಾರ ಸಂಘದೊಳಗಿನ ನೌಕರರನ್ನು ನೇಮಿಸುವ ಮತ್ತು ವರ್ಗಾವರ್ಗಿ ಮಾಡುವ ಅಧಿಕಾರವನ್ನು ತಮ್ಮ ಕೈಯಲ್ಲಿ ತೆಗೆದುಕೊಂಡರೆ ಅದರ ಪರಿಣಾಮ ಏನಾಗಬಹುದು ಎಂಬುದನ್ನು ನಾವು ಪರಿಶೀಲನೆ ಮಾಡಬೇಕು. ಇವತ್ತಿನ ದಿವಸ ಸಹಕಾರ ಸಂಘಗಳು ಹೇಗೆ ನಡೆಯುತ್ತಿವೆ, ಏಕೆ ನಡೆಯುತ್ತಿವೆ ಎಂಬುದನ್ನೂ ಸಹಿತ ಲಕ್ಷ್ಯದಲ್ಲಿ ಇಟ್ಟುಕೊಳ್ಳಬೇಕು. ಇವತ್ತು ಹಳ್ಳಿಯಲ್ಲಿರತಕ್ಕ ಪ್ರತಿಯೊಂದು ಸಹಕಾರ ಸಂಘದಲ್ಲೂ ಕೂಡ ಅವರೇ ಸಾಲ ಕೊಡಬೇಕು. ಅವರಿಗೆ 100ಕ್ಕೆ ಏಳೂವರೆಯಂತೆ ಬಡ್ಡಿ ಬರುತ್ತದೆ. ಏಳೂವರೆ ಪರ್ಸೆಂಟ್ ಬಡ್ಡಿ ಬರಬೇಕಾದರೆ ಹಳ್ಳಿಯವನ ಮಟ್ಟ ಅವನ ಹಿನ್ನೆಲೆ ಎಷ್ಟಿದೆ ಎಂಬುದನ್ನು ಪರಿಶೀಲನೆ ಮಾಡಬೇಕಾಗುತ್ತದೆ. ರಿಸರ್ವ್ ಬ್ಯಾಂಕ್‌ನವರು ನೂರಕ್ಕೆ ಎರಡೂವರೆಯಂತೆ ಕೊಡುತ್ತಾರೆ. ಸ್ವಲ್ಪ ಹೆಚ್ಚು ಕಡಮೆ ಇರಬಹುದು. ಸಹಕಾರ ಸಂಘಗಳಿಗೆ ಸ್ಟ್ಯಾಂಪ್ ಡ್ಯೂಟಿ ಮೊದಲಾದ ಅನೇಕ ರೀತಿಯ ವಿನಾಯಿತಿಗಳನ್ನು ಕೊಡುತ್ತಿದ್ದೇವೆ. ಇದನ್ನು ಗಮನಿಸಬೇಕು. ಇಷ್ಟೇ ಅಲ್ಲ, ಪ್ರತಿ ವರ್ಷ ಸೊಸೈಟಿ ಸಿಬ್ಬಂದಿ ಖರ್ಚೆಷ್ಟು ಎಂದು ಲೆಕ್ಕಹಾಕಿದರೆ ಸುಮಾರು 70 ಲಕ್ಷ ರೂಪಾಯಿವರೆಗೆ ಬರಬಹುದು. ಶೇಕಡ ಏಳೂವರೆ ಬಡ್ಡಿ ಪ್ರಕಾರ 70 ಲಕ್ಷ ರೂಪಾಯಿ ಸೊಸೈಟಿಗಳಿಗೆ ದೊರಕಿಸಿಕೊಡಬಹುದು.

2-00 P.M.

ಇದಲ್ಲದೆ ಶೇಕಡ ಎರಡೂವರೆಯಂತೆ ರಿಸರ್ವ್ ಬ್ಯಾಂಕಿನಿಂದ ಸಾಲ ತೆಗೆದುಕೊಳ್ಳುತ್ತಿದ್ದೇವೆ. ಇದು ಚಿರಕಾಲ ನಡೆಯುವುದಿಲ್ಲ. ಇದು ಇಂಟರಿಂ ಮೆಷರ್. ಆದಷ್ಟು ಕಡಮೆ ವೇಳೆಯಲ್ಲಿ ಸೊಸೈಟಿಗಳು ತಮ್ಮ ಕಾಲಮೇಲೆ ತಾವು ನಿಲ್ಲುವಂತಾಗಬೇಕು. ಸೂರ್ಯಚಂದ್ರರಿರುವವರೆಗೆ ರಿಸರ್ವ್ ಬ್ಯಾಂಕು ಕೊಡುವುದಿಲ್ಲ. ಈ ದಿವಸ ಬ್ಯಾಂಕು ಕೊಡುವುದನ್ನು ತೆಗೆದುಕೊಂಡು ಏಳೂವರೆ ಪ್ರಕಾರ ಕೊಟ್ಟರೆ ಬಡ್ಡಿ ಹೆಚ್ಚಾಗುತ್ತದೆ. 70 ಲಕ್ಷ ಖರ್ಚು ಮಾಡುವುದರ ಮೇಲೂ ಎರಡೂವರೆ ಬಡ್ಡಿ ಬೀಳುತ್ತದೆ. ಇದೆಲ್ಲಾ ಕೂಡಿಸಿದರೆ ಸಹಕಾರ ಸಂಘಗಳಿಗೆ ಸರ್ಕಾರ ಖರ್ಚು ಮಾಡುವುದು ಸ್ಟ್ಯಾಂಪ್ ಡ್ಯೂಟಿ ವಿನಾಯಿತಿ ಮುಂತಾದ್ದನ್ನೆಲ್ಲಾ ವಿಚಾರ ಮಾಡಿದರೆ ಶೇಕಡ 11-12 ರಂತೆ ಬಡ್ಡಿ ಬಿದ್ದಂತಾಗುತ್ತದೆ. ಈ ದಿವಸ ಸೊಸೈಟಿ ಮ್ಯಾನೇಜರರ ನೇಮಕ, ವರ್ಗಾವರ್ಗಿ ವಹಿಸಿಕೊಂಡ ಮೇಲೆ, ಇಂಥಾದ್ದನ್ನೆಲ್ಲಾ ವಹಿಸಿಕೊಂಡ ಮೇಲೆ ನಾಳೆ ಪ್ರತಿಯೊಬ್ಬ ಸೊಸೈಟಿ ನೌಕರನನ್ನೂ ನೇಮಕ ಮಾಡಬೇಕಾಗಿ ಬರಬಹುದು. ಸಹಕಾರ ಸಂಘಗಳಿಗೆ ನನಗೆ ತಿಳಿದ ಹಾಗೆ ಈ ವಿಚಾರ ಮಾರಕವಾದುದು. ಒಂದು ಹುದ್ದೆಗೆ ಈ ದಿವಸ ಒಂದು ವ್ಯವಸ್ಥೆ ಮಾಡಿದರೆ ಮುಂದೆ ಅದು ಮುಂದುವರೆಯುತ್ತದೆ. ಮ್ಯಾನೇಜರ್ ಆಗಲಿ, ಬೇರೆ ನೌಕರರನ್ನಾಗಲಿ ನೇಮಿಸುವುದು, ಅವರ ಬಡ್ತಿ, ವರ್ಗಾವರ್ಗಿ ವಿಚಾರಗಳಲ್ಲಿ ಕೈಹಾಕುವುದು ಮುಂತಾದ್ದನ್ನು ಮಾಡುವುದಾಗಲಿ ಇಂದು ಕೈಕೊಂಡರೆ ಆಮೇಲೆ ಕ್ರಮೇಣ ಸಹಕಾರ ಸಂಘಗಳಲ್ಲಿ ಆಡಳಿತಗಾರರೆಷ್ಟು ಮಂದಿ ಇದ್ದಾರೆ ಅವರ ವಿಚಾರದಲ್ಲೆಲ್ಲಾ ಕೈಹಾಕಬೇಕಾಗುತ್ತದೆ. ನೌಕರರಿಗೆ ಎಸ್.ಎಸ್.ಎಲ್.ಸಿ. ಆಗಿರಬೇಕು, ಕೆಲವರು ಪದವೀಧರರಾಗಿರಬೇಕು ಎಂದು ಸರ್ಕಾರದಲ್ಲಿರುವಂತೆ ಗೊತ್ತು ಮಾಡಬೇಕಾಗಬಹುದು. ಹೀಗೆಲ್ಲ ಮಾಡುವುದಾದರೆ ಈಗ ಒಬ್ಬ ರಿಜಿಸ್ಟ್ರಾರಿದ್ದರೆ ಮುಂದೆ 4 ಜನ ಬೇಕಾಗಬಹುದು. ಅವರನ್ನು ಬೇರೆ ಬೇರೆ ಕಡೆಗಳಿಗೆ ವರ್ಗ ಮಾಡಬೇಕಾಗಬಹುದು. ಈಗ 70 ಲಕ್ಷ ಖರ್ಚು ಮಾಡುವುದು ನಾಳೆ 4 ಕೋಟಿ ರೂಪಾಯಿಗಳಾಗಬಹುದು. ಇದೊಂದು ದೃಷ್ಟಿ. ಸೊಸೈಟಿಗಳ ನೌಕರರ ನೇಮಕ, ವರ್ಗಾವರ್ಗಿ ಮುಂತಾದಕ್ಕೆ ನೀವು ಕೈಹಾಕಿದರೆ ನಿಮ್ಮ ತಲೆ ತಿನ್ನುತ್ತದೆ. ಆಡಳಿತ ವೆಚ್ಚ ಹೆಚ್ಚಾಗುತ್ತದೆ. ಈಗ ಕೊಡುವಂತೆ ಶೇಕಡ ಏಳೂವರೆ ಬಡ್ಡಿ ಪ್ರಕಾರ ಸಾಲ ಕೊಡಲು ಸಾಧ್ಯವಾಗುವುದಿಲ್ಲ. ಬಡ್ಡಿ ದರ ಹೆಚ್ಚಾಗುತ್ತದೆ. ನೌಕರರು ಪ್ರತಿ ವರ್ಷ ತೊಂದರೆ ಕೊಡುತ್ತಾರೆ. ಬೆಲೆಗಳು ಬಹಳ ದುಬಾರಿಯಾಗಿವೆ, ಹೆಚ್ಚು ವೇತನ ಕೊಡಬೇಕು, ಭತ್ಯ ಕೊಡಬೇಕು ಎಂದು ಕೇಳುತ್ತಾರೆ. ಇವತ್ತು ಮಾರ್ಕೆಟಿಂಗ್ ಸೊಸೈಟಿಯಾಗಲಿ ಅಥವಾ ಯಾವುದೇ ಸಾಲ ಕೊಡುವ ಸಂಸ್ಥೆಯಾಗಲಿ ಅವುಗಳಿಗೆ ಪ್ರೈವೇಟ್ ಕಾಂಪಿಟಿಷನ್ ಇದೆಯೆ ಎಂಬುದನ್ನು ಗಮನಿಸಬೇಕು. ವರ್ತಕ ಇದ್ದಾನೆ, ಹಳ್ಳಿಗಳಲ್ಲಿ ಸಾಲ ಕೊಡುವವರು ಇದ್ದಾರೆ. ಬಡ್ಡಿ ದರ ಹೆಚ್ಚುಮಾಡಿದರೆ ಜನರು ಸೊಸೈಟಿಗೆ ಬರದೆ ಖಾಸಗಿಯವರ ಬಳಿ ಹೋಗಬಹುದು. ಕ್ರಮೇಣ ಸೊಸೈಟಿಗಳಲ್ಲಿ ಬಡ್ಡಿದರ ಬೆಳೆಯುತ್ತಾ ಹೋದರೆ ನಾಳೆ ಜನರು ಸೊಸೈಟಿಗಳಲ್ಲಿ ಸಾಲ ತೆಗೆದುಕೊಳ್ಳದಿರಬಹುದು. ಈಗಲೂ ಕೂಡ ಸೊಸೈಟಿಯಲ್ಲಿ 100 ರೂಪಾಯಿ ಸಾಲ ತೆಗೆದುಕೊಂಡರೆ ಬಡ್ಡಿ 10 ರೂಪಾಯಿ ಹಿಡಿದುಕೊಂಡು 90 ರೂಪಾಯಿ ಮಾತ್ರ ಕೊಡುತ್ತಾರೆಂದು ಅದಕ್ಕೆ ಶೇಕಡ ಏಳೂವರೆ ಬಡ್ಡಿ ಕೊಡಬೇಕೆಂದು ವರ್ತಕರಲ್ಲಿಗೆ ಹೋಗು

(ಶ್ರೀ ಎಂ. ಆರ್. ಪಾಟೀಲ್)

ವವರಿದ್ದಾರೆ. ನಾಳೆ ಕಾಯಿದೆ ಮಾಡುವವರಿಗೆ ವಿಚಾರ ಗೊತ್ತಾಗಲಿ ಎಂದು ನನ್ನ ಅಭಿಪ್ರಾಯ ಹೇಳುತ್ತಿದ್ದೇನೆ.

ಎರಡನೆಯದು ಎಲ್ಲಿಯವರೆಗೆ ನೀವು ಸೊಸೈಟಿಗಳ ಕಾರ್ಯಕ್ಷೇತ್ರದಲ್ಲಿ ಕ್ರಮೇಣ ಕೈಹಾಕುತ್ತೀರೋ ಅಲ್ಲಿಯವರೆಗೆ ಕಾರ್ಯಕರ್ತರ ಮತ್ತು ಜನರ ಉತ್ಸಾಹ ಕಡಮೆಯಾಗುತ್ತಾ ಬರುತ್ತದೆ. ಸೊಸೈಟಿಗಳ ಆಡಳಿತದಲ್ಲಿ ನ್ಯೂನತೆ ಇದೆಯೆಂಬುದು ನನಗೆ ಗೊತ್ತಿದೆ. ಹಣ ದುರ್ವಿನಿಯೋಗವಾಗುತ್ತಿದೆ, ತಿಂದುಹಾಕುತ್ತಿದ್ದಾರೆ. ಅದನ್ನು ತಡೆಗಟ್ಟುವುದಕ್ಕೆ ಈ ವಿಧೇಯಕವನ್ನು ತರುತ್ತಿರಬಹುದು. ಆದರೆ ಈಗ ತಂದಿರುವ ವಿಧೇಯಕದಲ್ಲಿರುವ ಪ್ರಾವಿಷನ್ಸ್ ಅನುಕೂಲವಾಗಿಲ್ಲ. ಇದರಿಂದ ಎಲ್ಲರಿಗೂ ಉತ್ಸಾಹ ಕಡಮೆಯಾಗುತ್ತದೆ. ಈ ದಿವಸ ಬ್ಯಾಂಕುಗಳಿವೆ, ಅವಕ್ಕೆಲ್ಲಾ ಸರ್ಕಾರ ಮ್ಯಾನೇಜರುಗಳನ್ನು ನೇಮಿಸಿದರೆ ಅವು ನಡೆಯುವುದು ಕಷ್ಟವಾಗುತ್ತದೆ. ನೇಮಿಸುವವರೊಬ್ಬರು, ಅವರ ಮೇಲೆ ಕ್ರಮ ತೆಗೆದುಕೊಳ್ಳುವವರೊಬ್ಬರು ಹೀಗಾದರೆ ಸೊಸೈಟಿಗಳು ಕೆಲಸಮಾಡುವುದು ಕಷ್ಟವಾಗುತ್ತದೆ. ಮ್ಯಾನೇಜರು ಹಣ ಸಂಪಾದನೆಗಾಗಿ ತಪ್ಪು ಮಾರ್ಗ ಹಿಡಿದಿದ್ದಾರೆಂದು ತಿಳಿದರೆ ಅವರಮೇಲೆ ಕ್ರಮ ತೆಗೆದುಕೊಳ್ಳಬೇಕಾದರೆ ಅದು ರಿಜಿಸ್ಟ್ರಾರರಿಗೆ ಹೋಗಬೇಕು. ಇದು ರೆಡ್ ಟೇಪಿಸಂ. ಮನುಷ್ಯ ಇದರಿಂದ ಬೇಸತ್ತು ಬಿಡುತ್ತಾನೆ. ಸೊಸೈಟಿಗೆ ತನ್ನ ನೌಕರರಮೇಲೆ ಕ್ರಮ ಕೈಕೊಳ್ಳಲು ಅಧಿಕಾರ ಕೊಡದಿದ್ದರೆ ಜನರಲ್ ಬಾಡಿಗೆ ಅಧಿಕಾರವಿರದಿದ್ದರೆ ಅದಕ್ಕೆ ಉತ್ಸಾಹ ಕಡಮೆಯಾಗುತ್ತದೆ. ಇದರಿಂದ ಮ್ಯಾನೇಜಿಂಗ್ ಕಮಿಟಿ ಉತ್ಸಾಹ ಮತ್ತು ಶಕ್ತಿಯನ್ನು ಉಪಯೋಗ ಮಾಡಿಕೊಳ್ಳುವುದಕ್ಕಾಗುವುದಿಲ್ಲ. ಮ್ಯಾನೇಜಿಂಗ್ ಕಮಿಟಿ, ಜನರಲ್ ಬಾಡಿ, ಸುಪ್ರೀಂ ಬಾಡಿ, ಅದಕ್ಕೇ ಈ ಅಧಿಕಾರವಿರಬೇಕು. ಅನೇಕ ಸಂಘ ಸಂಸ್ಥೆಗಳ ಆಡಳಿತ ಕೆಡುತ್ತಿದೆ, ಅವನ್ನು ಸುಧಾರಿಸಬೇಕು, ಅದಕ್ಕೆ ಅವಕಾಶವಿರಬೇಕು ಎಂದು ಈ ಕಾನೂನನ್ನು ಮಾಡುತ್ತಿದ್ದೀರಿ. ಇದಕ್ಕೆ ಒಂದು ಉದಾಹರಣೆ ಹೇಳುತ್ತೇನೆ. ನಾನು ಶಾಲೆಗೆ ಹೋಗುತ್ತಿದ್ದಾಗ ಅಲ್ಲಿ ಇಬ್ಬರು ಗೆಳೆಯರಿದ್ದರು. ಅವರಿಗೆ ತಂದೆ ಇದ್ದರು, ತಾಯಿ ಇರಲಿಲ್ಲ. ಅವರಲ್ಲಿ ಒಬ್ಬ ಒಳ್ಳೆಯವನು; ಇನ್ನೊಬ್ಬ ಉಡಾಳ. ಉಡಾಳ ರೈಲುವೆ ನೌಕರ. ಅವನು ಒಂದೊಂದು ದಿನ ಕೀಲಿ ಹಾಕಿಕೊಂಡು ಹೋಗಿಬಿಡುತ್ತಿದ್ದ. ಇದನ್ನು ಸಹಿಸದೆ ಒಂದು ದಿನ ಒಳ್ಳೆಯ ಹುಡುಗ ಉರುಲು ಹಾಕಿಕೊಂಡ. ಹಾಗೆ ಈ ಮಸೂದೆ ಬಂದರೆ ಜನರಿಗೆ ಉತ್ಸಾಹ ಕಡಮೆಯಾಗಿ ಸೊಸೈಟಿಗಳ ಪ್ರಗತಿಗೆ ಅಡ್ಡಿಯಾಗುತ್ತದೆ. ಇವತ್ತು ಇಡೀ ಸಂಸ್ಥಾನದ ತುಂಬಾ ಸೊಸೈಟಿಗಳನ್ನು ಸ್ಥಾಪಿಸಬೇಕೆಂದಿರುವಾಗ ಈ ಮಸೂದೆ ಈಗಿರುವಂತೆ ಜಾರಿಗೆ ಬಂದರೆ ಜನರ ಉತ್ಸಾಹ ಕಡಮೆಯಾಗಿ ನಮ್ಮ ಆಕಾಂಕ್ಷೆ ಏನಿದೆ ಅದಕ್ಕೆ ಅಡ್ಡಿ ಬರುತ್ತದೆ. ಆದುದರಿಂದ ವಿನಂತಿ ಮಾಡುವುದು ಇದರಿಂದ ಸೊಸೈಟಿಗಳಿಗೆ ಅಡಚಣೆ ಉಂಟು, ಅವುಗಳು ಸರಿಯಾಗಿ ನಡೆಯುವಂತೆ ಮಾಡುವುದಕ್ಕೆ ಸರಿಯಾದ ದಾರಿ ಇದಲ್ಲ. ಸಹಕಾರ ಸಂಘಗಳಲ್ಲಿ ಆಡಳಿತ ವರ್ಗದವರನ್ನು ನೇಮಕ ಮಾಡಬೇಕು ಎನ್ನುವಂತೆ ಮಾಡುತ್ತ ಹೋದರೆ ಅದು ಸರಿಹೋಗುವುದಿಲ್ಲ. ಆದರಿಂದೇನಾಗುತ್ತದೆ ಎಂದರೆ ಮ್ಯಾನೇಜರಾಗಿ ನೇಮಕಮಾಡಲ್ಪಟ್ಟವರು ಅಲ್ಲಿನ ಜನಕ್ಕೆ ಸರಿಹೋಗುವುದಿಲ್ಲ. ಅವರು ತಮಗೆ ಬೇಕಾದವರನ್ನು ಅಲ್ಲಿ ಪುನಃ ತರಲಿಕ್ಕೆ ಹೋಗುತ್ತಾರೆ. ಇದರಿಂದ ಇಲ್ಲದ ಕಷ್ಟಗಳು ಬರುವುದಕ್ಕೆ ಅವಕಾಶವಾಗುತ್ತದೆ. ಈಗ ನನಗೂ ಗೊತ್ತಿರುವ ಹಾಗೆ ನಾನು ಒಂದು ಸಹಕಾರ ಸಂಘದಲ್ಲಿ ಕೆಲಸಮಾಡುತ್ತಿರುವಾಗ ಅಲ್ಲಿಗೆ ನೀವು ಒಬ್ಬರನ್ನು ಆಡಳಿತದ ಪರವಾಗಿ ಮ್ಯಾನೇಜರು ಎಂದು ನೇಮಿಸಿದರೆ ಅವರು ನನಗೆ ಒಪ್ಪಿಗೆಯಾಗುವಂತೆ ಕೆಲಸ ಮಾಡುವುದಿಲ್ಲ. ಆದ್ದರಿಂದ ಇಂತಹ ಅಧಿಕಾರಿಗಳನ್ನು ಇಲ್ಲಿಗೆ ತರಲು ಹೋಗಬೇಡಿ ಎಂದು ನಾನು ಸೂಚಿಸುತ್ತಿದ್ದೇನೆ. ಯಾವಾಗಲೂ ಒಂದು ಕಾಯಿದೆ ಮಾಡುವಾಗ ಸರ್ವಸಮ್ಮತವಾದಂತಹ ಒಂದು ಕಾಯಿದೆಯನ್ನು ಮಾಡಬೇಕು. ಎಲ್ಲರಿಗೂ ಬೇಡಿ ಹಾಕುವಂತಹ ಕೆಲಸವನ್ನು ನಾವು ಮಾಡುವುದು ಬೇಡ. ಈಗಾಗಲೇ ಬೇಕಾದಷ್ಟು ಕಾಯಿದೆಗಳನ್ನು ಮಾಡಲಾಗಿದೆ. ಇರುವ ಕಾನೂನುಗಳ ಪ್ರಕಾರ ಅಸಿಸ್ಟೆಂಟ್ ರಿಜಿಸ್ಟ್ರಾರ್ ಆದವರು, ಡೆಪ್ಯುಟೀ ರಿಜಿಸ್ಟ್ರಾರ್ ಆದವರು ಸೊಸೈಟಿಗಳಲ್ಲಿರುವ ಮ್ಯಾನೇಜಿಂಗ್ ಕಮಿಟಿಯವರು ಮಾಡಿರುವುದು ಕಾಯಿದೆಗೆ ವಿರೋಧವಾಗಿದ್ದರೆ ಅದನ್ನು ಸೂಪರ್‌ಸೀಡ್ ಮಾಡಲು ಅವಕಾಶವಿದೆ. ಹೀಗಿರುವಾಗ ಸೊಸೈಟಿಗಳ ವ್ಯವಹಾರವನ್ನು ನೋಡಲು ಒಬ್ಬ ಮ್ಯಾನೇಜರೆಂದು ಅಲ್ಲಿಗೆ ತಂದರೆ ಸರಿಯಾಗಿರುವುದಿಲ್ಲ. ಸಾರ್ವಜನಿಕ ಕೆಲಸ ಮಾಡುವುದರಲ್ಲಿ ಸಾಮಾನ್ಯ ಮನುಷ್ಯನಿಗೆ ಸರಕಾರಿ ನೌಕರರಿಗೆ ಎಷ್ಟು ಕೆಲಸವಿದೆಯೋ ಅದಕ್ಕೆರಡರಷ್ಟು ಕೆಲಸಗಳು ಅವರಿಗೂ ಇರುತ್ತವೆ, ಆದರೆ ಮನುಷ್ಯನ ಸ್ವಭಾವ ಏನು ಎಂದರೆ ಯಾವಾಗಲೂ ತಮಗೆ ಬೇಕಾದವರನ್ನೇ ಆಡಳಿತದಲ್ಲೂ. ತರಬೇಕೆನ್ನುವ ಆಲೋಚನೆ ಬರುತ್ತದೆ. ಆದ್ದರಿಂದ ಆಡಳಿತದವರನ್ನು ಇದರಲ್ಲಿ ತರಲು ಹೋಗಬೇಡಿ. ಯಾವಾಗಲೂ ಸಹಕಾರ

ಸಂಘಗಳು ತನ್ನ ಕಾಲಿನ ಮೇಲೆ ನಿಲ್ಲುವಂತಾಗಬೇಕೆಂದು ಹೇಳುತ್ತಿರುವಾಗ ಇದರಲ್ಲಿ ಆಡಳಿತ ದವರನ್ನೂ ತಂದರೆ ಅಂತಹ ಸಹಕಾರ ಸಂಘಗಳು ಚೆನ್ನಾಗಿ ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ನಮಗೆಲ್ಲಾ ಗೊತ್ತಿರುವ ಹಾಗೆ A friend, guide, as a Philosopher, ಎನ್ನುವಂತೆ ಸರಕಾರದವರು ಇರಬೇಕು. ಆಡಳಿತದವರನ್ನೇ ಅಲ್ಲಿಗೆ ತರಲಿಕ್ಕೆ ಹೊರಟರೆ ಅವರ ಬಳಗದವರನ್ನೇ ಹೆಚ್ಚು ಹೆಚ್ಚಾಗಿ ತರಲು ಅವಕಾಶವಾಗುತ್ತದೆ. ಇವೊತ್ತು ಮ್ಯಾನೇಜರುಗಳನ್ನು ನೇಮಕ ಮಾಡುವುದಕ್ಕೆ ಕಾಯಿದೆ ತರಬಹುದು. ಮುಂದೆ ಅಕೌಂಟೆಂಟರವರನ್ನೂ ನೇಮಕ ಮಾಡಬೇಕೆಂದು ಪುನಃ ಕಾಯಿದೆ ತರಬಹುದು. ಒಮ್ಮೆ ಆಡಳಿತದವರನ್ನು ಇದರಲ್ಲಿ ತರಲಿಕ್ಕೆ ಪ್ರಾರಂಭ ಮಾಡಿದರೆ ಆದರಿಂದ ಸಹಕಾರ ಸಂಘಗಳ ಕಲ್ಯಾಣವಾಗುವುದಿಲ್ಲ. ಈಗಿರುವ ಕಾನೂನಿನಂತೆ ಸಹಕಾರ ಸಂಘಗಳು ಆಗ ಶಕ್ಯದ್ದು ಮತ್ತು ರಿಜಿಸ್ಟ್ರಾರ್‌ವರು ಅದರಲ್ಲಿ ಏನಾದರೂ ತೊಂದರೆಗಳನ್ನು ಕಂಡು ಹಿಡಿದರೆ ಅವನ್ನು ಕಾಯಿದೆ ಮೂಲಕ ಸರಿಪಡಿಸಬಹುದು. ಎಲ್ಲಿಯವರೆಗೆ ತಮ್ಮ ತಮ್ಮ ಕೆಲಸಗಳನ್ನು ಸರಿಯಾಗಿ ಮಾಡುತ್ತಿದ್ದಾರೋ ಅಲ್ಲಿಯವರೆಗೆ ಆಡಳಿತದವರು ಬಂದಾಗಲೂ ಸರಿಯಾಗಿ ಕೆಲಸಗಳು ನಡೆಯಬಹುದು. ಆದರೆ ಕಾಯಿದೆಯೊಳಗೆ ನೌಕರಶಾಹಿ ಮನೋಭಾವನೆಯನ್ನು ತರುವುದಕ್ಕೆ ಹೊರಟರೆ ಇವು ಹೇಗೆ ಸುಸೂತ್ರವಾಗಿ ನಡೆಯಲು ಸಾಧ್ಯ ಎನ್ನುವುದನ್ನು ತಾವು ಸ್ವಲ್ಪ ಆಲೋಚನೆ ಮಾಡಬೇಕು. ಈಗ ಸೊಸೈಟಿಗಳಲ್ಲಿ ಲಕ್ಷಗಟ್ಟಲೆಯಷ್ಟು ಹಣ ಡಿಪಾಸಿಟ್ಟು ಆಗುತ್ತಿದೆ. ಇದು ಅಲ್ಲಿರುವ ಮ್ಯಾನೇಜಿಂಗ್ ಕಮಿಟಿಯವರ ಸಹಕಾರದಿಂದ ಚೆನ್ನಾಗಿ ನಡೆದುಕೊಂಡು ಬರುತ್ತಿದೆ. ಇನ್ನು ಮುಂದೆ ಅಲ್ಲಿಗೆ ಒಬ್ಬರು ಮ್ಯಾನೇಜರು ಎಂದು ತರುವುದಕ್ಕೆ ಹೊರಟರೆ ಆಗ ಸೊಸೈಟಿಗಳು ಅಷ್ಟು ಚೆನ್ನಾಗಿ ನಡೆಯುವುದಕ್ಕೆ ಆಗುವುದಿಲ್ಲ. ಜನರು ಮನಃಪೂರ್ವಕವಾಗಿ ಕೆಲಸಮಾಡುತಿದ್ದಾಗ ಅಲ್ಲಿ ಇಲ್ಲಿ ಏನಾದರೂ ಸ್ವಲ್ಪ ತಪ್ಪುಗಳು ಬಂದು ದುರುಪಯೋಗವಾದರೆ ಈಗ ಎಲ್ಲ ತಪ್ಪುಗಳು ಆಗುತ್ತಿವೆ ಎಂದು ಎಷ್ಟು ದಿವಸಗಳಿಂದ ತಮಗೆ ಕಂಡು ಬರುತ್ತಿದೆ ಎನ್ನುವುದನ್ನು ಸರಿಯಾಗಿ ಆಲೋಚನೆ ಮಾಡಿದಂತೆ ತೋರುತ್ತಿಲ್ಲ. ಪ್ರತಿಯೊಂದರಲ್ಲೂ ರೆಜಿಮೆಂಟಲ್ಲಾಗಿ ಮಾಡಬೇಕೆಂದು ಮಾಡುವುದು ತಪ್ಪು. ಇದಕ್ಕೆ ಬೇರೆ ದಾರಿಯುಂಟು. ಸೊಸೈಟಿಗಳಲ್ಲಿರುವ ಮ್ಯಾನೇಜಿಂಗ್ ಕಮಿಟಿ ಚೆನ್ನಾಗಿ ಕೆಲಸ ಮಾಡದೇ ಹೋದಲ್ಲಿ ಅದನ್ನು ಸೂಪರ್‌ಸೀಡ್ ಮಾಡಲಿಕ್ಕೆ ಅವಕಾಶವಿದೆ. ಹಾಗಿರು ವಾಗ ನೀವು ಎಲ್ಲ ಕಡೆಗಳಿಂದಲೂ ಹೆಡೆಮುರಿ ಕಟ್ಟಿ ಸಹಕಾರ ಸಂಘಗಳು ನಡೆಯುವಂತೆ ಮಾಡುವುದು ತಪ್ಪು. ಇಡೀ ಸಹಕಾರ ಸಂಘಗಳು ಚೆನ್ನಾಗಿ ಕೆಲಸಮಾಡುವ ದೃಷ್ಟಿಯಿಂದ ಈ ವಿಚಾರವನ್ನು ಇಲ್ಲಿ ಪುನಃ ಪುನಃ ಒತ್ತಿ ಹೇಳುತ್ತಿದ್ದೇನೆ. ಇದನ್ನು ಸರಕಾರ ಗಮನಕ್ಕೆ ತೆಗೆದು ಕೊಳ್ಳಬೇಕೆಂದು ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಕ್ತಾಯಮಾಡುತ್ತೇನೆ.

†ಶ್ರೀ ಸಿದ್ದಯ್ಯ ಕಾಶೀಮಠ್ (ಶಿರಹಟ್ಟಿ).—ಸ್ವಾಮೀ, ಈಗಾಗಲೇ ಮೈಸೂರು ಕೋ-ಅಪರೇಟೀವ್ ಆಕ್ಟು 1959ರ ಪ್ರಕಾರ ಸೊಸೈಟಿಗಳಲ್ಲಿ ಆಗಿರತಕ್ಕ ಲೋಪದೋಷಗಳ ಬಗ್ಗೆ ನನ್ನ ಸ್ನೇಹಿತರು ಸಾಕಷ್ಟು ಹೇಳಿದ್ದಾರೆ. ನಾನಾದರೂ ಸೊಸೈಟಿಗಳ ಆಡಳಿತದಲ್ಲಿ ಇಲ್ಲಿರುವ ಕ್ಲಾಜು 2ರ ಬಗ್ಗೆ ನನ್ನ ಸ್ವಂತ ಅನುಭವವನ್ನು ಇಲ್ಲಿ ಹೇಳಬೇಕಾಗಿದೆ. ನಾವು ಮೇಲಿಂದ ಮೇಲೆ ಸೊಸೈಟಿಗಳ ಆಡಳಿತ ಚೆನ್ನಾಗಿಲ್ಲ, ಲೋಪದೋಷಗಳು ಆದಷ್ಟು ಕಡಿಮೆಯಾಗಿರಬೇಕು ಎಂದು ಹೇಳುತ್ತಲೇ ಬರುತ್ತಿದ್ದೇವೆ. ಆದರೆ ಇಲ್ಲಿ ರಿಜಿಸ್ಟ್ರಾರ್, ಅಡಿಷನಲ್ ರಿಜಿಸ್ಟ್ರಾರ್, ಜಾಯಿಂಟ್ ರಿಜಿಸ್ಟ್ರಾರ್, ಡೆಪ್ಯೂಟೀ ರಿಜಿಸ್ಟ್ರಾರ್, ಹಾಗೂ ಅಸಿಸ್ಟೆಂಟ್ ರಿಜಿಸ್ಟ್ರಾರಗಳಿರಬೇಕೆಂದು ಮಾಡಲಾಗಿದೆ. ನಾನು ಹೇಳುವುದು ಅಸಿಸ್ಟೆಂಟ್ ರಿಜಿಸ್ಟ್ರಾರ್‌ಗಳಿಗೆ ಈಗಿರುವುದಕ್ಕಿಂತ ಹೆಚ್ಚಿನ ಅಧಿಕಾರ ವನ್ನು ಕೊಡಬೇಕೆಂದು ನಾನು ಸಲಹೆ ಮಾಡುತ್ತೇನೆ. ಮತ್ತು ಅವರಿಗೆ ಹೆಚ್ಚು ಜವಾಬ್ದಾರಿಗಳನ್ನು ಕೊಡಬೇಕು. ಈಗಾಗಲೇ ಹಾಕಿ ಕೊಂಡಿರುವ ಯೋಜನೆಯ ಪ್ರಕಾರ ಪ್ರತಿಯೊಂದು ಗ್ರೂಪ್ ಪಂಚಾಯತಿಗಳಿರುವ ಪ್ರದೇಶದಲ್ಲೂ ಒಂದೊಂದು ಸೊಸೈಟಿಯಿರಬೇಕೆಂದು ಮಾಡಿದ್ದೀರಿ. ಈಗ ರಾಜ್ಯದಲ್ಲಿ ಒಬ್ಬ ರಿಜಿಸ್ಟ್ರಾರ್‌ರವರು 500 ಸೊಸೈಟಿಗಳನ್ನು ಮಾಡಬೇಕೆಂದು ಮಾಡಿ ಅವರ ಕೈ ಕೆಳಗಿರುವ ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರಿಗೆ ಅಲ್ಲಿರುವ ಲೋಪದೋಷಗಳನ್ನು ಪರಿಶೀಲನೆ ಮಾಡಿ ಸರಿಪಡಿಸಲು ಸಾಧ್ಯವಾಗುತ್ತಿಲ್ಲ. ಆದರಿಂದ ಒಬ್ಬರು ಅಡಿಷನಲ್ ರಿಜಿಸ್ಟ್ರಾರ್ ಎಂದು ನೇಮಕ ಮಾಡಿ ಅವರಿಗೆ ಕೆಲವು ಕಾರ್ಯಗಳನ್ನು ನಿರ್ವಹಿಸುವಂತೆ ಮಾಡಿದರೆ ಚೆನ್ನಾಗಿರುತ್ತದೆಯೆಂದು ನಾನು ಇಲ್ಲಿ ಹೇಳಬಯಸುತ್ತೇನೆ. ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿಗಳು ಎಂದು ಈಗ ಮಾಡಿದ್ದಾರೆ. ಇವು ಕಾನೂನು ಪ್ರಕಾರ ನಡೆಯಬೇಕಾದರೆ ಇಲ್ಲಿಗೆ ಸರಕಾರದ ಪತಿಯಿಂದ ಒಬ್ಬ ಮ್ಯಾನೇಜರು ಎನ್ನುವವರಿದ್ದರೆ ಚೆನ್ನಾಗಿರುತ್ತದೆ. ನಾನು ಒಂದು ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿಯ ಚೇರ್ಮನ್ನರಾಗಿರುವುದರಿಂದ ನನಗೆ ಅಲ್ಲಿ ಆಗತಕ್ಕ ಲೋಪದೋಷಗಳೇನು ಎಂಬುದು ನನಗೆ ಗೊತ್ತು. ಇಲ್ಲಿಗೆ ಸರಕಾರದ ಕಡೆಯವರೊಬ್ಬರು ಮ್ಯಾನೇಜರು ಎಂದು ಇದ್ದಾರೆ. ಆದರೂ ಇಲ್ಲಿರುವ ಲೋಪದೋಷಗಳನ್ನು ಸರಿಪಡಿಸಲು ಸಾಧ್ಯವಾಗುತ್ತಿಲ್ಲ. ಆದುದರಿಂದ ಈಗ ಎಷ್ಟೋ ಜನ ಬಿ.ಕಾಂ. ಪಾಸಾದವರು ಸಿಗುತ್ತಾರೆ. ಅವರಿಗೆ ಸರಿಯಾಗಿ ಟ್ರೈನಿಂಗನ್ನು ಕೊಟ್ಟು ಪ್ರತಿಯೊಂದು

(ಶ್ರೀ ಸಿದ್ದಯ್ಯ ಕಾಶೀಮಠ್)

ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿಗಳಲ್ಲೂ ಮ್ಯಾನೇಜರುಗಳಾಗಿ ಮಾಡಿ ಅಲ್ಲಲ್ಲಿ ಅಸಿಸ್ಟೆಂಟ್ ರಿಜಿಸ್ಟ್ರಾರ್‌ಗಳನ್ನೂ ನೇಮಕ ಮಾಡುವುದೊಳ್ಳೆಯದು ಎಂದು ನನ್ನ ಸಲಹೆ.

ಇನ್ನೊಂದು 2 (ಬಿ) ನಲ್ಲಿ ಟ್ರಿಬ್ಯೂನಲ್ ಬಗ್ಗೆ ಹೇಳಿದ್ದಾರೆ. ಈಗಿರುವ ರೆವೆನ್ಯೂ ಅಪೆಲೇಟ್ ಟ್ರಿಬ್ಯೂನಲ್‌ಗೇ ಕೆಲಸವಿಲ್ಲದಿರುವಾಗ ಇಂತಹ ಪ್ರತ್ಯೇಕವಾದ ಟ್ರಿಬ್ಯೂನಲ್ ಎಂದು ಏಕೆ ಮಾಡಬೇಕು? ಇದಕ್ಕಾಗಿ ಸುಮಾರು ಒಂದು ಲಕ್ಷ, ಒಂಬತ್ತು ಸಾವಿರದಷ್ಟು ಏಕೆ ಖರ್ಚು ಮಾಡಬೇಕು. ಈಗಿರುವ ಅಡಿಷನಲ್ ರಿಜಿಸ್ಟ್ರಾರ್ ರವರಿಗೇ ಈ ಕೆಲಸವನ್ನು ವಹಿಸಿಬಿಟ್ಟರೆ ಅನುಕೂಲವಾಗುತ್ತದೆ ಮತ್ತು ಇಷ್ಟು ಖರ್ಚೂ ಉಳಿಯುತ್ತದೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ವಿವರಗಳನ್ನು ಕೊಡಬೇಕೆಂದು ಕೇಳುತ್ತೇನೆ.

ಇದರಲ್ಲಿ ಕಾನ್‌ಸ್ಟಿಟ್ಯೂಷನ್ನಿನಲ್ಲಿ ಒಬ್ಬರು ಡಿಸ್ಟ್ರಿಕ್ಟ್ ಜಡ್ಜ್ ಎಂದಿದೆ. ಇವರು ರಿಟೈರಾದ ಜಡ್ಜ್‌ಗಳೇ ಅಥವಾ ಈಗಿರುವವರಲ್ಲಿ ಒಬ್ಬರೇ ಹೇಗೆ ಎನ್ನುವ ವಿವರಗಳನ್ನು ಕೇಳಬಯಸುತ್ತೇನೆ. ಹಾಗೆ ಇದರಲ್ಲಿ ಒಬ್ಬರು ಜಾಯಿಂಟ್ ರಿಜಿಸ್ಟ್ರಾರ್‌ರವರು ಮತ್ತು ಒಬ್ಬರು ಅಡ್ವೋಕೇಟರು ಹತ್ತು ವರ್ಷ ಸರ್ವಿಸ್ಸಾಗಿರುವವರು ಇರಬೇಕೆಂದು ಇದರಲ್ಲಿ ಹೇಳಲಾಗಿದೆ.

ಅದಕ್ಕೆ ನಾನು ಹೇಳುತ್ತೇನೆ ಹಳ್ಳಿಗಳಲ್ಲಿ ಈ ಅಡ್ವೋಕೇಟರುಗಳಿರುವುದಕ್ಕೆ ಸಾಧ್ಯವಿಲ್ಲ. ಇಲ್ಲಿ ಇವರಿಗೆ 10 ವರ್ಷದ ಪ್ರಾಕ್ಟೀಸ್ ಇರಬೇಕೆಂದಿದೆ. ಇದನ್ನು ಸರ್ಕಾರದವರೇ ಬದಲಾವಣೆ ಮಾಡಬೇಕೆಂದು ಹೇಳುತ್ತೇನೆ. ಇನ್ನು ಇಲ್ಲಿ ಹೇಳಿರತಕ್ಕ ಡಿಸ್ಟ್ರಿಕ್ಟ್ ಜಡ್ಜರು ರಿಟೈರಾಗಿರತಕ್ಕವರೇ ಅಥವಾ ಕೆಲಸದಲ್ಲಿರತಕ್ಕವರೇ ಎಂಬುದನ್ನು ಇಲ್ಲಿ ವಿಶದವಾಗಿ ಹೇಳಿಲ್ಲ. ಮೇಲಾಗಿ ಅವರ ಫಂಕ್ಷನ್ನನ್ನೂ ಕೂಡ ಇಲ್ಲಿ ತಿಳಿಸಿರುವುದಿಲ್ಲ. ಇದಕ್ಕೇ ಒಂದು ಪ್ರತ್ಯೇಕ ಟ್ರಿಬ್ಯೂನಲ್ ಇರತಕ್ಕದ್ದು ಅನಾವಶ್ಯಕವೆಂದು ನಾನು ಹೇಳುತ್ತೇನೆ.

ಇನ್ನು ಸೆಕ್ಷನ್ 3ನ್ನು ಒಮಿಷನ್ ಮಾಡುವ ವಿಚಾರವನ್ನು ಇಲ್ಲಿ ಹೇಳಿದ್ದಾರೆ. ಆದರೆ ಈ ಸೆಕ್ಷನ್ನನ್ನು ಇಲ್ಲಿಂದ ತೆಗೆದ ನಂತರ ಇದನ್ನು ಬೇರೆಲ್ಲಿಯೂ ಹಾಕಿಲ್ಲ.

ಶ್ರೀ ರಾಮಕೃಷ್ಣ ಹೆಗ್ಗಡೆ.—ಅದು ಪೇಜ್ 37 ರಲ್ಲಿ ಸೆಕ್ಷನ್ (2) ರಲ್ಲಿ ಬಂದಿದೆ. ಅಲ್ಲಿ ಬಂದ ನಂತರ ಈ ಸೆಕ್ಷನ್ ಅನಾವಶ್ಯಕವೆಂದು ಭಾವಿಸಲಾಗಿದೆ. ಆದ್ದರಿಂದ ಅದನ್ನು ಹಾಕಿಲ್ಲ.

ಶ್ರೀ ಸಿದ್ದಯ್ಯ ಕಾಶೀಮಠ್.—ಇನ್ನು ತಾವು ಯಾವ ಸೊಸೈಟಿಗಳನ್ನು ರಿಜಿಷ್ಟರ್ ಮಾಡಿಸಬೇಕೆಂಬ ವಿಚಾರವನ್ನು ಇಲ್ಲಿ ತಿಳಿಸಿರುತ್ತೀರಿ. ಇದರ ಪ್ರಕಾರ ರಿಜಿಷ್ಟರ್ ಆಗದಿದ್ದರೆ ಆಗಲೂ ತೊಂದರೆಯಾಗುತ್ತದೆ.

ಶ್ರೀ ರಾಮಕೃಷ್ಣ ಹೆಗ್ಗಡೆ.—ರಿಜಿಸ್ಟ್ರಾರ್ ಒಂದು ಅಪ್ಲಿಕೇಷನ್ನನ್ನು 6 ತಿಂಗಳೊಳಗಾಗಿ ರಿಜಿಷ್ಟರು ಮಾಡುವುದಕ್ಕಾಗದಿದ್ದರೆ ಆಗ ಅವರು ಅದನ್ನು ಸರ್ಕಾರಕ್ಕೆ ತಿಳಿಸಬೇಕೆಂದು ಇಲ್ಲಿ ಹೇಳಿದ್ದೇವೆ.

ಶ್ರೀ ಸಿದ್ದಯ್ಯ ಕಾಶೀಮಠ್.—ಆದರೆ ಇಲ್ಲಿ ತಾವು ತೀವ್ರಗತಿಯಿಂದ ರಿಜಿಷ್ಟರ್ ಮಾಡುವುದಕ್ಕೆ ಅವಕಾಶ ಮಾಡಬೇಕೆಂದು ಹೇಳುತ್ತೇನೆ. ಇದನ್ನು ಮಾಡುವುದರಲ್ಲಿ ನಿಧಾನ ಮಾಡಿದರೆ ಇದರಿಂದ ಬಹಳ ತೊಂದರೆಯಾಗುತ್ತದೆ.

ಇನ್ನು ಅಮೆಂಡ್‌ಮೆಂಟ್ ಸೆಕ್ಷನ್ 29 ರಲ್ಲಿ ಸೊಸೈಟಿಗಳಿಗೆ ನಾಮಿನೇಟ್ ಮಾಡುವ ವಿಚಾರ ಹೇಳಿದ್ದಾರೆ. ಈ ಹಿಂದೆ ಯಾವ ಸಂಸ್ಥೆಗಾಗಲಿ ನಾಮಿನೇಟ್ ಮಾಡತಕ್ಕ ಪದ್ಧತಿಯನ್ನು ರದ್ದು ಮಾಡುತ್ತೇವೆಂದು ಸರ್ಕಾರದವರು ಹೇಳಿದ್ದರು. ಆದರೆ ಈಗ ಮತ್ತೆ ನಾಮಿನೇಷನ್ ವಿಚಾರ ತಂದಿದ್ದಾರೆ. ಆದರೆ ಇಲ್ಲಿ ಎಂಥವರನ್ನು ನಾಮಿನೇಟ್ ಮಾಡುತ್ತಾರೆಂಬುದನ್ನು ಇಲ್ಲಿ ತಿಳಿಸಿಲ್ಲ. ಹಾಗೆ ನಾಮಿನೇಟಾದ ಸದಸ್ಯರು ಒಂದು ಕಮಿಟಿಯಲ್ಲಿ ತಾವು ಹಾಜರಿರುವುದಕ್ಕಾಗದಿದ್ದರೆ ಸದ್ರಿಯವರು ಬೇರೊಬ್ಬರನ್ನು ನಾಮಿನೇಟ್ ಮಾಡಬಹುದು ಎಂದು ಮಾತ್ರ ಇಲ್ಲಿ ತಿಳಿಸಿದ್ದಾರೆ.

Sri KONDAJJI BASAPPA.—Suppose, we say the Registrar is nominated as a Member, and he has to go to attend some function somewhere. His nominee—the Deputy Registrar or Assistant Registrar may come and attend. It is to meet this contingency this is provided.

ಶ್ರೀ ಸಿದ್ದಯ್ಯ ಕಾಶೀಮಠ್.—ಅದನ್ನು ತಾವು ರಿಜಿಷ್ಟ್ರಾರ್ ಲೆವೆಲ್ಲಿನವರಾದರೆ ಮಾಡಬಹುದು. ಇಲ್ಲವಾದರೆ ಅವರು ಸುಮ್ಮನೆ ಬೇರೆ ಯಾರಿಗಾದರೂ ಒಂದು ಲೆಟರನ್ನು ಕೊಟ್ಟು ಕಳುಹಿಸುವ ತೊಂದರೇನು. ಈ ವಿಚಾರದಲ್ಲಿ ಅವರಿಗೆ ಸರ್ಕಾರ ಸಾಕಷ್ಟು ತಿಳುವಳಿಕೆಯನ್ನು ಕೊಡಬೇಕು.

ಇನ್ನು ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕನ್ನು ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್ ಎಂದು ಬದಲಾವಣೆ ಮಾಡಬೇಕೆಂದು ಹೇಳಿದ್ದಾರೆ. ಆದರೆ ಇದಕ್ಕಾಗಿ ಸರ್ಕಾರದವರು ಕಟ್ಟುನಿಟ್ಟಾದ ಕಾನೂನನ್ನು ಮಾಡದಿದ್ದರೆ ಇದು ಸರಿಹೋಗುವುದಿಲ್ಲ. ಈ ದಿವಸ ಬೆಳಗ್ಗೆ ಪ್ರಶ್ನೋತ್ತರದ ಕಾಲದಲ್ಲಿ ಮಂತ್ರಿಗಳು ತಿಳಿಸಿದ ಹಾಗೆ ಇದಕ್ಕೆ ಅಪ್ಲಿಕೇಷನ್ ಕೊಡುವುದರಲ್ಲಿ ಬಹಳ ತೊಂದರೆಗಳಿವೆ. ಸಾಲಕ್ಕೆ ಅರ್ಜಿ ಹಾಕತಕ್ಕ ವೇಳೆಯಲ್ಲಿ ಆ ಅಪ್ಲಿಕೇಷನ್‌ಗಳಲ್ಲಿ 3 ತಲೆಮಾರಿನ ದಾಖಲೆಗಳನ್ನು ತೆಗೆದು ಕೊಳ್ಳಬೇಕೆಂದು ಅದರಲ್ಲಿ ಹೇಳಿದೆ. ಇಂಥಾದ್ದನ್ನು ನಾವು ಪದೇ ಪದೇ ತಿದ್ದಿ ಸರಿಪಡಿಸಬೇಕೆಂದು ಹೇಳುತ್ತಲೇ ಬಂದಿದ್ದೇವೆ. ಆದರೆ ಈಗ ಸರ್ಕಾರದವರು ತಕಾವಿ ಸಾಲಕ್ಕೆ ಮಾಡಿರತಕ್ಕ ಅಪ್ಲಿಕೇಷನ್ ನಮೂನೆ ಏನಿದೆ ಅದು ಸರಿಯಾಗಿದೆ. ಅದೇ ಮಾದರಿಯಲ್ಲಿ ಇದಕ್ಕೂ ಒಂದು ಅಪ್ಲಿಕೇಷನ್ ಫಾರಂ ತಯಾರಿಸಬೇಕೆಂದು ನಾನು ಹೇಳುತ್ತೇನೆ. ಈ ಅಪ್ಲಿಕೇಷನ್ನಿನ ವಿಚಾರವನ್ನು ರೂಲ್ಸಿನಲ್ಲಾದರೂ ತಾವು ಸೇರಿಸಬೇಕೆಂದು ಹೇಳುತ್ತೇನೆ. ಇದನ್ನು ಸರ್ಕಾರದವರು ಆದಷ್ಟು ಸುಲಭ ಮಾಡಬೇಕೆಂದು ಹೇಳುತ್ತೇನೆ. ಈಗ ಕಡಾ ಉತಾರುಗಳನ್ನು ತರಬೇಕಾಗಿದ್ದರೆ 6-7 ಗ್ರಾಮಗಳಿಗೊಬ್ಬ ತಲಾಟಿ ಇರುತ್ತಾನೆ. ಹಾಗೆ ಒಬ್ಬ ಇರುವುದರಿಂದ ದಾಖಲೆಗಳನ್ನು ತರುವುದೆಂದರೆ ಬಹಳ ಕಷ್ಟ. ಈ ಎಲ್ಲಾ ಕಷ್ಟಗಳನ್ನು ನಿವಾರಣೆ ಮಾಡಲು ನಾನು ಈ ಸಾಲದ ಅರ್ಜಿಯ ನಮೂನೆಯನ್ನು ತಕಾವಿ ಸಾಲದ ಅರ್ಜಿ ನಮೂನೆಗೆ ಇಟ್ಟರೆ ಸರಿ ಹೋಗುತ್ತದೆಂದು ಹೇಳುತ್ತೇನೆ. ಹೀಗೆ ಮಾಡಿದರೆ ಯಾವ ತೊಂದರೆಯೂ ಇಲ್ಲ. ಇದನ್ನು ಸರಿಯಾಗಿ ರೂಲ್ಸಿನಲ್ಲಾದರೂ ಮಾರ್ಪಾಡು ಮಾಡಬೇಕೆಂದು ಹೇಳುತ್ತೇನೆ. ಇದು ರೈತನಿಗೆ ಆದಷ್ಟು ಸರಾಗವಾಗಿರಬೇಕು.

ಇನ್ನು 82 (ಬಿ ನಲ್ಲಿ ಮೋಡ್ ಆಫ್ ಡೀಲಿಂಗ್ ದಿ ಅಪ್ಲಿಕೇಷನ್ ಎಂತ ಹೇಳಿದ್ದಾರೆ: ಇಲ್ಲಿ ಒಬ್ಬ ಸಾಲಗಾರನಿಗೆ ಬೇಡಾಪವನಿದ್ದರೆ ಆತನು ಏನಾದರೂ ಅಬ್‌ಜೆಕ್ಷನ್‌ಗಳನ್ನು ಹಾಕಬಹುದು. ಆ ಕಾರಣದ ಮೇಲೆ ಅವನಿಗೆ ಸಾಲ ಸಿಕ್ಕದೆ ಹೋಗಬಹುದು. ಆ ಒಂದು ತೊಂದರೆ ಇದರಲ್ಲಿದೆ. ಸಾಲಕ್ಕೆ ಅರ್ಜಿ ಹಾಕಿರತಕ್ಕವನು ಎಲ್ಲಾ ದಾಖಲೆಗಳನ್ನೂ ತಂದು ಹಾಜರ್ಮಾಡಿದ ಮೇಲೆ ಅವುಗಳನ್ನು ಬ್ಯಾಂಕಿನವರು ಏಕೆ ಪರಾಂಬರಿಸಿ ಸಾಲ ಮಂಜೂರು ಮಾಡಬಾರದು ? ಈ ವಿಚಾರವನ್ನು ಸರ್ಕಾರದವರು ಮತ್ತೊಮ್ಮೆ ಪರಾಂಬರಿಸಬೇಕೆಂದು ಹೇಳುತ್ತೇನೆ.

ಇನ್ನು ಮಾರ್ಟ್‌ಗೇಜ್ ಆಫ್ ಲ್ಯಾಂಡಿನ ವಿಚಾರ ಹೇಳಿರತಕ್ಕದ್ದು ಸರಿಯಾಗಿದೆ. ಇನ್ನು ಸರ್ಕಾರದವರು ಅಂದರೆ ಒಬ್ಬ ರಿಜಿಸ್ಟ್ರಾರನ್ನು ಕೊಡತಕ್ಕ ಆರ್ಡರನ್ನು ಡಿಫಾಲ್ಟರನು ಅಥವಾ ಡಿಫಾಲ್ಟರಾಗಿರತಕ್ಕ ಒಂದು ಸೊಸೈಟಿ ಆ ಅವಧಿಯೊಳಗೆ ಅದನ್ನು ಸರಿಪಡಿಸದಿದ್ದರೆ ಒಂದು ಸಾವಿರ ರೂಪಾಯಿಗಳ ಫೈನ್ ಇಲ್ಲವೇ ದಿನಕ್ಕೆ ಒಂದು ನೂರು ರೂಪಾಯಿಗಳ ಜುಲ್ಮಾನೆ ಎಂದು ಹೇಳಿರತಕ್ಕದ್ದು ಬಹಳ ಜಾಸ್ತಿಯಾಯಿತು. ಇಲ್ಲಿ ಬಹುಮಟ್ಟಿಗೆ ಕೆಲಸ ಮಾಡತಕ್ಕವರೆಲ್ಲಾ ಅನರೆರಿ ಸೆಕ್ರೆಟೆರಿಗಳಾಗಿರುತ್ತಾರೆ. ಇದನ್ನು ಸಂಪೂರ್ಣವಾಗಿ ತೆಗೆದು ಹಾಕಬೇಕೆಂದು ಹೇಳುತ್ತೇನೆ. ಇಲ್ಲವೇ ಈ ಅನರೆರಿ ಸೆಕ್ರೆಟೆರಿಗಳನ್ನು ತೆಗೆದುಹಾಕಿ ಗ್ರಾಮ ಪಂಚಾಯಿತಿಗಳಿಗೆ ಸರ್ಕಾರದವರು ಸೆಕ್ರೆಟೆರಿಗಳನ್ನು ನೇಮಕ ಮಾಡಿರುವಂತೆ ಇದಕ್ಕೂ ಮಾಡಿದರೆ ಉತ್ತಮವಾಗಿರುತ್ತದೆ. ಆಗ ಈ ಹಣದ ದುರುಪಯೋಗ ಕೂಡ ಕಡಮೆಯಾಗಬಹುದು. ಹೀಗೆ ಇದರಲ್ಲಿ ಇನ್ನೂ ಅನೇಕ ಲೋಪ ದೋಷಗಳಿವೆ. ಇವುಗಳನ್ನೆಲ್ಲಾ ಸರಿಪಡಿಸಬೇಕೆಂದು ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಕೆ. ಲಕ್ಕಪ್ಪ (ಹೆಬ್ಬೂರು).—ಅಧ್ಯಕ್ಷರೇ, ಈ ದಿವಸ ಮಂಡಿಸಿರತಕ್ಕಂಥ ಕೋ-ಆಪರೇಟಿವ್ ಸೊಸೈಟಿ ತಿದ್ದುಪಡಿ ಮಸೂದೆಯ ಮೇಲೆ ಈಗಾಗಲೇ ಅನೇಕ ಸದಸ್ಯರು, ಸಹಕಾರ ಸಂಘ, ಸಹಕಾರ ಕ್ಷೇತ್ರದ ಕಾರ್ಯಕಲಾಪಗಳು ಎಷ್ಟರಮಟ್ಟಿಗೆ ನಡೆಯುತ್ತಾ ಇದೆ ಎನ್ನುವುದನ್ನು ಅಂಕಿ ಅಂಶಗಳ ಮೂಲಕ ಹೇಳಿದ್ದಾರೆ. ಈಗಿನ ಸಹಕಾರ ಕ್ಷೇತ್ರಗಳು ಅಧಿಕಾರ ಪಕ್ಷದಲ್ಲಿರುವ ಜನಗಳನ್ನು ಪೋಷಣೆ ಮಾಡಬೇಕೆಂಬ ಒಂದೇ ದೃಷ್ಟಿ ಇಟ್ಟು ದೇಶಾದ್ಯಂತ ಈ ಸಹಕಾರ ಸಂಘಗಳನ್ನು ಬಹು ಪಾಗ್ರತೆಯಾಗಿ ಮತ್ತು ಬಹು ತ್ವರಿತವಾಗಿ ಮಾಡುತ್ತಿರುವುದು ನಮ್ಮ ಕಣ್ಣಿಗೆ ಬೀಳುತ್ತಿದೆ. ಆದರೆ ಸಹಕಾರ ಕ್ಷೇತ್ರದಲ್ಲಿ ಆಗಿರತಕ್ಕ ಹಣದ ದುರುಪಯೋಗವನ್ನು ಇದುವರೆಗೂ ಸರ್ಕಾರಕ್ಕೆ ಈ ಸಭೆಯ ಮುಂದೆ ಎಷ್ಟೋ ಸಾರಿ ಹೇಳಿದಾಗ್ಯೂ ಕೂಡ ಯಾವ ನಿರ್ದಿಷ್ಟವಾದ ಕ್ರಮವನ್ನೂ ಕೂಡ ಕೈಗೊಂಡಿಲ್ಲ. ಈ ದೇಶದಲ್ಲಿ ಭ್ರಷ್ಟಾಚಾರ, ಹಣದ ದುರುಪಯೋಗ, ಚೀಟಿಂಗ್ ಫೋರ್ಜರಿ, falsification of accounts ಎಲ್ಲಾ ಇವುಗಳಲ್ಲಿ ನಡೆಯುತ್ತವೆ. ಈಗ ಇಂಡಿಯನ್ ಪೀನಲ್ ಕೋಡಿನಲ್ಲಿ ಯಾವ್ಯಾವ ಅಪರಾಧಗಳನ್ನು ಮಾಡಬಹುದೋ ಆ ಅಪರಾಧಗಳನ್ನು ಕೆಲವು ಕ್ಲಾಜುಗಳ ಮೂಲಕ ಅನ್ವಯಿಸಿಕೊಂಡು ಮಾಡತಕ್ಕಂಥ ಸಂಸ್ಥೆಗಳು ಅಂದರೆ ಮೈಸೂರಿನಲ್ಲಿರತಕ್ಕ ಸಹಕಾರ ಸಂಘಗಳು ಮತ್ತು ಸಹಕಾರ ಕ್ಷೇತ್ರಗಳು ಎಂದು ಹೇಳಬಹುದು.

Mr. SPEAKER.—The Hon'ble Member has given notice of amendments I have read them.

ಶ್ರೀ ಕೆ. ಲಕ್ಕಪ್ಪ.—ಈ ತಿದ್ದುಪಡಿಯಲ್ಲಿ ಈ ಬಗ್ಗೆ ಯಾವುದನ್ನೂ ತೋರಿಸಿಲ್ಲ. ಈ ಸಹಕಾರ ಸಂಘಗಳು ಎಷ್ಟರಮಟ್ಟಿಗೆ ನಮ್ಮ ಮೈಸೂರು ದೇಶದಲ್ಲಿ ಕೆಲಸ ಮಾಡುತ್ತಿವೆಯೆಂಬುದನ್ನು ನಾನು ನೋಡುತ್ತಿದ್ದೇನೆ. ಸಹಕಾರ ಸಂಘದಲ್ಲಿ ರೈತನಿಗೆ ಪ್ರಯೋಜನವಾಗಬೇಕು. ನಿಜವಾಗಿ ಇವರಿಗೆ ದೇಶದಲ್ಲಿ ಈ ಕೋ-ಆಪರೇಟೀವ್ ಮೂವ್‌ಮೆಂಟ್ ಚೆನ್ನಾಗಿ ಬೆಳೆಯಬೇಕೆಂಬ ದೃಷ್ಟಿ ಇದ್ದರೆ, ಈ ಸಹಕಾರ ಸಂಘಗಳಲ್ಲಿರತಕ್ಕಂಥ ಜನ ಅಧಿಕಾರ ಹೂಡಿರತಕ್ಕ ಕಾಂಗ್ರೆಸ್‌ನವರ ಗುಂಪಿಗೆ ಸೇರಿದ್ದು ಅನೇಕ ಜನ ಸಾಹುಕಾರರೆಂದು ತೀರ್ಮಾನ ಮಾಡುತ್ತಿದ್ದಾರೆ. ಈ ಸೊಸೈಟಿಗಳಲ್ಲಿ ಹಣ ತೆಗೆದುಕೊಳ್ಳುವವರೆಲ್ಲರೂ ಸಾಹುಕಾರರೇ ಎಂದು ಹೇಳಬಹುದು. ಏಕೆಂದರೆ ಈ ಸಾಹುಕಾರರುಗಳು ಅಲ್ಲಿಂದ ಹಣ ತೆಗೆದುಕೊಂಡು ರೈತರಿಗೆ ಲೇವಾದೇವಿ ಮಾಡುವ ನಿದರ್ಶನಗಳು ಈ ಸಹಕಾರ ಸಂಘಗಳಲ್ಲಿ ನಾವು ಕಾಣುತ್ತಿದ್ದೇವೆ.

[MR. DEPUTY SPEAKER in the Chair.]

ಇನ್ನು ಯಾವ ಸಹಕಾರ ಸಂಘದಲ್ಲಿ ಸದಸ್ಯತ್ವ ಹಕ್ಕು ಇಲ್ಲವೋ, ಸಹಕಾರ ಸಂಘಕ್ಕೆ ಜ್ಯೂರಿಸ್‌ಡಿಕ್ಷನ್ ಇಲ್ಲವೋ ಅಂತಹ ಸಹಕಾರ ಸಂಘಗಳಲ್ಲಿ ಹಣ ದುರುಪಯೋಗ ಮಾಡಿದ ಸಂದರ್ಭದಲ್ಲಿ ಅಂತಹವರನ್ನೇನಾದರೂ ಹಿಡಿಯುವುದಕ್ಕೆ ಬಂದಾಗ್ಗೆ ಅಲ್ಲಿನ ಸದಸ್ಯರಾಗಿರುವವರೇ ಅನೇಕ ದುರ್ಮಾರ್ಗಗಳನ್ನು ಈ ಸಹಕಾರ ಸಂಘಗಳ ಮೂಲಕ ಮಾಡುತ್ತಿದ್ದಾರೆ. ಈ ಬಗ್ಗೆ ತುಮಕೂರಿನ ಇತಿಹಾಸವನ್ನು ನಾನು ಹೇಳುವುದಾದರೆ ಬಹುಶಃ ಮೈಸೂರು ಸಂಸ್ಥಾನದಲ್ಲಿ ನಮ್ಮ ತುಮಕೂರು ಜಿಲ್ಲೆಯ ಸಹಕಾರ ಸಂಘದಲ್ಲಿ ಆಗತಕ್ಕಂಥ ದುರುಪಯೋಗ ಮತ್ತಾವ ಜಿಲ್ಲೆಯಲ್ಲೂ ಇಲ್ಲವೆಂದು ನಾನು ಘಂಟಾಘೋಷವಾಗಿ ಹೇಳುತ್ತೇನೆ. ಅದೇನು ಸಹಕಾರ ಮಂತ್ರಿಗಳಿಗೆ ಕಷ್ಟವಿದೆಯೋ ನನಗೆ ಗೊತ್ತಿಲ್ಲ. ಆದರೆ ಅಲ್ಲಿ ಯಾವ ಸಹಕಾರ ಸಂಘವನ್ನು ನೋಡಿದರೂ ಕೂಡ ಅಲ್ಲೆಲ್ಲಾ ಅಪರಾಧವನ್ನು ಮಾಡತಕ್ಕ ಜನರೇ ಆ ಸಹಕಾರ ಸಂಘಗಳಲ್ಲಿ ಸೇರಿದ್ದಾರೆ. ಈ ಬಗ್ಗೆ ಸರ್ಕಾರದವರು ಯಾವ ಕಾನೂನನ್ನೂ ಚಲಾವಣೆ ಮಾಡದೆ, ಯಾವ ಆಡಿಟ್ ಸೆಲ್ಲನ್ನು ಕಳುಹಿಸದೆ ಅವರನ್ನು ಪೋಷಣೆ ಮಾಡತಕ್ಕ ದೃಷ್ಟಿಯಿಂದ ನೋಡುತ್ತಿದ್ದಾರೆ. ಈ ವಿಷಯವನ್ನು ಸಹಕಾರ ಮಂತ್ರಿಗಳಿಗೆ ಎಷ್ಟೋ ಸಾರಿ ಹೇಳಿದರೂ ಇಂತಹ ಸಹಕಾರ ಸಂಘಗಳಿಗೆ ಉತ್ತೇಜನ ಕೊಡುತ್ತಿದ್ದಾರೆ. ಅವರ ನೆರವಿನಿಂದ ಅವರನ್ನು ಪೋಷಣೆ ಮಾಡುತ್ತಿರುವುದನ್ನು ನೋಡಿದರೆ ಸಹಕಾರ ಕ್ಷೇತ್ರ ಎಷ್ಟರಮಟ್ಟಿಗೆ ಮೈಸೂರು ದೇಶದಲ್ಲಿ ನಡೆಯುತ್ತಾ ಇದೆ ಎನ್ನುವುದನ್ನು ನಾವು ನೋಡಬಹುದು. ಇನ್ನು ಸಹಕಾರ ಸಂಘದಲ್ಲಿ ಇಂಡಸ್ಟ್ರಿಯಲ್ ಪಾಲಿಸಿ ಮಾಡಬೇಕೆಂದು ಹೇಳುತ್ತಾರೆ. ಯಾರು ಇಂಡಸ್ಟ್ರೀಸ್‌ನಲ್ಲಿ ಅನುಭವ ಪಡೆಯದೆ ಇರುತ್ತಾರೋ ಷೇರ್ ಹೋಲ್ಡರ್ಸ್ ಯಾರು ಆಗದೆ ಇರುತ್ತಾರೋ ಅಂತಹವರನ್ನು ತುಮಕೂರು ಜಿಲ್ಲಾ ಬ್ಯಾಂಕಿನಲ್ಲಿ ನಾಮಿನೇಷನ್ ಮಾಡತಕ್ಕ ಔಚಿತ್ಯವೇನೆಂಬುದಾಗಿ ನಾನು ಸಹಕಾರ ಮಂತ್ರಿಗಳಿಗೆ ನೇರವಾಗಿ ಪ್ರಶ್ನೆಯನ್ನು ಹಾಕುತ್ತೇನೆ. ಯಾವ ಸಹಕಾರ ಸಂಘಗಳಲ್ಲಿ ಹಣ ದುರುಪಯೋಗ ಮಾಡಿ, ಬ್ಲಾಕ್‌ಮಾರ್ಕೆಟ್ ಮಾಡಿ ದೇಶದಲ್ಲಿರತಕ್ಕ ಕಾನೂನುಗಳನ್ನು ಮುರಿದು ಸಹಕಾರ ಕ್ಷೇತ್ರದಲ್ಲಿ ಅನ್ಯಾಯ ನಡೆಸುತ್ತಿರತಕ್ಕ ಜನರನ್ನು ಇಂಡಸ್ಟ್ರಿಯಲ್ ಬ್ಯಾಂಕಿಂಗೆ ನಾಮಿನೇಷನ್ ಮಾಡಿದ್ದಾರೆ. ಸಹಕಾರ ಮಂತ್ರಿಗಳು ಇವರ ಹೆಸರನ್ನು ಶಿಫಾರಸು ಮಾಡಿದವರು ಯಾರು ಎಂಬುದನ್ನು ತನಿಖೆ ಮಾಡಬೇಕೆಂದು ನಾನು ಹೇಳುತ್ತೇನೆ. ಇನ್ನು ಕೋ-ಆಪರೇಟಿವ್ ಯೂನಿಯನ್ ಎಂಬುದಾಗಿ ಹೊಸದಾಗಿ ಇತ್ತೀಚೆಗೆ ಒಂದು ಚಳುವಳಿ ನಡೆಯುತ್ತಾ ಇದೆ. ಅದು ನಮ್ಮ ತುಮಕೂರು ಜಿಲ್ಲೆಯಲ್ಲಿ ಒಂದಿದೆ. ಅದರಗ ಏನು ಕೆಲಸ ಮಾಡುತ್ತಿದ್ದಾರೆ, ಅದರ ಚಟುವಟಿಕೆಗಳು ಏನು, ಎಂಬುದಾಗಿ ಪ್ರಶ್ನೆ ಮಾಡಿದಾಗ್ಗೆ ಅಲ್ಲ ಸಕ್ರಿಯ ಸದಸ್ಯನಾಗಿರಬೇಕು, ಕಾಂಗ್ರೆಸ್ಸಿಗೋಸ್ಕರ ಚೆನ್ನಾಗಿ ಕೆಲಸಮಾಡಬೇಕು, ಎಲ್ಲಾ ಸಹಕಾರ ಸಂಘದ ಸದಸ್ಯರನ್ನೂ ಕೂಡ ಅವರು ಯಾವರೀತಿ ಇದ್ದರೂ ಸರಿಯೇ ತಮ್ಮ ಆಡಳಿತದಲ್ಲಿ ಕಪಿಮುಷ್ಟಿಯನ್ನು..............

ಶ್ರೀ ಎಚ್. ಆರ್. ಕೇಶವಮೂರ್ತಿ (ಗಂಡಸಿ).—Point of order ಕಪಿಮುಷ್ಟಿ ಎಂಬುದು ಅನ್‌ಪಾರ್ಲಿಮೆಂಟರಿಯಲ್ಲವೇ ?

Mr. DEPUTY SPEAKER.—There is no point of order.

ಶ್ರೀ ಕೆ. ಲಕ್ಕಪ್ಪ.—ಈಗ ಕೋ-ಆಪರೇಟೀವ್ ಯೂನಿಯನ್ ಎಂದು ನಿರ್ಮಾಣಮಾಡಿದ್ದಾರೆ. ಇಲ್ಲಿ ಮಾಡುವ ಕೆಲಸ ಪಾರ್ಟಿಗೋಸ್ಕರ ಮತ್ತು ಅಧಿಕಾರಕ್ಕೋಸ್ಕರ ಪ್ರಚಾರ ಮಾಡತಕ್ಕ ಜನರನ್ನು ನೇಮಿಸುವ ವಿಚಾರ ಒಂದು ಬಿಟ್ಟರೆ ಇನ್ನು ಯಾವವಿಚಾರವೂ ಕೂಡ ಈ ಕೋ-ಆಪರೇಟೀವ್ ಯೂನಿಯನ್ನಿನಲ್ಲಿಯೂ ಮಾಡುತ್ತಿಲ್ಲ. ಇನ್ನು ತುಮಕೂರಿನಲ್ಲಿ ನೋಡಿದರೆ ಸಕ್ಕರೆ ಮಾರಾಟ ಯಾವರೀತಿ

ಮಾಡುತ್ತಿದ್ದಾರೆ. ಯಾರದೋ ಹೆಸರಿನಲ್ಲಿ ಬೋಗಸ್ ಪರ್ಮಿಟ್ಟುಗಳನ್ನು ಮಾಡಿಸಿಕೊಂಡು ಸಿಮೆಂಟ್, ಗೊಬ್ಬರ ಸರಬರಾಜು ಯಾವರೀತಿಯಲ್ಲಿ ಮಾಡುತ್ತಿದ್ದಾರೆಂಬುದನ್ನು ನಾವು ಸವಿಸ್ತಾರವಾಗಿ ನೋಡಬಹುದು,

Mr. DEPUTY SPEAKER.—The Member is discusing the general principalse let him come to the Bill.

ಶ್ರೀ ಕೆ. ಲಕ್ಕಪ್ಪ.—ಈ ತಿದ್ದುಪಡಿಯಲ್ಲಿ ಅಂಥಾದ್ದನ್ನೆಲ್ಲಾ ತಪ್ಪಿಸುವುದಕ್ಕೆ ಏನೂ ತಂದಿಲ್ಲವೆಂದು ನಾನು ಬಹಳ ವಿಷಾದದಿಂದ ಹೇಳುತ್ತೇನೆ.

ಇನ್ನು ಇದರಲ್ಲಿ ಒಂದು ಟ್ರಿಬ್ಯೂನಲ್ ರಚನೆ ಮಾಡಬೇಕೆಂದು ತಂದಿದ್ದಾರೆ. ಇಂತಹ ಟ್ರಿಬ್ಯೂನಲ್‌ಗಳು ಅನೇಕವಿವೆ. ಇವರು ಟ್ರಿಬ್ಯೂನಲ್‌ಗಳನ್ನು ರಚನೆ ಮಾಡಿದ ರೀತಿ ನೀತಿಗಳು ಮತ್ತು ಅವುಗಳ ಕಾರ್ಯಚಟುವಟಿಕೆಗಳ ಬಗ್ಗೆ ನಾನು ಹೆಚ್ಚಿಗೆ ಹೇಳಬೇಕಾಗಿಲ್ಲ. ಸಹಕಾರ ಕ್ಷೇತ್ರದಲ್ಲಿ ಇಂತಹ ಟ್ರಿಬ್ಯೂನಲ್‌ಗಳನ್ನು ರಚನೆಮಾಡಿ ಒಂದು ದೊಡ್ಡ ಗೊಂದಲಕ್ಕೆ ಇಡುತ್ತಾರೆಂದು ನಾನು ಹೇಳುತ್ತೇನೆ. ಇನ್ನು ದೇಶದಲ್ಲಿ ಮಿತವ್ಯಯ ಪರಿಪಾಲನೆ ಮಾಡಬೇಕೆಂದು ಆ ಕಡೆ ಈಕಡೆ ಹೇಳುತ್ತಾರೆ. ಈ ಟ್ರಿಬ್ಯೂನಲ್ಲನ್ನು ಸ್ಥಾಪನೆ ಮಾಡಬೇಕಾದರೆ ಬಹುಶಃ ಒಂದು ಲಕ್ಷ ರೂಪಾಯಿಗಳಿಗೂ ಹೆಚ್ಚಿಗೆ ಖರ್ಚಾಗುತ್ತದೆ. ಅದನ್ನು ಫೈನಾನ್ಸಿಯಲ್ ಮೆಮೊರ್ಯಾಂಡಂನಲ್ಲಿ ಕೊಟ್ಟಿದ್ದಾರೆ. ಈ ಟ್ರಿಬ್ಯೂನಲ್ ಏತಕ್ಕೆ ಇರಬೇಕು, ಇದರ ಕಾರ್ಯವೇನು, ಯಾವವಿಷಯಗಳು ಟ್ರಿಬ್ಯೂನಲ್‌ಗೆ ಬರಬೇಕು ಎನ್ನುವುದನ್ನು ಸರಿಯಾಗಿ ಇದರಲ್ಲಿ ಕಾಣಿಸಿಲ್ಲ. ಬಹುಶಃ ಮಂತ್ರಿಗಳು ತಮ್ಮ ಕ್ಷೇತ್ರದಲ್ಲಿ ಯಾರೋ ಪದವೀಧರನಿದ್ದು ಆ ಪದವೀಧರನಿಗೆ ಯಾವ ಕೆಲಸವೂ ಸಿಕ್ಕದೇ ಇರತಕ್ಕಂಥ ಕಾಲದಲ್ಲಿ ಅಂತಹವನನ್ನು ಈ ಟ್ರಿಬ್ಯೂನಲ್‌ಗೆ ಚೇರ್‌ಮನ್ನರನ್ನಾಗಿ ಮಾಡಬೇಕೆಂದು ಉದ್ದೇಶಿಸಿದ್ದಾರೆ. ಬಹುಶಃ ಅವರ ಉದ್ದೇಶ ಹೀಗೆಯೇ ಇರಬಹುದೆಂದು ನಾನು ಹೇಳುತ್ತೇನೆ.

Sri RAMAKRISHNA HEGDE.—May I request the Hon'ble Member to kindly read the provision ? The Chairman will be the District Judge.

ಶ್ರೀ ಕೆ. ಲಕ್ಕಪ್ಪ.—ಈಗ ಡಿಸ್ಟ್ರಿಕ್ಟ್ ಜಡ್ಜು, ಹೈ ಕೋರ್ಟ್ ಜಡ್ಜು, ಮತ್ತು ಪಬ್ಲಿಕ್ ಸರ್ವಿಸ್ ಕಮೀಷನ್ ಚೇರ್‌ಮನ್ ಇವರೆಲ್ಲರು ಒಂದು ರಾಜಕೀಯ ಹಿನ್ನೆಲೆಯಲ್ಲಿ ನೇಮಕವಾಗುತ್ತಿರುವುದನ್ನು ಮಾನ್ಯ ಮಂತ್ರಿಗಳು ಮರೆತಿದ್ದಾರೆಂದು ಕಾಣುತ್ತದೆ. ಯಾರಿಗೆ ಡಿಸ್ಟ್ರಿಕ್ಟ್ ಜಡ್ಜು ಪದವಿ ಕೊಡಬೇಕೆಂಬುದು ಸರ್ಕಾರಕ್ಕೆ ಚೆನ್ನಾಗಿ ಗೊತ್ತಿದೆ. ಇನ್ನೊಂದು ವಿಷಯ, ಯಾರು ಕೋ-ಆಪರೇಟೀವ್ ಮೂವ್ಮೆಂಟ್ ನಲ್ಲಿದ್ದು ನುರಿತ ಲಾಯರ್ ಅಥವಾ ಅಡ್ವೋಕೇಟ್ ಆಗಿರುತ್ತಾರೋ ಅಂತಹವರನ್ನು ಈ ಟ್ರಿಬ್ಯೂನಲ್‌ಗೆ ಸದಸ್ಯರೊಬ್ಬರನ್ನಾಗಿ ಮಾಡಬೇಕೆಂಬುದನ್ನು ಈ ಮಸೂದೆಯಲ್ಲಿ ಸೂಚಿಸಿದ್ದಾರೆ, ಅದೆಲ್ಲೋ ಮಾನ್ಯ ಮಂತ್ರಿಗಳ ಕ್ಷೇತ್ರದಲ್ಲಿ ಯಾರೋ ಒಬ್ಬರಿಗೆ ಅವಕಾಶ ಮಾಡಿಕೊಡಬೇಕೆಂಬ ದೃಷ್ಟಿಯಿಂದ ಇರಬಹುದು. ಏಕೆಂದರೆ ಈ ದೇಶದಲ್ಲಿ ಇಂತಹ ಅನೇಕ ಟ್ರಿಬ್ಯೂನಲ್‌ಗಳು, ಬೋರ್ಡ್‌ಗಳು, ಸಂಘ ಸಂಸ್ಥೆಗಳು, ರಚನೆಯಾಗಿ ಬರೀ ಕಾಂಗ್ರೆಸ್‌ನವರ ಆಡಳಿತವನ್ನು ಮುಂದುವರಿಸಿಕೊಂಡು ಹೋಗುವುದಕ್ಕೆ ಸಹಕಾರಿಯಾಗಿದ್ದುದನ್ನು ನಾನು ನೋಡಿದ್ದೇನೆ. ಮತ್ತು ಕಾಂಗೆಸ್‌ನವರ ಜೀವನೋದ್ಧಾರಕ್ಕಾಗಿ ಈ ಸಂಸ್ಥೆಗಳು ರಚನೆಯಾಗಿವೆಯೋ ಏನೋ ಎನ್ನುವಹಾಗೆ ನನಗೆ ಕಾಣುತ್ತದೆ. ಹಿಂದೆ ಎಷ್ಟೋ ಬೋರ್ಡುಗಳು ಇರಲಿಲ್ಲವೇ, ಯಾವ ರಿಜಿಸ್ಟ್ರಾರ್, ಸಹಇಲ್ಲದೆ, ಸರ್ಕಾರದ ಆಜ್ಞೆಗಳನ್ನು ಉಲ್ಲಂಘನೆ ಮಾಡದೆ ಕೆಲಸ ಮಾಡಿದಂಥ ಸಂಘ ಸಂಸ್ಥೆಗಳ ನಿದರ್ಶನಗಳು ನಮಗೆ ಗೊತ್ತಿವೆ. ಆದರೆ ಈಗ ಇಷ್ಟೊಂದು ಬೋರ್ಡುಗಳು, ಸಹಕಾರ ಸಂಘಗಳು ಬಂದು ಇಷ್ಟುಬಾರಿ ಹಣ ದುರುಪಯೋಗವಾಗುವುದು, ಕೇಳದೆ ಇರತಕ್ಕವರಿಗೆ ಸ್ಥಾನಗಳನ್ನು, ಹುದ್ದೆಗಳನ್ನು ಕೊಡುವುದು, ಅವರ ಹಿಂಬಾಲಕರನ್ನು ಕಾಪಾಡುವುದು ಇವು ಸರಿಯಾಗಿಲ್ಲ. ಆದ್ದರಿಂದ ಈ ಟ್ರಿಬ್ಯೂನಲ್ಲೇ ಬೇಡವೆಂದು ನಾನು ಅತಿ ವಿನಯದಿಂದ ಹೇಳುತ್ತೇನೆ. ಒಂದು ವೇಳೆ ಟ್ರಿಬ್ಯೂನಲ್ ಮುಂದೆ ಬೇಕಾದಾಗ ಯಾರೋ ಬಂದು ಮಾಡುತ್ತಾರೆ. ಅದೆಲ್ಲದಕ್ಕೂ ಜಡ್ಜ್‌ಮೆಂಟ್ ಬರೆಯುವ ನೇಮಕ ಇವರಿಗೆ ಬೇಡ. ಏಕೆಂದರೆ ಇವರು ಇಂತಹ ಟ್ರಿಬ್ಯೂನಲ್‌ಗಳನ್ನು ರಚನೆ ಮಾಡಿ ಎಷ್ಟೋ ಅನ್ಯಾಯಗಳು ಈ ದೇಶದಲ್ಲಿ ನಡೆಯುತ್ತಿರುವುದನ್ನು ನಾವು ನೋಡಿದ್ದೇವೆ.

2-00 P.M.

ಇನ್ನೂ ಪುಟ 27ರಲ್ಲಿ ಲೀಗಲ್ ಪ್ರಾಕ್ಟೀಷನರ್ಸ್ ವಿಷಯವನ್ನು ಹೇಳಿದ್ದಾರೆ. ಲೀಗಲ್ ಪ್ರಾಕ್ಟೀಷನರ್ಸ್ ಸಹಕಾರ ಕ್ಷೇತ್ರಗಳಲ್ಲಿ ಏತಕ್ಕೆ ಇರಬಾರದು ಎಂದು ನಾನು ಪ್ರಶ್ನೆಯನ್ನು ಹಾಕುತ್ತೇನೆ. ತಾವು ಆರ್ಬಿಟ್ರೇಟರನ್ನು ಯಾರನ್ನೋ ಮಂಡಲ ಕಾಂಗ್ರೆಸ್ಸಿನ ಪ್ರೆಸಿಡೆಂಟರನ್ನೂ ಅಲ್ಲಿಗೆ ಆರ್ಬಿಟ್ರೇಟರಾಗಿ ತರಬೇಕೆಂದು ಮಾಡಿದ್ದೀರಿ. ಅಂತೂ ಪುಡಾರಿಗಳನ್ನು, ತಮಗೆ ಯಾರು ಬೇಕೋ

(ಶ್ರೀ ಕೆ. ಲಕ್ಕಪ್ಪ)

ಅವರನ್ನು ನೇಮಕ ಮಾಡತಕ್ಕದ್ದು ಹೋಗಬೇಕು. ನಾವು ಎಷ್ಟೋ ಕಡೆಗಳಲ್ಲಿ ನೋಡಿದ್ದೇವೆ, ಕಾಂಗ್ರೆಸ್ ಪ್ರಚಾರಿಗಳನ್ನು ಆರ್ಬಿಟ್ರೇಟರಾಗಿ ಸರ್ಕಾರ ನೇಮಕ ಮಾಡಿದಾಗ ಅವರು ಲೀಗಲ್ ಪ್ರಾಕ್ಟೀಷನರ ಹತ್ತಿರ ಲಾಯರ ಹತ್ತಿರ ಬಂದು ದುಡ್ಡು ಕೊಟ್ಟು ತಮಗೆ ಬೇಕಾದ ಪಾಯಿಂಟ್‌ಗಳನ್ನು ಬರೆಸಿಕೊಂಡು ಹೋಗುತ್ತಾರೆ. ಅವರಿಗೆ ಕಾನೂನು ಸರಿಯಾಗಿ ಗೊತ್ತಾಗುವುದಿಲ್ಲ. ಸರ್ಕಾರದವರು ತಮ್ಮ ಮನಸ್ಸಿಗೆ ಬಂದವರನ್ನು ಆರ್ಬಿಟ್ರೇಟರಾಗಿ ನೇಮಕ ಮಾಡುವಂತಹ ಒಂದು ಪದ್ಧತಿಯನ್ನು ಇಟ್ಟುಕೊಂಡಿದ್ದಾರೆ. ಈ ರೀತಿ ಮಾಡುವುದಾದರೆ ಡಿಸ್‌ಪ್ಯೂಟ್‌ಗಳನ್ನು ಯಾವರೀತಿ ಬಗೆ ಹರಿಸಬೇಕು ? ಸಹಕಾರ ಕ್ಷೇತ್ರದಲ್ಲಿ ಲೀಗಲ್ ಪ್ರಾಕ್ಟೀಷನರ್ಸ್ ಏತಕ್ಕೆ ಇರಬಾರದು ಎಂದು ನಾನು ಕೇಳುತ್ತೇನೆ. ಕಾನ್‌ಸ್ಟಿಟ್ಯೂಷನ್ ಪ್ರಕಾರ ಸಹಕಾರ ಕ್ಷೇತ್ರದಲ್ಲಿ ಪ್ರಜೆಗಳಿಗೆ ಇರತಕ್ಕಂಥ ಹಕ್ಕು ಬಾಧ್ಯತೆಗೆ ಧಕ್ಕೆ ತಂದರೆ ಹೇಗೆ ? ನಿಜವಾಗಿಯೂ ಈ ರೀತಿ ಮಾಡಿರತಕ್ಕದ್ದು ಸರಿಯಲ್ಲ. ನಾನು ಒಂದು ಉದಾಹರಣೆಯನ್ನು ಹೇಳುತ್ತೇನೆ. ತುಮಕೂರು ಇಂಡಸ್ಟ್ರಿಯಲ್ ಏಪೆಕ್ಸ್ ಬ್ಯಾಂಕಿಗೆ ನಾಮಿನೇಷನ್ ಮಾಡುವುದಕ್ಕೆ ಯಾವ ಲಿಸ್ಟನ್ನು ರಿಜಿಸ್ಟ್ರಾರವರು ಕಳುಹಿಸಬೇಕೆಂದು ಹೇಳಿದ್ದರು, ಮತ್ತು ಮಂತ್ರಿಗಳು ಯಾವ ಲಿಸ್ಟನ್ನು ಅಪ್ರೂವ್ ಮಾಡಿದ್ದಾರೆ ಎಂಬುದನ್ನು ಈ ಸಭೆಯ ಮುಂದೆ ಹೇಳಲಿಲ್ಲ, ಈ ರೀತಿ ಮಾಡತಕ್ಕದ್ದನ್ನು ನಾನು ವಿರೋಧ ಮಾಡಬೇಕಾಗಿದೆ. ಈ ಸಹಕಾರ ಸಂಘಗಳಿಗೆ ಸಂಬಂಧಪಟ್ಟ ಡಿಸ್‌ಪ್ಯೂಟ್‌ಗಳನ್ನು ಬಗೆಹರಿಸಿಕೊಳ್ಳಬೇಕಾದರೆ ಲಾಯರುಗಳು ಅದರಲ್ಲಿ ಪ್ರವೇಶ ಮಾಡಬಾರದು ಎನ್ನುವ ನೀತಿ ಏನಿದೆಯೋ ಇದು ಪ್ರಜಾ ಪ್ರಭುತ್ವದಲ್ಲಿ ಕಾನ್‌ಸ್ಟಿಟ್ಯೂಷನ್ ಪ್ರಕಾರ ಪ್ರತಿಯೊಬ್ಬ ಪ್ರಜೆಯೂ ತನ್ನ ಹಕ್ಕು ಬಾಧ್ಯತೆಗಳನ್ನು ರಕ್ಷಣೆ ಮಾಡಿಕೊಳ್ಳುವುದಕ್ಕೆ ಒಂದು ಏಜೆನ್ಸಿಯನ್ನು ಇಟ್ಟುಕೊಂಡು ಕೆಲಸಮಾಡುವುದಕ್ಕೆ ಅವಕಾಶವಿಲ್ಲ ಎಂದು ಹೇಳಿದರೆ ಕಾನ್‌ಸ್ಟಿಟ್ಯೂಷನ್ನಿಗೆ ತಿಲಾಂಜಲಿಯನ್ನು ಬಿಟ್ಟ ಹಾಗಾಗುತ್ತದೆ. ಅದಕ್ಕೋಸ್ಕರವಾಗಿ ಈ ಸಂಬಂಧದಲ್ಲಿ ನಾನು ಒಂದು ತಿದ್ದುಪಡಿಯನ್ನು ಕೂಡ ತಂದಿದ್ದೇನೆ. ಅದನ್ನು ಸರ್ಕಾರದವರು ಒಪ್ಪಿಕೊಳ್ಳುತ್ತಾರೆಂದು ನಾನು ನಂಬಿದ್ದೇನೆ.

ಇನ್ನೊಂದು ವಿಷಯವನ್ನು ಹೇಳುತ್ತೇನೆ.

ಒಂದು ಪಂಚಾಯಿತಿಯಲ್ಲಿ ಒಂದೇ ಸಹಕಾರ ಸಂಘ ಇರಬೇಕೆಂದು ಒಂದು ನಿಯಮ ಇದೆ ಎಂದು ಹೇಳುತ್ತಾರೆ. ಆದರೆ ಒಂದೇ ಪಂಚಾಯಿತಿಯಲ್ಲಿ ಎರಡು ಸೊಸೈಟಿಗಳು ಇರತಕ್ಕ ನಿದರ್ಶನಗಳನ್ನು ಬೇಕಾದರೆ ನಾನು ತೋರಿಸುತ್ತೇನೆ. ಇದನ್ನು ನೋಡಿದರೆ ಸಹಕಾರ ಸಂಘಗಳ ನೀತಿಯ ವಿಷಯದಲ್ಲಿ ಸರ್ಕಾರಕ್ಕೆ ನಿರ್ದಿಷ್ಟವಾದ ಒಂದು ನೀತಿ ಇದೆಯೋ ಎಂದು ನಾನು ಕೇಳುತ್ತೇನೆ. ಮೈಸೂರು ಸಂಸ್ಥಾನದಲ್ಲಿ ಒಂದು ಪಂಚಾಯಿತಿಯಲ್ಲಿ ಎರಡು ಸೊಸೈಟಿಗಳು ಇರಕೂಡದು ಎಂದು ಹೇಳಿ, ಮತ್ತೆ ಆ ನೀತಿಯನ್ನು ಉಲ್ಲಂಘನೆ ಮಾಡಿ ಒಂದು ಪಂಚಾಯಿತಿಯಲ್ಲಿ ಎರಡು ಸೊಸೈಟಿಗಳನ್ನು ಮಾಡಿದ್ದಾರೆ, ಇದು ಯಾವ ನೀತಿ? ಇಂಥಾ ದ್ವಿಮುಖ ನೀತಿಯನ್ನು ಸಹಕಾರ ಸಂಘಗಳಲ್ಲಿ ರದ್ದು ಮಾಡಿದರೆ ಒಳ್ಳೆಯದು ಎಂದು ನಾನು ಈ ಸಭೆಯಲ್ಲಿ ಹೇಳುತ್ತೇನೆ. ಕಾನೂನಿನಲ್ಲಿ ಇರುವುದು ಒಂದು, ತಾವು ಮಾಡುವುದು ಇನ್ನೊಂದು ಹೀಗೆ ಮಾಡಬಾರದು. ಸಹಕಾರ ಸಂಘಗಳಲ್ಲಿ ಎಲ್ಲಾ ವರ್ಗದ ಜನರೂ ಸೇರುತ್ತಾರೆ. ಸಹಕಾರ ಸಂಘಗಳಲ್ಲಿರತಕ್ಕವರು ಹಣವನ್ನು ದುರುಪಯೋಗ ಮಾಡಿರುವುದನ್ನು ಕಂಡಾಗ ಅವರು ಯಾವ ಪಕ್ಷದವರೇ ಆಗಿರಲಿ ಅವರು ಸಹಕಾರ ಸಂಸ್ಥೆಯಲ್ಲಿಯೂ 5 ವರ್ಷಗಳ ಕಾಲ ಕೆಲಸ ಮಾಡದೇ ಇರತಕ್ಕ ರೀತಿಯಲ್ಲಿ ಮಾಡಿದರೆ ಬಹುಶಃ ಅಷ್ಟು ಹೆಚ್ಚಿನ ಪೋಲಾಗಲಾರದು ಎನ್ನುವ ನಂಬಿಕೆ ನನಗೆ ಇದೆ. ಅದಕ್ಕೋಸ್ಕರ ನಾನು ಹೇಳುವುದೇನೆಂದರೆ, ಈ ದೇಶದಲ್ಲಿರತಕ್ಕ ಸಹಕಾರ ಸಂಘಗಳಲ್ಲಿ ಯಾವ ಯಾವ ಅಧ್ಯಕ್ಷರ ಕಾಲದಲ್ಲಿ ಯಾವ ಯಾವ ಸೊಸೈಟಿಗಳಲ್ಲಿ ಎಷ್ಟೆಷ್ಟು ಹಣ ದುರುಪಯೋಗವಾಗಿದೆ ಎನ್ನುವಂತಹ ಒಂದು ಲಿಸ್ಟನ್ನು ಮಾಡಿ, ಅಂಥ ಜನಗಳ ಹೆಸರನ್ನು ಪ್ರಚಾರ ಮಾಡಿ, ಪತ್ರಿಕೆಗಳ ಮೂಲಕ ಸಾರ್ವಜನಿಕರಿಗೆ ತಿಳಿಯುವಂತೆ ಮಾಡಬೇಕು. ಮತ್ತು ಅವರಿಗೆ ಕೆಲವು ದಿವಸ ಜೈಲು ಶಿಕ್ಷೆಯನ್ನು ವಿಧಿಸಬೇಕು. ಅಷ್ಟೇ ಅಲ್ಲ. ಇಂಥಿಂಥವರು ಇಂಥಿಂಥಾ ಸೊಸೈಟಿಗಳಲ್ಲಿ ಇಷ್ಟಿಷ್ಟು ಹಣವನ್ನು ದುರುಪಯೋಗ ಮಾಡಿದ್ದಾರೆ ಎಂದು ಹೇಳಿ ಅವರ ಫೋಟೋಗಳನ್ನು ಬೆಂಗಳೂರು ಮುಂತಾದ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ನಾಲ್ಕು ಚೌಕಗಳು ಇರುವ ಕಡೆ ಪ್ರದರ್ಶನ ಮಾಡಬೇಕು. ಈ ರೀತಿ ಮಾಡಿದರೆ ಜನಗಳಲ್ಲಿ ಭಯ ಬರುತ್ತದೆ, ಮತ್ತು ಎಲ್ಲರಿಗೂ ನ್ಯಾಯರೀತಿಯಲ್ಲಿ ಕೆಲಸ ಮಾಡಬೇಕು ಎನ್ನುವಂತಹ ಒಂದು ಮನೋವೃತ್ತಿ ಬರುತ್ತದೆ.

ಇನ್ನೂ ಸಹಕಾರ ಸಂಘಗಳಿಗೆ ನಾಮಿನೇಷನ್ ಮಾಡತಕ್ಕ ವಿಷಯದಲ್ಲಿ ಶ್ರೀಮಾನ್ ಸಿದ್ದಯ್ಯ ಕಾಶಿಮಠ್ ಅವರು ಬಹಳ ಚೆನ್ನಾಗಿ ಹೇಳಿದ್ದಾರೆ. ಈ ನಾಮಿನೇಷನ್ ಮಾಡತಕ್ಕ ಒಂದು ಅಧಿಕಾರ ಸರ್ಕಾರಕ್ಕೆ ಇರತಕ್ಕದ್ದು ಒಂದು ಸಿದ್ಧೌಷಧ ಇದ್ದ ಹಾಗೆ ಎಂದು ಕಾಣುತ್ತದೆ. ಈ ಪದ್ಧತಿಯನ್ನು

ಸರ್ಕಾರ ಕೈಬಿಡುವುದು ಒಳ್ಳೆಯದು ಎಂದು ನಾನು ಹೇಳುತ್ತೇನೆ. ಪ್ರತಿಯೊಂದು ಸೊಸೈಟಿಯಲ್ಲಿಯೂ ಗೌರವ ಕಾರ್ಯದರ್ಶಿ ಇರುವುದು ಬೇಡ. ಪ್ರತಿಯೊಂದು ಸೊಸೈಟಿಯಲ್ಲಿಯೂ ಒಬ್ಬ ಸರ್ಕಾರದ ಅಧಿಕಾರಿಯನ್ನು ನೇಮಕ ಮಾಡಿದರೆ ಒಳ್ಳೆಯದು. ಅಕೌಂಟ್ಸ್ ತಿಳಿದಿರತಕ್ಕ ಮತ್ತು ಒಳ್ಳೆಯ ಬುದ್ಧಿವಂತರಾದ ಒಬ್ಬ ಅಧಿಕಾರಿಯನ್ನು ಅಲ್ಲಿಗೆ ನೇಮಿಸಿದರೆ ಅವರು ಪ್ರತಿಯೊಂದು ವ್ಯವಹಾರವನ್ನು ಸರಿಯಾಗಿ ನಡೆಸಿಕೊಂಡು ಹೋಗುತ್ತಾರೆ.

ಇನ್ನೊಂದು ವಿಷಯವನ್ನು ಹೇಳುತ್ತೇನೆ. ಅದೇನೆಂದರೆ, ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕಿನಿಂದ ರೈತರಿಗೆ ಬಹಳ ಅನುಕೂಲವಾಗುತ್ತದೆ. ಆದರೆ ರೈತ ಬ್ಯಾಂಕಿಗೆ ಅರ್ಜಿ ಹಾಕಿದ ತಕ್ಷಣ ಹಣಸಿಕ್ಕುತ್ತದೆಯೋ ಎಂದರೆ ಅದು ಇಲ್ಲ. ಎಷ್ಟೋಜನ ರೈತರು ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕಿಗೆ ಅರ್ಜಿಯನ್ನು ಹಾಕಿ 8-10 ವರ್ಷಗಳಾಗಿದ್ದರೂ ಅವು ಇನ್ನೂ ಇತ್ಯರ್ಥವಾಗಿಲ್ಲ. ಆ ಅರ್ಜಿಗಳು ಇತ್ಯರ್ಥವಾಗುವ ಹೊತ್ತಿಗೆ ರೈತ ಸತ್ತು ಹೋಗಿರುತ್ತಾನೆ, ಇಲ್ಲವೇ ಅವನ ಜಮೀನನ್ನೆಲ್ಲಾ ಇನ್ನೊಬ್ಬರಿಗೆ ಮಾರಿ ಆ ಹಣವನ್ನೆಲ್ಲಾ ಕಳೆದುಕೊಂಡಿರುತ್ತಾನೆ. ಇಂಥಾ ಒಂದು ಪರಿಸ್ಥಿತಿ ಅಲ್ಲಿದೆ. ತುಮಕೂರಿನ ಅಡಮಾನ ಬ್ಯಾಂಕಿನಲ್ಲಿ ಎಷ್ಟು ಋಣ ಚಪಾವಣೆ ನಡೆಯುತ್ತಿದೆ, ಎಷ್ಟು ಸಾರಿ ಅಲ್ಲಿ ಹಣ ದುರುಪಯೋಗವಾಗಿದೆ, ಇದನ್ನೆಲ್ಲಾ ತನಿಖೆ ಮಾಡಿದ್ದೀರಾ ಎಂದು ಕೇಳುತ್ತೇನೆ. ತುಮಕೂರು ಅಡಮಾನ ಬ್ಯಾಂಕಿಗೆ ರೈತರು ಕೊಟ್ಟಿರತಕ್ಕ ಅರ್ಜಿಗಳು ಇದುವರೆಗೂ ಇತ್ಯರ್ಥವಾಗದೆ ಇರತಕ್ಕ ಪ್ರಸಂಗವನ್ನು ನಾನು ನೋಡಿದ್ದೇನೆ. 8—10 ವರ್ಷಗಳಿಂದ ರೈತರಿಗೆ ಸಾಲ ಸಿಕ್ಕದೆ ಇರುವುದನ್ನು ನೋಡಿದ್ದೇವೆ. ಈ ಬಗ್ಗೆ ಅನೇಕ ಸುಧಾರಣೆಗಳಾಗಬೇಕು. ರೈತರಿಗೆ ಸಾಲವನ್ನು ಕೊಡುವುದರಲ್ಲಿ ಯಾವುದಾದರೂ ಒಂದು ಬ್ಯಾಂಕಿನಿಂದ ಕೊಡುವಂತೆ ಏಕರೂಪತೆಯನ್ನು ನಾವು ಮಾಡಬೇಕೆಂದು ನಾನು ಸಲಹೆ ಮಾಡುತ್ತಿದ್ದೇನೆ.

ಸಹಕಾರ ಸಂಘದಲ್ಲಿ ಏನು ಬೇಕಾದರೂ ಮಾಡುವುದಕ್ಕೆ ಇಟ್ಟುಕೊಂಡಿದ್ದಾರೆ. ಅದರಲ್ಲಿ ಒಂದು ನಿರ್ದಿಷ್ಟವಾದ ನೀತಿ ಇಲ್ಲ. ಈಗ ಮಾಡಿರತಕ್ಕ ಸಹಕಾರ ಸಂಘಗಳಲ್ಲಿ ಏನು ಬೇಕಾದರೂ ವ್ಯವಹಾರ ಮಾಡಬಹುದು. ಆದರೆ ರೈತನಿಗೆ ಏನೂ ಸಹಾಯವಾಗುತ್ತಿಲ್ಲ ; ಅವನಿಗೆ ಬಹಳ ಕಷ್ಟವಾಗಿದೆ. ಅವನ ಅರ್ಜಿಯನ್ನು ಗಮನಕ್ಕೆ ತೆಗೆದುಕೊಳ್ಳಬೇಕಾದರೆ ಬೇಕಾದಷ್ಟು ಹಣವನ್ನು ಖರ್ಚು ಮಾಡಬೇಕಾಗುತ್ತದೆ. ಅವನ ಅರ್ಜಿ ಮುಂದಕ್ಕೆ ಹೋಗಬೇಕಾದರೆ ಆರು ತಿಂಗಳು ಅವನು ಅಲೆಯಬೇಕಾಗಿದೆ. ಇಂಥ ಪರಿಸ್ಥಿತಿ ರೈತರಿಗೆ ಇದೆ. ಸುಲಭರೀತಿಯಲ್ಲಿ, ಒಂದು ತಿಂಗಳೊಳಗೆ ಅವನ ಸಾಲದ ಅರ್ಜಿಯನ್ನು ಇತ್ಯರ್ಥ ಮಾಡಿ ಸಾಲ ಸಿಕ್ಕುವ ರೀತಿ ಮಾಡಬೇಕು. ದೇಶದಲ್ಲೆಲ್ಲಾ ಸಹಕಾರ ಸಂಘಗಳನ್ನು ಮಾಡುತ್ತಿದ್ದೇವೆ, ಅದಕ್ಕಾಗಿ ಹಣವನ್ನು ಹೇರಳವಾಗಿ ಖರ್ಚು ಮಾಡುತ್ತಿದ್ದೇವೆ ಎಂದು ಹೇಳಿದರೂ ಯಾವ ಸಹಕಾರ ಸಂಘದಲ್ಲಿಯೂ ಹಣವಿರುವುದಿಲ್ಲ. ಅವು ಎಷ್ಟರಮಟ್ಟಿಗೆ ಕೆಲಸ ಮಾಡುತ್ತಿವೆ ಎಂದರೆ, ಯಾವ ಉದ್ದೇಶಕ್ಕೋಸ್ಕರ ಹಣವನ್ನು ತೆಗೆದುಕೊಂಡಿರುತ್ತಾರೆಯೋ ಆ ಉದ್ದೇಶ ಸಫಲವಾಗಿರುವುದಿಲ್ಲ. ಇಂಥ ಪರಿಸ್ಥಿತಿ ದೇಶದಲ್ಲಿ ಸಹಕಾರ ಸಂಘಗಳಿಂದ ಆಗುತ್ತಿದೆ. ಸಹಕಾರ ಸಂಘಗಳಲ್ಲಿ ಇರತಕ್ಕ ಲೋಪದೋಷಗಳನ್ನೆಲ್ಲ ಕಡಮೆ ಮಾಡಬೇಕು ಎಂದು ಹೇಳಿ ಈ ಮಸೂದೆಯನ್ನು ಸೆಲೆಕ್ಟ್ ಕಮಿಟಿಗೆ ಕಳಿಸುವುದು ಒಳ್ಳೆಯದು ಎಂದು ಸಲಹೆ ಮಾಡಿ ನನ್ನ ಭಾಷಣವನ್ನು ಮುಗಿಸುತ್ತೇನೆ.

†ಶ್ರೀ ಎ. ಎಸ್. ಪಾಟೀಲ್ (ನರಗುಂದ್).—ಅಧ್ಯಕ್ಷರೇ, ಈಗ ಸಹಕಾರಿ ತಿದ್ದುಪಡಿ ಕಾಯಿದೆಯನ್ನು ಸಭೆಯ ಮುಂದೆ ಮಾನ್ಯ ಮಂತ್ರಿಗಳು ಇಟ್ಟಿದ್ದಾರೆ. ಇದು ಬಹಳ ಅವಶ್ಯವಾದುದು. ಮೂಲ ಕಾಯಿದೆಯಲ್ಲಿ ಇದ್ದ ಕೆಲವು ಲೋಪದೋಷಗಳನ್ನು ತೆಗೆದುಹಾಕಲಿಕ್ಕೆ ಮತ್ತು ಟ್ರಿಬ್ಯುನಲ್ ಒಂದನ್ನು ಏರ್ಪಡಿಸುವುದಕ್ಕೆ ಇದನ್ನು ತಂದಿದ್ದಾರೆ. ಮುಂದೆ ಮಾಡತಕ್ಕ ಟ್ರಿಬ್ಯುನಲ್‌ನಲ್ಲಿ ಬೇಕಾದವರನ್ನು ಸೇರಿಸಲಿಕ್ಕೆ ತಮಗೆ ಬೇಕಾದವರನ್ನು ಹಾಕಲಿಕ್ಕೆ ಈ ರೀತಿ ಮಾಡಿದ್ದಾರೆಂದು ಹೇಳಿದರು. ಆ ಪ್ರಕಾರವಾಗಿ ಇಲ್ಲ. ಗುಜರಾತ, ಮಹಾರಾಷ್ಟ್ರ ಮತ್ತು ಇತರ ಕಡೆಗಳಲ್ಲಿ ಮಾದರಿ ಏನಿದೆ ಅದನ್ನು ಅನುಸರಿಸಿ ಅದೇ ರೀತಿ ಇದರಲ್ಲಿಯೂ ಅಳವಡಿಸಬೇಕು ಎಂದು ತಂದದ್ದಾಗಿದೆ.

ಮಾನ್ಯ ಸದಸ್ಯರಾದ ಲಕ್ಕಪ್ಪನವರು ತುಮಕೂರು ಜಿಲ್ಲೆಯೊಳಗೆ ಇರುವ ಯೂನಿಯನ್ ವ್ಯವಹಾರಗಳು ಸರಿಯಿಲ್ಲವೆಂದು ಹೇಳಿ ರಾಜ್ಯದ ಎಲ್ಲ ಕಡೆಗೂ ಅದೇ ರೀತಿ ಇದೆ, ಎಲ್ಲ ಕಡೆಯೂ ಅಂಥ ಜನರೇ ಇದ್ದಾರೆ ಎಂದು ಏನು ಕಲ್ಪನೆ ಮಾಡುತ್ತಾರೆಯೋ ಅದು ಸರಿಯಲ್ಲವೆಂದು ಹೇಳುತ್ತೇನೆ. ರಾಜ್ಯಮಟ್ಟದ ಮತ್ತು ಜಿಲ್ಲಾಮಟ್ಟದ ಯೂನಿಯನ್‌ಗಳನ್ನು ಚೆನ್ನಾಗಿ ಬೆಳೆಸಿಕೊಂಡು ಬರಬೇಕು. ಯಾರೋ ಒಬ್ಬಿಬ್ಬರು ವ್ಯಕ್ತಿಗಳನ್ನು ಗಮನದಲ್ಲಿಟ್ಟುಕೊಂಡು ಇಡೀ ಚಳುವಳಿಯನ್ನೇ ವಿನಾಶಕಾರಿ ಎನ್ನುವಂಥ ಮಾತನ್ನು ಹೇಳುವುದು ಇಂಥ ದೊಡ್ಡ ಮನುಷ್ಯರಿಗೆ ಸರಿಯಲ್ಲವೆಂದು ಹೇಳಬಯಸುತ್ತೇನೆ.

(ಶ್ರೀ ಎ. ಎಸ್. ಪಾಟೀಲ್)

ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕುಗಳ ಬಗ್ಗೆ ಮಾನ್ಯ ಸದಸ್ಯರು ಹೇಳಿದ್ದಕ್ಕೆ ನಮ್ಮ ಮಾನ್ಯ ಸಹಕಾರ ಮಂತ್ರಿಗಳು ಸರಿಯಾದ ಉತ್ತರ ಕೊಡುತ್ತಾರೆಂದು ಗೊತ್ತಿದೆ. ಇದರಲ್ಲಿ ಅನೇಕ ಸುಧಾರಣೆಗಳು ಆಗಿದೆ. ಮೂರು ಸಾವಿರ ರೂಪಾಯಿವರೆಗೆ ಪ್ರೈಮರಿ ಲ್ಯಾಂಡ್‌ಮಾರ್ಟಗೇಜ್ ಬ್ಯಾಂಕುಗಳು ಕೊಡಲಿಕ್ಕೆ ಬರುತ್ತದೆ. ಸಾಲಗಳನ್ನು ಕೊಡಲು ಎರಡು ಮೂರು ವರ್ಷವಾಗುತ್ತದೆ ಎಂದು ಅನೇಕ ಮಾನ್ಯ ಸದಸ್ಯರು ಹೇಳಿದರು. ಹಿಂದಿನ ಹಳೆಯ ಕಥೆಯನ್ನೇ ಹೇಳುತ್ತಿದ್ದಾರೆ. ಈಚೆಗೆ ಯಾವರೀತಿ ಸಹಕಾರ ಪದ್ಧತಿಯಲ್ಲಿ ಪ್ರಗತಿಯಾಗಿದೆ ಎಂಬುದನ್ನು ನೋಡದೆ ಹೇಳುತ್ತಿದ್ದಾರೆ. ಈಗ ಲ್ಯಾಂಡ್‌ಮಾರ್ಟ್‌ಗೇಜ್ ಬ್ಯಾಂಕಿನಿಂದ ಸಾಲ ಕೊಡುವುದರಲ್ಲ ಅನೇಕ ತರಹ ಸುಧಾರಣೆಗಳಾಗಿವೆ. ಕೆಲವೊಂದು ಮಹತ್ವದ ಸುಧಾರಣೆಗಳೂ ಬಂದಿವೆ ಎಂದು ಕಾಣುತ್ತದೆ. ಒಬ್ಬ ರೈತ ತನ್ನ ಮಾಲೀಕನಿಂದ ಹೊಲವನ್ನು ಪಡೆಯಲಿಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಒಬ್ಬರಿಗೆ ನಾಲ್ಕು ಎಕರೆ ಜಮೀನಿದ್ದರೆ ಅದನ್ನು ಎಕನಾಮಿಕ್ ಹೋಲ್ಡಿಂಗ್ ಮಾಡುವುದಕ್ಕೆ ಅವಕಾಶವಿದೆ. ಒಕ್ಕಲುತನದ ಅಭಿವೃದ್ಧಿ, ಭೂಮಿಯ ಅಭಿವೃದ್ಧಿ ವಿಚಾರ ಏನು ಬಂದಿದೆ ಅದಕ್ಕೆ ಸಂಬಂಧಪಟ್ಟ ಹಾಗೆ ಹೆಚ್ಚು ಪ್ರಶಂಸನೀಯವಾದ ಕಲಮುಗಳ ಬಗ್ಗೆ ಪ್ರಶಂಸೆ ಮಾಡುವ ಬದಲು ಟೀಕೆ ಮಾಡುವ ಅಭಿಪ್ರಾಯ ಇರಬಾರದು, ಯೋಗ್ಯವಾದವುಗಳಿಗೆ ಪುರಸ್ಕಾರ ಕೊಡಬೇಕು. ಟ್ರಿಬ್ಯೂನಲ್‌ನಲ್ಲಿ ಅಡ್ವೋಕೇಟರನ್ನು ಏಕೆ ನೇಮಿಸಬೇಕು ಎನ್ನುವ ವಾದ ಬೇಕಾದಷ್ಟು ಇದೆ. ನಾನ್ ಅಫಿಷಿಯಲ್ ಮೆಂಬರು ಇರಲಿಕ್ಕೇ ಬೇಕು. ಅವರು ಇದ್ದರೆ ಸುಗಮವಾಗಿ ಕೆಲಸಕಾರ್ಯಗಳು ಆಗುತ್ತವೆ. ಹೊರಗಿನ ವಿಚಾರಗಳು ಯಾವುವೂ ಅಧಿಕಾರಿಗಳಿಗೆ ತಿಳಿಯುವುದಿಲ್ಲ. ಆಫೀಸಿನಲ್ಲಿ ಕುಳಿತಿರುವವರು ಅದೇ ವಾತಾವರಣದಲ್ಲಿರುತ್ತಾರೆ. ಆದ್ದರಿಂದ ಹೊರಗಿನವರು ಇರಬೇಕು ಎನ್ನುವಂಥ ಮಾತನ್ನು ಹೇಳಿದ್ದಾರೆ. ಲ್ಯಾಂಡ್ ಡೆವೆಲಪ್‌ಮೆಂಟ್ ಬ್ಯಾಂಕುಗಳಿಗೆ ಸಂಬಂಧಪಟ್ಟಹಾಗೆ ಬಹಳ ಉತ್ತಮವಾದ ತಿದ್ದುಪಾಟುಗಳನ್ನು ತಂದಿದ್ದಾರೆ. ಅವುಗಳನ್ನು ಸ್ವೀಕಾರ ಮಾಡಬೇಕು ಎಂದು ಹೇಳುತ್ತೇನೆ.

ಇನ್ನು ಕೆಲವೊಂದು ಮಹತ್ವದ ಅಂಶಗಳು ಬಂದಿವೆ. ಮುಖ್ಯವಾಗಿ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕುಗಳಲ್ಲಿ ಮಹಾರಾಷ್ಟ್ರದವರು ಮಹತ್ವದ ಕಾಯಿದೆ ಮಾಡಿರುವುದನ್ನು ನಮ್ಮ ಮಂತ್ರಿಗಳು ಅಳವಡಿಸಿ ಅದನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿಗೆ ಅರ್ಜಿಯನ್ನು ಕೊಟ್ಟಮೇಲೆ ಜಮೀನಿನ ಹಕ್ಕುಬಾಧ್ಯತೆ ಏನಿದೆ ಅದನ್ನು ಸರಿಯಾಗಿ ನಿರ್ಣಯ ಮಾಡುವುದು ಕಠಿಣ. ಕೋರ್ಟಿನಲ್ಲಿ ಲಿಟಿಗೇಷನ್ ಆಗುವಂಥ ಪ್ರಸಂಗಗಳು ಬರುತ್ತವೆ ಎಂದು ತಿಳಿದುಕೊಂಡಿದ್ದೇನೆ. ಕ್ಲಾಜ್ 82 ಬಿ, ಪ್ರಕಾರ ಸಾರ್ವಜನಿಕರಿಗೆ ನೋಟೀಸ್ ಕೊಟ್ಟು ಟೈಟಲ್ ಯಾರದಿದ್ದರೆ ಅವರು ತಕರಾರು ಹಾಕಬೇಕು. ಒಂದು ವೇಳೆ ತಕರಾರು ಮಾಡದೆ ಇದ್ದರೆ ಅದು ಕನಕ್ಲೂಸಿವ್ ಎನ್ನುವಂಥ ಮಹತ್ವದ ತಿದ್ದುಪಡಿಯನ್ನು ಮಾಡಿದ್ದಾರೆ. ಅದು ನಮ್ಮ ಮುಂದೆ ಇದೆ. ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿನವರಿಗೆ ಎಷ್ಟು ಭದ್ರತೆ ಬೇಕೋ ಅಷ್ಟು ಭದ್ರತೆಯು ಸಿಕ್ಕಿ ಸಾಕಷ್ಟು ವ್ಯವಹಾರ ಮಾಡಲಿಕ್ಕೆ ಅವರಿಗೆ ಉತ್ಸಾಹ ಬರುತ್ತದೆ ಮತ್ತು ಜನರಲ್ಲಿ ಸಹಿತ ಬ್ಯಾಂಕಿನವರ ಕೂಡ ವ್ಯವಹಾರ ಮಾಡಲಿಕ್ಕೆ, ಡಿಬೆಂಚರ್ ಹಣ ಕೊಡಲಿಕ್ಕೆ, ಎಲ್ಲ ರೀತಿಯಿಂದ ಪುಷ್ಟೀಕರಣ ಸಿಕ್ಕುತ್ತದೆ, ಸರಿಯಾದ ಕೆಲಸವನ್ನು ಮಾಡಿಕೊಳ್ಳಲಿಕ್ಕೆ ಬರುತ್ತದೆ.

ಇಷ್ಟನ್ನು ಹೇಳಿ ಈ ತಿದ್ದುಪಡಿ ವಿಧೇಯಕಕ್ಕೆ ಬೆಂಬಲ ಕೊಡಬೇಕೆಂದು ತಿಳಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ).—ಅಧ್ಯಕ್ಷರೇ, ಸಹಕಾರ ಸಂಘಗಳ ಅಧಿನಿಯಮಕ್ಕೆ ತಿದ್ದುಪಡಿಯನ್ನು ತಂದಿರತಕ್ಕದ್ದು ಸಮಂಜಸ. ಕೆಲವು ಕಡೆ ಸರ್ಕಾರ ಈ ಸಹಕಾರ ಸಂಘಗಳನ್ನು ಯಾವ ರೀತಿ ನಡೆಯುವುದಕ್ಕೆ ಬಿಟ್ಟಿದೆ ಎನ್ನುವುದನ್ನು ನೋಡಿದರೆ ಇನ್ನುಮುಂದೆ ರಾಜ್ಯದಲ್ಲಿ ಸಹಕಾರ ಸಂಘಗಳು ಬೇಡ ಎನ್ನತಕ್ಕ ಭಾವನೆ ಯಾರಿಗಾದರೂ ಬರತ್ತದೆ. ನಮ್ಮ ಸ್ನೇಹಿತರಾದ ಕೊಂಡಜ್ಜಿ ಬಸಪ್ಪನವರೂ ಮತ್ತು ರಾಮಕೃಷ್ಣ ಹೆಗ್ಗಡೆ ಅವರೂ ಈ ಅಧಿಕಾರಕ್ಕೆ ಬಂದಾಗ ನನಗನ್ನಿಸಿತ್ತು, ಈ ರಾಜ್ಯದಲ್ಲಿ ಸಹಕಾರ ಸಂಘಗಳಲ್ಲಿ ನಡೆಯುವಂಥ ದೋಷಗಳೆಲ್ಲ ದೂರವಾಗಿ ನಿಜವಾಗಿಯೂ ಬಡವನಿಗೆ ಕಾಮಧೇನುವಾಗುತ್ತದೆ ಎಂದು ನಾನು ತಿಳಿದಿದ್ದೆ. ಆದರೆ ಕಳೆದ ಎರಡೂ ಕಾಲು ವರ್ಷದ ಅವಧಿಯಲ್ಲಿ ಇವರಿಬ್ಬರೂ ಅದಕ್ಕೆ ಕುಠಾರಪ್ರಾಯರಾಗಿದ್ದಾರೆಯೋ ಏನೋ ಎನ್ನುವ ಭಾವನೆ ನನ್ನಲ್ಲಿ ಮೂಡಿದೆ. ಸಹಕಾರ ಸಂಘಗಳಲ್ಲಿ ನಡೆದಿರತಕ್ಕ ಹಣದ ದುರುಪಯೋಗದ ಸಂಗತಿ ದುರ್ದೈವದ ಸಂಗತಿ. ಅವರು ತಮ್ಮ ನೀತಿ ನಿಯಮ ಧೋರಣೆ ಏನೇ ಇರಲಿ ಬಡವನಿಗೋಸ್ಕರ ಹಣ ಕೊಡುವುದಕ್ಕೆ, ಬಡವನ ಜಮೀನಿನ ಅಭಿವೃದ್ಧಿಗೋಸ್ಕರ ಹಣ ಕೊಡುವುದಕ್ಕೆ ಹೀಗೆ ಏನೇನು ಹೇಳಿಕೊಂಡು ಬಂದರು. ಇವತ್ತು ಅವರು ಹೇಳುವ ಪ್ರಕಾರ 120 ಕೋಟಿ ರೂಪಾಯಿ ವ್ಯವಹಾರ ನಡೆಸತಕ್ಕ.........

MR. DEPUTY SPEAKER.—The House will now rise for lunch and meet after half an hour.

The House adjourned for recess at Three of the Clock and reassembled at Thirty Minutes past Three of the Clock.

[MR. SPEAKER in the Chair.]

†ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸ್ವಾಮಿ ಅಧ್ಯಕ್ಷರೆ, ನಾನು ಮೂಲ ಸಹಕಾರ ಸಂಘಗಳ ಕಾನೂನಿಗೆ ತಂದಿರತಕ್ಕ ತಿದ್ದುಪಡಿಯ ವಿಷಯವನ್ನು ಮಾತನಾಡುತ್ತಿದ್ದೆ. ಸ್ವಾಮಿ, ಸಹಕಾರ ಸಂಘಗಳು ಪರಿಣಾಮಕಾರಿಯಾದ ರೀತಿಯಲ್ಲಿ ಕೆಲಸ ಮಾಡಬೇಕಾದರೆ, ನೀತಿಬಾಹಿರವಾಗಿಲ್ಲದೇಯಿರುವಂತೆ ಕೆಲಸ ಮಾಡಬೇಕಾದರೆ ಸಹಕಾರ ಸಂಘಗಳ ಖಾತೆ ಅಥವಾ ಬೇರೆ ಯಾವುದಾದರೂ ಖಾತೆ ಸರಿಯಾಗಿ ನಡೆಯಬೇಕಾದರೆ ಅದನ್ನು ವಹಿಸಿಕೊಂಡಿರುವ ಸೆಕ್ರೆಟೇರಿಯಟ್ ಮತ್ತು ಮಂತ್ರಿಗಳು ಒಳ್ಳೆಯದು ಯಾವುದು, ಕೆಟ್ಟದ್ದು ಯಾವುದು ಎಂಬುದನ್ನು ತಿಳಿದು ಕೆಲಸ ಮಾಡಿದರೆ ಸಾಧ್ಯ. ನಾವು ಹಿಂದೆ ಹೇಳಿದುದರ ಮೇಲೆ ಈಗ ಈ ತಿದ್ದುಪಡಿಯನ್ನು ತಂದಿದ್ದಾರೆ. ನಾವು ಹೇಳಿದುದರ ಪ್ರಾಮುಖ್ಯತೆಯನ್ನು ಈಗ ತಿಳಿದುಕೊಂಡಿದ್ದಾರೆ. ಕರಡು ಮಸೂದೆ ಚರ್ಚೆಯಾಗುವಾಗ ಈ ಸಭೆಯಲ್ಲಿ ಹೇಳಿದ್ದೇವೆ. ಆದರೆ ಆ ಹೊತ್ತು ಸಹಕಾರ ಮಂತ್ರಿಗಳು ತಾವು ಮಾಡಿದುದೇ ಸರಿ ಎಂದು ವಾದ ಮಾಡಿ ಅದಕ್ಕೆ ಒಪ್ಪಿಗೆಯನ್ನು ತೆಗೆದುಕೊಂಡರು. ಒಂದು ಟ್ರಿಬ್ಯುನಲ್ ಬೇಕೆಂದು ನಾವು ಹೇಳಿದ್ದೆವು, ಅದಕ್ಕೆ ರೆವಿನ್ಯೂ ಅಪೆಲೇಟ್ ಟ್ರಿಬ್ಯುನಲ್‌ಗೆ ಎರಡು ಬೆಂಚುಗಳಿವೆ, ಅದಕ್ಕೇ ಸಾಕಷ್ಟು ಕೆಲಸವಿಲ್ಲವಾದುದರಿಂದ ಇನ್ನೊಂದು ಟ್ರಿಬ್ಯುನಲ್ ಮಾಡುವ ಅವಶ್ಯಕತೆ ಇಲ್ಲವೆಂದು ಹೇಳಿದರು. ಆದರೆ ಈ ಹೊತ್ತು ಅನುಭವದ ಮೇಲೆ ಇದಕ್ಕೇ ಒಂದು ಟ್ರಿಬ್ಯುನಲ್ ಬೇಕೆಂದು ಹೇಳುತ್ತಾರೆ. ಯಾವ ಆಧಾರದ ಮೇಲೆ ಇದನ್ನು ರಚನೆ ಮಾಡುತ್ತಿದ್ದಾರೆ? ರೆವಿನ್ಯೂ ಅಪೆಲೇಟ್ ಟ್ರಿಬ್ಯುನಲ್‌ಗೆ ಕೆಲಸ ಎಷ್ಟಿದೆ, ಸಹಕಾರ ಸಂಘಗಳಿಗೆ ಸಂಬಂಧಪಟ್ಟ ಅಪೀಲ್ ಕೇಸುಗಳೆಷ್ಟು ಎಂಬುದನ್ನೆಲ್ಲ ಈ ತಿದ್ದುಪಡಿಯನ್ನು ತಂದಾಗ ಹೇಳಿದ್ದರೆ ಚೆನ್ನಾಗಿತ್ತು. ಪ್ರತಿಯೊಂದಕ್ಕೂ ಟ್ರಿಬ್ಯುನಲ್ ಮಾಡಬೇಕೆಂದರೆ ಎಷ್ಟು ಟ್ರಿಬ್ಯುನಲ್‌ಗಳನ್ನು ಮಾಡುತ್ತಾರೆ? ಈ ರಾಜ್ಯದಲ್ಲಿ ಲೇಬರ್ ಅಪೆಲೇಟ್ ಟ್ರಿಬ್ಯುನಲ್ ಇದೆ, ಸ್ಟೇಟ್ ಟ್ರಾನ್ಸ್‌ಪೋರ್ಟ್ ಅಥಾರಿಟಿ ಇದೆ, ಟ್ರಿಬ್ಯುನಲ್ ಇದೆ, ಹೀಗಿರುವಾಗ ಸಹಕಾರ ಸಂಘಗಳಿಗೂ ಒಂದು ಟ್ರಿಬ್ಯುನಲ್ ಬೇಕೆಂದು ಹೇಳುತ್ತಿದ್ದಾರೆ. ಒಂದೊಂದು ಖಾತೆಯಲ್ಲಿಯೂ ಸಂಭವವಾಗತಕ್ಕ ಕೇಸುಗಳನ್ನು ತೀರ್ಮಾನ ಮಾಡುವುದಕ್ಕೆ ಒಂದೊಂದು ಟ್ರಿಬ್ಯುನಲ್ ನೇಮಕ ಮಾಡಿಕೊಂಡು ಹೋದರೆ ಹೇಗೆ? ಹೀಗಾದರೆ ಅವರ ಕಡೆ ಅತೃಪ್ತರಾಗಿರುವ ಜನರಿಗೆಲ್ಲ ಕೆಲಸ ಸಿಕ್ಕಬಹುದೆಂದು ತೋರುತ್ತದೆ. ಯಾರಿಗೆ ಮಂತ್ರಿಗಳ ಸ್ಥಾನ ಸಿಕ್ಕಲಿಲ್ಲ, ಚೇರ್ಮನ್ ಸ್ಥಾನ ಸಿಕ್ಕಲಿಲ್ಲವೆಂದು ಯಾರು ಅತೃಪ್ತರಾಗಿದ್ದಾರೋ, ಯಾರು ಚುನಾವಣೆಯಲ್ಲಿ ಸೋತಿದ್ದಾರೋ ಯಾರು ಯಾರಿಗೆ ಏನಾದರೂ ಸಹಾಯ ಮಾಡಬೇಕೆಂದಿದ್ದಾರೋ ಅಂಥವರಿಗೆ ಇದರಿಂದ ಒಳ್ಳೆಯದಾಗುವುದೆಂದು ತಿಳಿದುಕೊಂಡಿದ್ದೇನೆ. ಹೀಗೆಯೇ ಒಂದೊಂದು ಕಾನೂನಿನ ಸಂಬಂಧವಾಗಿ ತಕರಾರುಗಳು ಬಂದರೆ ಒಂದೊಂದು ಟ್ರಿಬ್ಯುನಲ್ ಮಾಡಬಹುದು. ನಾಳೆ ಪಂಚಾಯಿತಿ ರಾಜ್ಯದ ಕಾನೂನು ಮಾಡುತ್ತಾರೆ, ಅದರ ಸಂಬಂಧವಾಗಿ ಬಂದ ವಿವಾದವನ್ನು ಅಥವಾ ವಿವಾದಗಳನ್ನು ತೀರ್ಮಾನ ಮಾಡುವುದಕ್ಕೆ ಒಂದು ಟ್ರಿಬ್ಯುನಲ್, ಅದಕ್ಕೆ ಒಬ್ಬರು ಚೇರ್ಮನ್, ಒಬ್ಬರು ವೈಸ್-ಚೇರ್ಮನ್, ಸದಸ್ಯರು ಹೀಗೆ ಐದು ಜನರಿಗೆ ಕೆಲಸಗಳನ್ನು ಕೊಟ್ಟಹಾಗಾಗುತ್ತದೆ. ಖಾದಿ ಬೋರ್ಡಿನಂತೆ ಒಂದೊಂದು ಟ್ರಿಬ್ಯುನಲ್ ಮಾಡಿಕೊಂಡು ಹೋದರೆ, ಹೇಗೆ? ಆಸ್ಟೆರಿಟಿ, ರಿಟ್ರೆಂಚ್‌ಮೆಂಟ್ ಮಾಡಬೇಕೆಂಬ ಧ್ಯೇಯವೇನಿದೆಯೋ ಅದಕ್ಕೆ ವಿರೋಧವಾಗಿ ಹೀಗೆ ಟ್ರಿಬ್ಯುನಲ್ ಮಾಡುತ್ತಿರುವುದು ಅಷ್ಟು ಸಮಂಜಸವಾಗಿ ಕಾಣುವುದಿಲ್ಲ. ಇದರಲ್ಲಿ ಯಾರು ಯಾರು ಇರಬೇಕು ಎಂದರೆ, ಚೇರ್ಮನ್ ಒಬ್ಬ ಜಿಲ್ಲಾ ನ್ಯಾಯಾಧೀಶರಾಗಿ ಮೂರು ವರ್ಷವಾದರೂ ಅನುಭವ ಪಡೆದಿರಬೇಕು, ಒಬ್ಬ ಸದಸ್ಯರು ಜಾಯಿಂಟ್ ರಿಜಿಸ್ಟ್ರಾರ್, ಇನ್ನೊಬ್ಬ ಸದಸ್ಯರು ಹತ್ತು ವರ್ಷಗಳ ಕಾಲವಾದರೂ ಸಹಕಾರ ಸಂಘಗಳ ಸಂಬಂಧವಾದ ಕೇಸುಗಳ ಅನುಭವವುಳ್ಳ ಅಡ್ವೋಕೇಟ್. ಹತ್ತು ವರ್ಷ ಸಹಕಾರ ಕ್ಷೇತ್ರದಲ್ಲಿ ಅನುಭವ ಪಡೆದಿದ್ದಾರೆ, ಆ ಕ್ಷೇತ್ರದಲ್ಲಿದ್ದರು ಎಂದು ಅವರಿಗೆ ಯಾರು ಸರ್ಟಿಫಿಕೇಟ್ ಕೊಟ್ಟಿರುತ್ತಾರೆ? ಒಬ್ಬ ಡಿಸ್ಟ್ರಿಕ್ಟ್ ಜಡ್ಜ್‌ಗೆ ಏನು ಅನುಭವ ಎಂದು ಯಾರು ಹೇಳುವವರು? ಇನ್ನು ಜಾಯಿಂಟ್ ರಿಜಿಸ್ಟ್ರಾರ್ ಸಂಬಂಧವಾಗಿ ಒಂದು ದುಃಖದ ಸಂಗತಿ ಹೇಳಬೇಕಾಗಿದೆ. ಅಧ್ಯಕ್ಷರು

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಆಗ ಮಂತ್ರಿಮಂಡಲದಲ್ಲಿದ್ದರು, ಆಗ ರೆವಿನ್ಯೂ ಟ್ರಿಬ್ಯುನಲ್ ಮಾಡುವಾಗ ನಾವು ವಿರೋಧ ಮಾಡಿದೆವು. ರೆವಿನ್ಯೂ ಮಂತ್ರಿಗಳ ಸಂಬಂಧಿಕರು ಒಬ್ಬರನ್ನು ಪ್ರಮೋಷನ್ ಕೊಟ್ಟು ಅಲ್ಲಿಗೆ ತೆಗೆದುಕೊಳ್ಳಲು ಅಪಲೇಟ್ ಟ್ರಿಬ್ಯುನಲ್ ಮಾಡುತ್ತಿದ್ದೀರಿ ಎಂದು ನಾವು ಹೇಳಿದೆವು. 1957 ರಲ್ಲಿ ಮತ್ತು 1959 ರಲ್ಲಿ ಆಗದೇ ಇರುವುದು, ಈಗ 1964ರಲ್ಲಿ ಒಂದು ಅಪಲೇಟ್ ಟ್ರಿಬ್ಯುನಲ್ ಮಾಡಿ ಅದಕ್ಕೆ ಒಬ್ಬ ಜಾಯಿಂಟ್ ರಿಜಿಸ್ಟ್ರಾರ್‌ನ್ನು ನೇಮಕ ಮಾಡುತ್ತಿದ್ದಾರೆ. ಹಣವನ್ನು ಖರ್ಚು ಮಾಡುವುದರಲ್ಲಿ ಒಬ್ಬರು ಜಾಯಿಂಟ್ ರಿಜಿಸ್ಟ್ರಾರ್ ಭಾಗಿಯಾಗುತ್ತಾರೆ. ಇನ್ನಿಬ್ಬರಿಗೇನು ಕೆಲಸವಿರುತ್ತದೆ? ಇದಕ್ಕೆ ಬದಲು ರೆವಿನ್ಯೂ ಟ್ರಿಬ್ಯುನಲ್‌ಗೆ ಒಬ್ಬರು ಜಾಯಿಂಟ್ ರಿಜಿಸ್ಟ್ರಾರ್ ಕೊಡಬಹುದು. ಅಲ್ಲೇ ಸಹಕಾರ ಸಂಘಗಳಿಗೆ ಸಂಬಂಧಪಟ್ಟ ಕೆಲಸವನ್ನೂ ಮಾಡಿಸಬಹುದು. ಅದುಬಿಟ್ಟು ಇನ್ನೊಂದು ಟ್ರಿಬ್ಯುನಲ್ ಮಾಡುವುದು ಸರಿಯಲ್ಲ ಸರ್ಕಾರದಲ್ಲಿ ಈಹೊತ್ತು ಅಭಿವೃದ್ಧಿ ಕಾರ್ಯಗಳಿಗೆ ಹಣವಿಲ್ಲದಿರುವಾಗ, ದೇಶದಲ್ಲಿ ಇನ್ನೊಂದು ಟ್ರಿಬ್ಯುನಲ್ ನೇಮಕ ಮಾಡಿ, ಅದಕ್ಕೆ ಸಪ್ಲಿಮೆಂಟರಿ ಗ್ರಾಂಟು ಪಡೆಯುವುದು ಸರಿಯಲ್ಲವೆಂದು ಹೇಳುತ್ತೇನೆ.

ಕ್ಲಾಜು 4ರಲ್ಲಿ ಈ ರೀತಿ ಒಂದು ಪ್ರೊವಿಜೋ ಇದೆ :—

> "Provided that no co-operative society shall be registered if it is likely to be economically unsound, or the registration of which may have an adverse effect on development of the co-operative movement."

ಇದರ ಅರ್ಥ ನನಗೆ ಆಗುವುದಿಲ್ಲ. ಕೂಸು ಹುಟ್ಟುವುದಕ್ಕೆ ಮುಂಚೆ ಎಷ್ಟು ಅಳತೆ ಟೋಪಿ ಹೊಲಿಸಬೇಕು ಎಂಬ ವಿಚಾರ ಇದ್ದ ಹಾಗೆ ಇದೆ. ಅನ್‌ಸೌಂಡ್ ಎಂದು ಯಾವ ಆಧಾರದ ಮೇಲೆ ನಿರ್ಣಯಕ್ಕೆ ಬರುತ್ತೀರಿ ಎಂದು ಕೇಳುತ್ತೇನೆ, ಇದರಲ್ಲಿ ಯಾವುದೋ ಒಂದು ರಾಜಕೀಯ ದುಷ್ಟಶಕ್ತಿ ಅಡಗಿದೆ ಎಂದು ನನಗೆ ಅನಿಸುತ್ತದೆ. ತಮಗೆ ಬೇಡವಾದಂಥ ಒಂದು ಸಂಸ್ಥೆ ಇದ್ದರೆ ಅದಕ್ಕೆ ಏನಾದರೂ ಒಂದು ರೀತಿಯ ಮಸಿ ಬಳಿದು, ಕಪ್ಪುಬಳಿದು, ಅಂಥ ಸೊಸೈಟಿ ರಿಜಿಸ್ಟರ್ ಮಾಡುವುದು ಬೇಡ ಎಂದು ಮಾಡಲು ಸಾಧ್ಯವಿದೆ. ಸಹಕಾರ ಸಂಘಗಳ ಧ್ಯೇಯ ಉನ್ನತವಾಗಿದೆ. ಆದರೆ ಇಂದು ದೇಶದಲ್ಲಿ ಇರತಕ್ಕ ಸಹಕಾರ ಸಂಘಗಳ ಪರಿಸ್ಥಿತಿ ಅಸ್ತವ್ಯಸ್ತವಾಗಿದೆ. ಉನ್ನತ ಧ್ಯೇಯಕ್ಕೋಸ್ಕರ ಹೋರಾಟ ಮಾಡಬೇಕು ಬಡವರಿಗೆ ಸಹಾಯ ದೊರೆಯಬೇಕು ಎಂಬ ಉದ್ದೇಶ ಇದೆ ಆದುದರಿಂದ ಈ ಪ್ರೊವಿಜೋನಲ್ಲಿ ಅನ್‌ಸೌಂಡ್ ಎಂದು ಇರುವುದು ಸರಿಯಾಗಿಲ್ಲ. ಈ ಪ್ರೊವಿಜೋ ಬಹಳ ಅಪಾಯಕಾರಿಯಾಗಿರುವುದರಿಂದ ಇದನ್ನು ತೆಗೆದುಹಾಕಬೇಕು ಎಂದು ನಾನು ಸಲಹೆ ಮಾಡುತ್ತೇನೆ.

ಇನ್ನು ಕ್ಲಾಜ್ 6 ಅಮೆಂಡ್‌ಮೆಂಟ್ ಆಫ್ ಸೆಕ್ಷನ್ 7ನಲ್ಲಿ ರಿಜಿಸ್ಟ್ರೇಷನ್ ಬಗ್ಗೆ ದೀರ್ಘವಾಗಿ ಹೇಳಿದೆ.

> "If the Registrar is unable to dispose of an application for registration within a period of six months...... he shall make a report to the State Government......"

ಈ ತಿದ್ದುಪಡಿಯಿಂದ ಏನು ಕಂಡುಬರುತ್ತದೆ ಎಂದರೆ, ರಿಜಿಸ್ಟ್ರೇಷನ್ ಮಾಡುವ ವಿಚಾರದಲ್ಲಿ ಸರಕಾರ ಹಸ್ತಕ್ಷೇಪ ಮಾಡುವುದಕ್ಕಾಗಿ ಈ ತಿದ್ದುಪಡಿ ತರಲಾಗಿದೆ ಎಂದು ಅನಿಸುತ್ತದೆ. ಒಂದು ಕೋ-ಆಪರೇಟಿವ್ ಸೊಸೈಟಿಯ ವಿಚಾರ ರಿಜಿಸ್ಟ್ರಾರ್ ಅವರಿಗೆ ತಿಳಿಯದೇ ಇರತಕ್ಕಂಥ ವಿಷಯ ಸರಕಾರಕ್ಕೆ ಹೇಗೆ ಗೊತ್ತಾಗುತ್ತದೆ? ಇದರಲ್ಲಿ ಏನಾದರೂ ರಾಜಕೀಯ ಕೈವಾಡ ಇರುತ್ತದೆ ಎಂಬ ಭಾವನೆ ಉಂಟಾಗುತ್ತದೆ. ನಿಮ್ಮವರು ಯಾರೋ ಇರುತ್ತಾರೆ. ಅಂಥ ಸೊಸೈಟಿ ರಿಜಿಸ್ಟರ್ ಮಾಡಬೇಕೆಂಬ ಆಶೆ ನಿಮಗೆ ಇರುತ್ತದೆ, ಆದುದರಿಂದ ಈ ಪ್ರೊವಿಜನ್ ಇಟ್ಟುಕೊಂಡಿರುತ್ತೀರಿ.

ಶ್ರೀ ಕೊಂಡಜ್ಜಿ ಬಸಪ್ಪ.—ಆರು ತಿಂಗಳುಗಳೊಳಗೆ ರಿಜಿಸ್ಟರ್ ಮಾಡದೇ ಹೋದರೆ ಸರಕಾರಕ್ಕೆ ತಿಳಿಸಬೇಕು ಎಂದು ಮಾತ್ರ ಇದೆ. ಆದರೆ ಸರಕಾರ ಸೊಸೈಟಿ ರಿಜಿಸ್ಟರ್ ಮಾಡುವುದಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈ ಪ್ರೊವಿಜನ್ ಇಟ್ಟುಕೊಂಡಿರುವುದು ಏನು ತೋರಿಸುತ್ತದೆ ಎಂದರೆ, ಸರಕಾರ ಇದರಲ್ಲಿ ಹಸ್ತಕ್ಷೇಪ ಮಾಡುವುದಕ್ಕೆ ಅವಕಾಶ ಇದೆ. ಈ ರೀತಿ ಹಸ್ತಕ್ಷೇಪ ಮಾಡುವುದಕ್ಕೆ ಅವಕಾಶ ಇರಬಾರದು. ಸಹಕಾರ ಸಚಿವರು ಇದನ್ನು ಸೂಕ್ತರೀತಿಯಲ್ಲಿ ತಿದ್ದುಪಡಿ ಮಾಡುವುದಕ್ಕೆ ಗಮನ ಕೊಡಬೇಕೆಂದು ಹೇಳುತ್ತೇನೆ.

ಇನ್ನು ಅಮೆಂಡ್‌ಮೆಂಟ್ ಆಫ್ ಸೆಕ್ಷನ್ 16. ಅದು ಈ ರೀತಿ ಇದೆ :

"(2) No co-operative society shall, withot sufficient cause, refuse admission to membership to any person duly qualified therefore under the provisions of this Act and its bye-laws.

ಇದರಲ್ಲಿರುವ 'ಸಫೀಶಿಯಂಟ್ ಕಾಜ್' ಎಂಬ ಪದದ ಅರ್ಥವೇನು ? ಬ್ಲಾಕ್ ಲಿಸ್ಟಿನಲ್ಲಿರಬೇಕೆ ? ಡಿಫಾಲ್ಟರ ಆಗಿರಬೇಕೆ ? ಇದರಲ್ಲಿ ಏನಾದರೂ ಕೈವಾಡ ಇರಬೇಕು ಎಂದು ಅನಿಸುತ್ತದೆ. ಸಫಿಶಿಯೆಂಟ್ ಕಾಜ್‌ಅಂದರೆ ಏನು ? ತಮಗೆ ಬೇಡವಾದವರು ಯಾರಾದರೂ ಬಂದರೆ ಇಲ್ಲಾ ಎಂದು ಹೇಳಲು ಅವಕಾಶ ಇದೆ.

Sri KONDAJJI BASAPPA.—Disqualifications are enumerated in section 16. It is in the original Act.

Sri C. J. MUCKANNAPPA.—What are those sufficient causes not to enlist him as a member ? They must say that he is blacklisted or that he is a defaulter or that he is so and so. Then again, an amendment is brought to sub-section (3) of section 17.

ಇದು ಏತಕ್ಕೆ ಸ್ವಾಮಿ ? ಈಗ ಇರುವ ಪ್ರಕಾರ ಹೋದರೆ ಏನು ಆಗುತ್ತದೆ ?

The section says that no individual being a member of a co-operative credit society shall be eligible for admission as a member of any other society with the general of special... The explanation is—for the purpose of this section, co-operative credit society means, a society which lends or gives credit to its members in cash or in kind.

ಸೆಕ್ಷನ್ 17 ತಿದ್ದುಪಡಿಮಾಡುವ ಉದ್ದೇಶವೇನು ಸ್ವಾಮಿ ? ಮೊದಲು ಇರುವ ಪ್ರಕಾರ ಇದ್ದುದರಿಂದ ಇದುವರೆಗೆ ಏನಾಗಿದೆ ?

Sri KONDAJJI BASAPPA.—With permission, he cannot be a member of another society of the same nature.

Sri C. J. MUCKANNAPPA.—Please read sub-clause 2.

ಇದರ ಅರ್ಥ ಏನು ? ಈ ರೀತಿ ಇರುವದರಿಂದ ಏನಾದರೂ ಕಷ್ಟ ಅನುಭವಿಸಿದ್ದೀರಾ ? ಒಂದು ಸೊಸೈಟಿಯ ಮೆಂಬರ್ ಆದರೆ ಇನ್ನೊಂದು ಸೊಸೈಟಿಯ ಮೆಂಬರ್ ಆಗಬಾರದು. ನಮ್ಮ ತಾಲ್ಲೂಕಿನಲ್ಲಿ ಒಬ್ಬ ಮೆಂಬರು ಮೂರು ಸೊಸೈಟಿಗಳ ಚೇರಮನ್ ಆಗಿದ್ದಾರೆ. ಮೂರು ಸೊಸೈಟಿಗಳಿಂದ ಸಾಲ ಪಡೆದಿದ್ದಾರೆ. ಇದು ಡಿಸ್‌ಕ್ವಾಲಿಫಿಕೇಶನ್ ಆಗುವುದಿಲ್ಲವೇ ? ಮೂರು ಸೊಸೈಟಿಗಳಿಂದ ಹಣ ಪಡೆದು ದುರುಪಯೋಗ ಮಾಡುವ ಸಂಭವ ಇದೆ.

Mr. SPEAKER.—Has the member given notice of any amendment ?

Sri C. J. MUCKANNAPPA.—I request my friend Sri Kondajji Basappa to give, Sir.

Then in section 20, the amendment is that a defaulter shall not have the right of vote.

ಅದಕ್ಕೋಸ್ಕರ ಈ 8th Clause—Amendment of Section ನಿಂದ ಬಹಳ ದುಷ್ಪರಿಣಾಮವಾಗುತ್ತದೆ. ಸಹಕಾರ ಖಾತೆಯ ಮೇಲೆ ಮತ್ತು ಸಹಕಾರ ಸಂಘಗಳ ಮೇಲೆ ಕೆಟ್ಟ ಪರಿಣಾಮವಾಗುತ್ತದೆ ; ಈ ಸೊಸೈಟಿಗಳು ಅಸ್ತವ್ಯಸ್ತವಾಗಬಹುದು.

Amendment of Section 20 : ಇದು ನನಗೆ ಭಯಂಕರವಾಗಿ ಕಾಣುತ್ತಿದೆ. A nominee or associate member, is a member who is a defaulter, shall not have the right of vote ಅನ್ನುತ್ತೀರಿ, ಕೆಲವು ಕಡೆ ಇವತ್ತಿನ ದಿವಸ ಡಿಫಾಲ್ಟರೂ ವೋಟು ಕೊಡಬಹುದು ಎಂದು ಮಾಡಿದ್ದಾರೆ. ಇಲ್ಲಿ ಏಕೆ ಡಿಫಾಲ್ಟರು ವೋಟು ಕೊಡಬಾರದು ಅಂತ ಮಾಡಿದಿರಿ ? ಸೊಸೈಟಿಗಳಲ್ಲಿ ಡೈರೆಕ್ಟರೇಟಿನಲ್ಲಿಯೇ ಅನೇಕ ಜನ ಡಿಫಾಲ್ಟರುಗಳಿದ್ದಾರೆ. ಡಿಫಾಲ್ಟರು ವೋಟುಮಾಡುವ ಹಾಗಿಲ್ಲವೆಂದರೆ, ಇದನ್ನು ಯಾರಾದರೂ ನಿಮ್ಮವರು ಇದ್ದರೆ, ನಿಮಗೆ ಬೇಕಾದವರನ್ನು ಚೇರ್ಮನ್ನಾಗಿ ಮಾಡಬಹುದು, ಇದರಲ್ಲಿ ನಿಮ್ಮ ಕೈಚಳಕ ಇಟ್ಟಿದ್ದೀರಿ. ನಿಮ್ಮ

(SRI C. J. MUCKANNAPPA)

ವರು ಮೂರು ಜನ ಇದ್ದು, ಅವರು ಅಷ್ಟು ಜನವೂ ಸೇರಿಕೊಂಡು ಬಿಟ್ಟರೆ, ಗವರ್ನಿಂಗ್ ಕೌನ್ಸಿಲ್ ಕಾನ್ಸ್ಟಿಟ್ಯೂಟ್ ಮಾಡಬಹುದು ಚೇರ್ಮನ್, ಸೆಕ್ರೆಟರಿ ನಿಮ್ಮವರನ್ನು ಮಾಡುವುದಕ್ಕೆ ಸಾಧ್ಯ. ಡಿಫಾಲ್ಟರ್ ಆದ ತಕ್ಷಣ ಅವನಿಂದ ಹಣ ರಿಕವರ್ ಮಾಡುವುದು ಬಿಡುವುದಿಲ್ಲ. ನೀವು ಸೆಕ್ಷನ್ 20ರಲ್ಲಿ ಏನು ಉದ್ದೇಶ ಇಟ್ಟುಕೊಂಡಿದ್ದರೋ ಅದಕ್ಕೆ ತದ್ವಿರುದ್ಧವಾಗಿದೆ ಈ ತಿದ್ದುಪಡಿ. ಈ ಅಮೆಂಡ್‌ಮೆಂಟನ್ನು ತಂದರೆ ಸಹಕಾರ ಸಂಘಗಳ ಬೆಳವಣಿಗೆ ಆಗುತ್ತದೆಯೋ ಎಂಬ ಭಯ ಬಂದಿದೆ.

Amendment of Section 29—ಇದು ಅತಿ ಆಶ್ಚರ್ಯಕರವಾದದು. ಇದರ ಸಬ್‌ಕ್ಲಾಸ್ (5) ನೋಡಿ: A nominated member shall observe and follow the orders, instructions and directions of the State Government in discharging his duties, ಅಂದರೆ ನೀವು ಸರಕಾರದವರು ಕುಳಿತುಕೊಳ್ಳಿ ಅಂದರೆ ಕುಳಿತುಕೊಳ್ಳಬೇಕು, ನಿಲ್ಲಿ ಅಂದರೆ ನಿಲ್ಲಬೇಕು. ಅದೇ ತರಹ, ಲೆಜಿಸ್ಲೇಟೀವ್ ಅಸೆಂಬ್ಲಿಗೆ, ಲೆಜಿಸ್ಲೇಟೀವ್ ಕೌನ್ಸಿಲ್ಲಿಗೆ ನೀವು ನಾಮಿನೇಟ್‌ಮಾಡುವ ಸದಸ್ಯರ ಮೇಲೆ ಈ ನಿರ್ಬಂಧವಿದೆಯೋ? ಅವರು ನೀವು ಕೂತುಕೋ ಅಂದರೆ ಕೂತುಕೊಳ್ಳುತ್ತಾರೊ? ಇದು ಏನು ತೋರಿಸುತ್ತದೆ? ಸೊಸೈಟಿಗಳ ಆಡಳಿತದಲ್ಲಿ ಹಸ್ತಕ್ಷೇಪ ಮಾಡುವುದಿಲ್ಲವೆಂದು ಒಂದು ಕೈನಲ್ಲಿ ಅಧಿಕಾರ ಕೊಟ್ಟು, ಇನ್ನೊಂದು ಕೈನಿಂದ ಅದರಲ್ಲಿ ಹಸ್ತಕ್ಷೇಪ ಮಾಡುವುದಾದರೆ, ಈ ಸೊಸೈಟಿಗಳು ವೃದ್ಧಿಯಾಗಬಾರದು ಎಂಬ ಭಾವನೆ ತಮ್ಮಲ್ಲಿ ಮಾಡಿದೆಯೋ ಎಂದು ನನಗನ್ನಿಸುತ್ತದೆ. ಈ ಸಬ್‌ಕ್ಲಾಸು (5) ಹಿಂದಿನದಕ್ಕಿಂತಲೂ ಅತಿ ಭಯಂಕರವಾದುದು, ಆಕ್ಷೇಪಕರವಾದುದು. ನೀವು ಹೇಳಿದ ಹಾಗೆ ಅವರು ಕೇಳಿಕೊಂಡಿರಬೇಕು. ಇನ್ನೊಂದು ಸಬ್‌ಸ್ಟಿಟ್ಯೂಷನ್ ಏನೆಂದರೆ, a person nominated shall hold office during the pleasure of the State Government. ಇದರಿಂದ ತಾವು ಏನು ನಿರೀಕ್ಷಣೆ ಮಾಡಿದ್ದಿರೋ ಅದು ಸಫಲವಾಗುವುದಿಲ್ಲ. ತಾವು ಈ ಸೆಕ್ಷನ್ 29ಗೆ ತಂದಿರುವ ಅಮೆಂಡ್‌ಮೆಂಟನ್ನು ದೂರದೃಷ್ಟಿಯಿಂದ ನೋಡಿದರೆ, ಅದರಿಂದ ತೊಂದರೆಯಾಗುತ್ತದೆ.

11. Amendment of Section 57. ಪೇಜ್ 35ರಲ್ಲಿ ಒರಿಜನಲ್ ಆಕ್ಟಿನ ಸೆಕ್ಷನ್ ಇದೆ. ಅದು Net profits and their disposal ಬಗ್ಗೆ ಇದೆ. ಅದರಲ್ಲಿ 3(a) ನಲ್ಲಿ The balance of net profits may be utilised for payment of dividend...ಅಂತಿದೆ. ಈಗ ಇದಕ್ಕೆ ಇನ್ನೊಂದು ಹೊಸ ಕ್ಲಾಸು 4(a), ಸೇರಿಸಬೇಕು ಅಂತ ಹೊರಟಿದ್ದೀರಿ. ಅದು Every Co-operative Society shall contribute towards the Co-operative eduction fund of State Federal Society ಅಂತ. ಇದು ಏತಕ್ಕೆ ಸ್ವಾಮಿ? ಇದರ ಉದ್ದೇಶ ಹೇಳಲಿಲ್ಲ. ಈಗಲಾದರೂ ತಮ್ಮ ಉತ್ತರದಲ್ಲಿ ಹೇಳಬೇಕು. ಈ State Federal Society ಯಾವುದು ಅನ್ನುವುದು ತಿಳಿಯಲಿಲ್ಲ. ಈ ಫಂಡಿಗೆ at a rate not less than 3 per cent, contribute ಮಾಡಬೇಕು ಅಂತ ಹೇಳಿದರೇ ವಿನಾ, ಎಷ್ಟು ರೇಟಿನಲ್ಲಿ ಕೊಡಬೇಕು ಅಂತ ಸ್ಪೆಸಿಫಿಕ್ ಆಗಿ ಹೇಳಿಲ್ಲ. ಕೆಲವು ಸೊಸೈಟಿಗಳಲ್ಲಿ, ಮೇನೇಜ್‌ಮೆಂಟಿನವರು ಬಂಡವಾಳವನ್ನೇ ತಿಂದು ಬಿಟ್ಟಿದ್ದಾರೆ. ಈ ಯೂನಿಯನ್ನಿನವರು ಮಾಡುವ ಕೆಲಸವೂ 3 ಕಾಸಿನದಿಲ್ಲ. ಆದ್ದರಿಂದ ಈ ಸೆಕ್ಷನ್ 11 ಅಷ್ಟು ಅಪ್ಯಾಯಮಾನವಾಗಿ ಕಾಣಲಿಲ್ಲ.

12. Amendment of Section 71. Disposal of disputes ವಿಚಾರದಲ್ಲಿ, original Act ನಲ್ಲಿ ಇರುವ ಹಾಗೆಯೇ ಇದ್ದಿದ್ದರೆ ಏನಾಗುತ್ತಿತ್ತು? ಇದಕ್ಕೆ (3A) ಅಂತ ಹೊಸ ಕ್ಲಾಸು ಸೇರಿಸಬೇಕು ಅಂತ ಹೊರಟಿದ್ದೀರಿ. ಇದರ ವ್ಯಾಖ್ಯಾನ ಅರ್ಥವಾಗಲಿಲ್ಲ; ತಾವು ಹೇಳಬೇಕು. The award shall include the fee payable to the arbitrator and the fees and expenses payable to the Registrar ಅಂತ ಸೇರಿಸಿದ್ದೀರಿ. ಈ ಕ್ಲಾಸ್ ಇಲ್ಲದೇನೇ, ಇದುವರೆಗೆ ಹೇಗೆ ನಡೆಯುತ್ತಾ ಇತ್ತು? Arbitration fee ಬಂದಿಲ್ಲ ಅಂತ ಆರ್ಬಿಟ್ರೇಟರು ಯಾರಾದರೂ ಹೇಳಿದ್ದಾರೆಯೇ? ಅವಾರ್ಡ್ ಕೊಡುವಾಗ, ನನ್ನ ಫೀ ಇಷ್ಟು, ರಿಕವರ್‌ಮಾಡಿ ಅಂತ ಹೇಳಿದ್ದಾರೊ? ಅದೊಂದನ್ನೂ ಹೇಳದೆ, ಈ ಅಮೆಂಡ್‌ಮೆಂಟನ್ನು ಹನುಮಂತರಾಯನ ಬಾಲಕ್ಕೆ ತಗಲಿ ಹಾಕಿದ್ದೀರಲ್ಲ? ಸೆಕ್ಷನ್ 71ಕ್ಕೆ, ಈ (3A) ಹೊಸದಾಗಿ ಸೇರಿಸಿರುವುದು ನನಗೆ ಅಷ್ಟು ಸರಿಯಾಗಿ ಕಾಣುತ್ತಾ ಇಲ್ಲ.

ಈ Land Development Bank ಬಗ್ಗೆ ಹೇಳುತ್ತಾ, ಇದರ ಹಣದಲ್ಲಿ 4) ಪರ್ಸೆಂಟಿನಷ್ಟನ್ನು ಲ್ಯಾಂಡ್ ಡೆವಲಪ್‌ಮೆಂಟಿಗೂ, 60 ಪರ್ಸೆಂಟ್ ಡೆಟ್ ರಿಡೆಂಪ್‌ಷನ್ನಿಗೂ ಉಪಯೋಗಿಸುವ ಯೋಜನೆಯನ್ನು ಸರ್ಕಾರದವರು ಮಾಡಿದ್ದಾರೆಂದು ಹೇಳಿದರು. ಸರ್ಕಾರದ ನೀತಿ, ಧ್ಯೇಯ ಧೋರಣೆಯನ್ನಾಗಲಿ, ಹೆಚ್ಚು ಆಹಾರ ಬೆಳೆಯಬೇಕು, ಬಡವರಿಗೆ ಹಣ ಸಿಗಬೇಕು ಎಂಬ ಬಗ್ಗೆಯಾ

ಗಲಿ ನನ್ನ ಡಿಸ್‌ಪ್ಯೂಟ್ ಇಲ್ಲ. ಆದರೆ ಡೆಟ್ ರಿಡೆಂಪ್‌ಷನ್ನಿಗೆ ಕೊಡುವ ಈ ಹಣವನ್ನು ಬರೀ ಪ್ರಾಮಿಸರಿ ನೋಟ್ ಮೇಲೆ ಕೊಟ್ಟಿದ್ದಾರೆ. ಚಾರ್ಜ್‌ಡ್ ಪ್ರಾಪರ್ಟಿ ಮೇಲೆ ಹಣಕೊಟ್ಟು, ಶ್ರೀಮಂತರ ಕೈನಿಂದ ಅದನ್ನು ಬಿಡಿಸಿಲ್ಲ ಸಾಲಪತ್ರದ ಮೇಲೆ, ಡೆಟ್ ರಿಡೆಂಪಷನ್ ಮಾಡಿ ಒಳ್ಳೆಯ ಕೆಲಸ ಮಾಡಿದ್ದೇವೆಂದು ಹೇಳಿದರೆ ನನಗೆ ಅದು ಅಷ್ಟು ಸರಿಯಾಗಿ ಕಾಣಲಿಲ್ಲ.

4-00 P.M.

ಕೋ-ಆಪರೇಟೀವ್ ಸೊಸೈಟಿಗಳ ವಿಷಯದಲ್ಲಿ ಸಭೆಯ ಮುಂದೆ ಬಂದಂಥ ಪ್ರಶ್ನೆಗಳು ಉತ ಪ್ರಶ್ನೆಗಳನ್ನು ಹಾಕಿದಾಗ ತಾವು ತಿಳಿಸಿರತಕ್ಕಂಥ ದುರ್ ದೋಷಗಳನ್ನು ಸರಿಪಡಿಸುವುದಕ್ಕೆ ಏನು ಮಾಡಿದ್ದೀರೋ ಗೊತ್ತಿಲ್ಲ. ಅವನ್ನು ಸರಿಮಾಡುವುದಕ್ಕೆ ಸಾಧ್ಯವಿಲ್ಲ ನಿಸ್ಸಹಾಯಕರಾಗಿದ್ದೀರಿ ಎಂದು ನಾನು ಹೇಳುತ್ತೇನೆ. ಹಾಗಿರುವಾಗ ಟ್ರಿಬ್ಯೂನಲ್‌ಗಳನ್ನು ಏಕೆ ನೇಮಕ ಮಾಡುತ್ತೀರಿ? ಈ ಸೊಸೈಟಿಗಳ ವ್ಯವಹಾರ ಯಾವ ರೀತಿ ಇದೆ ಎಂಬುದನ್ನು ಹಣಕಾಸಿನ ಸಚಿವರಲ್ಲಿ ನಿವೇದನೆ ಮಾಡಿಕೊಂಡೆ, ತಮ್ಮ ಮುಂದೆ ನಿವೇದನೆ ಮಾಡಿಕೊಂಡೆ, ಮುಖ್ಯ ಮಂತ್ರಿಗಳಲ್ಲಿ ನಿವೇದನೆ ಮಾಡಿ ಕೊಂಡೆ. ತಮ್ಮಿಂದ ಒಂದು ಉಣ್ಣೆ ಸಹಕಾರ ಸಂಘದ ವ್ಯವಹಾರವನ್ನು ಸರಿಮಾಡುವುದಕ್ಕೆ ಸಾಧ್ಯ ಆಗಿಲ್ಲ. ಎಂದ ಮೇಲೆ ಟ್ರಿಬ್ಯೂನಲ್ ಅನ್ನು ಏಕೆ ಮಾಡುತ್ತೀರಿ? ಹ್ಯಾಂಡ್‌ಲೂಮ್ ಕೋ-ಆಪರೇಟೀವ್ ಸೊಸೈಟಿ ತಮ್ಮ ಅಧೀನದಲ್ಲಿ ಇದೆ, ಅಲ್ಲಿ ಲಕ್ಷಾಂತರ ರೂಪಾಯಿಗಳ ವ್ಯವಹಾರ ತಲೆಕೆಳಕಾಗಿದೆ. 120 ಕೋಟಿ ರೂಪಾಯಿ ಹಣ ಯಾರ ಕೈಯಲ್ಲೋ ಸಿಕ್ಕಿಕೊಂಡು ಇವತ್ತು ನತದೃಷ್ಟ ಜನ ನಮ್ಮ ಹಣ ಏನಾಗುತ್ತದೆಯೋ ಎಂದು ಹೇಳಿ ಸಂಕಟಕ್ಕೆ ಈಡು ಆಗಿದ್ದಾರೆ. ಆದ್ದರಿಂದ ಇಬ್ಬರು ಯುವಕ ಮಂತ್ರಿಗಳು ಇದ್ದೀರಿ, ತಾವು ಈ ಸಹಕಾರ ಸಂಘಗಳಲ್ಲಿ ನಡೆಯತಕ್ಕ ಅಧ್ವಾನವನ್ನು ನಿಲ್ಲಿಸಿ ಜನತೆಯ ಹಣಕ್ಕೆ ಸೆಕ್ಯೂರಿಟಿ ಬರುವ ರೀತಿಯಲ್ಲಿ ಮಾಡುತ್ತೀರಿ ಎಂದು ನಂಬಿ ನನ್ನ ಮಾತನ್ನು ಮುಗಿಸುತ್ತೇನೆ.

Sri R. S. HEGDE (Honnavar).—Mr. Speaker, Sir, this is an age of Co-operation and this amending Bill is a right step in the direction of development of the co-operative movement. I submit that co-operative societies should not be looked upon as commercial bodies just as we look upon Electricity Board or other boards wherein the main business is investment and sufficient return on it. It was submitted by Sri Patil that Government is spending a huge amount in the field of Co-operation. I submit that it is necessary and it is well-spent. Supposing there are no Co-operative societies at all, then it would be absolutely necessary to appoint additional staff to discharge the functions which the Co-operative societies are doing now.

Regarding share capital, share capital is advisedly collected on five grounds. (1) Saving habit is encouraged, (2) the dividend given on the shares is a set off towards interest, (3) as a co-operator he lends his hands to strengthen the society, (4) the borrowing capacity of the society increases, and (5) in times of difficulties these shares can be transferred in the names of others and he can get back the money. This is a right step in the field of Co-operative movement.

As far as the appointment of Managers to Co-operative societies is concerned, we know that there are two schools of thought. One is that these Managers should be entirely from the Government staff. Another is that these people should not be appointed from the Government staff because it will be an encroachment on the democratic set up of the Co-operative society. But, as I understand, the Government has followed the *via media* of appointing Government staff as Managers in those Co-operative societies from which there have been demands. Therefore, there cannot be any hard and fast rules as regards the appointment of Managers.

(SRI R. S. HEGDE)

As far as sections 2 and 2A are concerned, we know that the Co-operative movement is developing in such a rapid way that it is absolutely necessary that Government has to think of exploring the possibilities of increasing the staff. These sections deal with the staff of the Co-operative societies. In many other States this has been followed and I do not think there should be any difficulty as far as the appointment of staff is concerned. During the British regime the scope was limited. They did not want that we should develop. After Independence, we have been thinking in terms of Co-operation only in every field and activity and it is but natural that staff should be increased, and these sections make provision for increasing the staff.

Section 2B refers to the appointment of the Tribunal. There has been much criticism about it and it was argued that this has been done with an ulterior motive. But if you see the pattern of staff, one is a Judge who is supposed to be above politics; another is the Joint Registrar who is a Government servant and the third is a practising Advocate. This Tribunal is absolutely necessary because the work connected with the disputes has increased. We know that in every taluk nearly two or three Arbitrators are appointed and the hands of each Arbitrator are full. We know that in every district thousands of cases are pending. When this is so, it is but natural that this Tribunal will have full work throughout the year and it is a necessity.

As regards section 4, there has been much criticism on the proviso which says that 'Provided that no Co-operative society shall be registered if it is likely to be economically unsound'. It was argued whether it could be prejudged that a particular society is going to be economically unsound. My submission is that the economic unsoundness can be judged from so many factors. Supposing in a big village having a population of 10,000 a Co-operative society is already working in one locality and that society is not able to cater to the needs of the entire popoluation, will it not be advisable to have another Co-operative society to serve their needs. Take another instance where one co-operative society is already working well and on certain political grounds another co-operative society is sought to be established. That society should not be allowed beause it will be economically unsound and will adversly affect the interests of the other society. So the proviso is a very wholesome one.

There has also been much criticism against the principle of nomination. Government invests huge amounts by way of share capital and to safeguard their interests Government has reserved the right to nominate certain persons on these bodies. Is it something opposed to the principles of natural justice and to the principles of Co-operation. Inasmuch as Government has subscribed to the capital, Government is also a member and as such wants a chance to represent itself. So from that point of view, taking Government as a corporate body, Government is asserting the right which the other Co-operators would like to assume. Therefore, there seems to be no grievance at all against nomination. If

we see the entire Co-operative Societies Act all over India, nomination is the main feature and it is not opposed to the spirit of Co-operative movement.

Sir, in clause 11 there is some provision for education in the Co-operative field. There was no obligatory provision in the old Act about this. It is to be admitted and it is a common understanding that education must be there in this field to successfully implement the movement of Co-operation.

As far as amendment to section 12 is concerned, it is absolutely necessary because the old Act did not make proper provision as to how the expenses of the arbitrator and the Registrar has to be made. A specific provision has been made that it should be met from the society's funds.

As far as Land Development Bank is concerned, I think, it is a new Chapter in the history. The very name of Land Mortgage is very nausiating. The person who wanted a loan had to mortgage the land. Now, it is very wholesome the word ' mortgage ' has been changed to development. Why should a person taking loan say that he has mortgaged the land ? I congratulate the Minister for making this change. It is important to note that the function of the Land Development Bank has been made exaustive. This is an excellent feature of this Act. I think, the present amendment is a step in the right direction of the development of the Co-operative movement and I commend to this House that this must be passed with one voice.

†ಶ್ರೀ ಎಚ್. ಆರ್. ಕೇಶವ ಮೂರ್ತಿ.—ಅಧ್ಯಕ್ಷರೆ, ನಮ್ಮ ಮುಂದಿರುವ ಮೈಸೂರು ಕೋಆಪರೇಟಿವ್ ಸೊಸೈಟಿಗಳ ತಿದ್ದುಪಡಿ ಮಸೂದೆಯ ಉದ್ದೇಶ ಮತ್ತು ಕಾರಣಗಳ ವಿವರವನ್ನು ನೋಡಿದರೆ ಲ್ಯಾಂಡ್ ಮಾರ್ಟ್ ಗೇಜ್ ಬ್ಯಾಂಕಿಗೆ ಸಂಬಂಧಪಟ್ಟಂತೆ ಕಾನೂನನ್ನು ಮಾರ್ಪಾಟುಮಾಡುವ ಉದ್ದೇಶವಿದೆ. ಸಾಮಾನ್ಯವಾಗಿ ಹೆಚ್ಚು ಕಡಮೆ ಅದೇ ಉದ್ದೇಶದಿಂದಲೇ ಇದನ್ನು ತಂದಿದ್ದಾರೆಂದು ಹೇಳಬಹುದು. ಆದರೆ ಇದನ್ನು ಬರೀ ಬಂಡವಾಳಗಾರರಿಗೆ ಸಹಾಯವಾಗುವಂತೆ ಮಾಡಿದ್ದಾರೆ. ಆದುದರಿಂದ ತೀವ್ರವಾಗಿ ವಿರೋಧಿಸುತ್ತೇನೆ. ಇಡೀ ದೇಶವನ್ನೇ ಬಂಡವಾಳಗಾರರಿಗೆ ಹಂಚಿ ಬಡವರ ಮತ್ತು ನಿರ್ಗತಿಕರ ರಕ್ತ ಹೀರಲು ಮನಸ್ಸುಮಾಡಿ ತಾವು ದೊಡ್ಡವರಾಗುತ್ತಿದ್ದಾರೆ. ಆದುದರಿಂದ ಕಾರಣ ತೋರಿಸಿ ವಿರೋಧಿಸಬೇಕಾದ್ದು ನಮ್ಮ ಕರ್ತವ್ಯವೆಂದು ಹೇಳುತ್ತೇನೆ. ಈ ದಿವಸ ಜಮೀನನ್ನು ಆಧಾರಮಾಡಿಕೊಂಡು ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕ್ ಸಾಲ ಕೊಡುತ್ತಿದೆ. ಜಮೀನಿರುವವರಿಗೇ ಹೊರತು ಬಡವರಿಗೆ ಯಾವ ವಿಧವಾಗಿಯೂ ಈ ಮಸೂದೆ ಸಹಾಯಕಾರಿಯಾಗಿಲ್ಲ. ಕೇವಲ ಒಂದೆರಡು ಎಕರೆಗಳನ್ನು ಪಡೆದಿರುವ ಬಡವರಲ್ಲಿ ಎಷ್ಟು ಜನರಿಗೆ ಬ್ಯಾಂಕು ಸಾಲ ಕೊಟ್ಟಿದೆಯೆಂಬುದಕ್ಕೆ ಅಂಕಿಅಂಶಗಳನ್ನು ನೋಡಬಹುದು. ಐದು ಎಕರೆಗಿಂತ ಕಡಮೆ ಇರುವವರು ಬಹಳ ಜನರಿದ್ದಾರೆ. ಅವರಿಗೆ ಎಷ್ಟು ಸಾಲ ಕೊಡಲಾಗಿದೆ ಎಂದು ನೋಡಿದರೆ ಕೇವಲ ಒಂದು ಪರ್ಸೆಂಟ್ ಕೂಡ ಕೊಟ್ಟಿಲ್ಲ. ಇದನ್ನು ಬೇಕಾದರೆ ನೋಡಬಹುದು. ಇಂಥ ಕಾನೂನಿನಿಂದ ಬಡ ರೈತರಿಗೆ ಪ್ರಯೋಜನವಾಗುವುದಿಲ್ಲ. ಬರೀ ಬಂಡವಾಳಶಾಹಿ ಬೆಳೆಸಿಕೊಂಡು ಹೋಗುವುದು ಉಚಿತವಲ್ಲ, ಬಡವರು, ನಿರ್ಗತಿಕರು ಮುಂತಾದವರಿಗೆ ಸಹಾಯವಾಗುವಂತೆ ಮಾಡಿದರೆ ದೇಶಕ್ಕೆ, ಪ್ರಜೆಗಳಿಗೆ ಮತ್ತು ಸರ್ಕಾರಕ್ಕೆ ಒಳ್ಳೆಯದು, ಸರ್ಕಾರ ಒಂದು ಮೇಲು ಪಂಕ್ತಿಯನ್ನು ಹಾಕಿದಂತಾಗಿ ಬಡವರ ಬಂಧು ಎಂದು ಅದು ಹೆಸರನ್ನು ಗಳಿಸಬಹುದು. ಒಂದೆರಡು ಎಕರೆಗಳಿರುವ ಬಡವರು ಸಾಲ ಪಡೆದು ತಮ್ಮ ಜಮೀನನ್ನು ಉತ್ತಮಪಡಿಸಿಕೊಳ್ಳುವುದಕ್ಕೆ ಅವಕಾಶವಿರಬೇಕಾದ್ದು ಅತ್ಯಾವಶ್ಯಕ. ಎರಡು ಎಕರೆ ಜಮೀನಿರುವವರಿಗೆ 200 ರೂಪಾಯಿ ಬೆಲೆ ಕಟ್ಟಿ 100 ರೂಪಾಯಿ ಸಾಲ ಮಾತ್ರ ಸಿಕ್ಕಬಹುದು. ಕೇವಲ ಅಷ್ಟು ಕಡಮೆ ಸಾಲ ತೆಗೆದುಕೊಂಡು ರೈತ ಎತ್ತು, ಗೊಬ್ಬರ, ಗೋಡು ವಗೈರೆ ತೆಗೆದುಕೊಳ್ಳುವುದು ಹೇಗೆ, ಸಾಲ ತೀರಿಸುವುದು ಹೇಗೆ, ಎಂಬುದನ್ನು ಯೋಚನೆಮಾಡಬೇಕು. ಕೇವಲ ಶೇಕಡ ಹತ್ತರಷ್ಟಿರುವ ಬಂಡವಾಳಗಾರರಿಗೆ ಕೋಟಿಗಟ್ಟಲೆ ಖರ್ಚು ಮಾಡಿದರೆ ದೇಶ ಉದ್ಧಾರವಾಗುವುದಿಲ್ಲ, ಆದುದರಿಂದ ಈ ವಿಧೇಯಕವನ್ನು ದಯೆಯಿಟ್ಟು ವಾಪಸು ತೆಗೆದುಕೊಂಡು

(ಶ್ರೀ ಎಚ್. ಆರ್. ಕೇಶವಮೂರ್ತಿ)

ಮಾರ್ಪಾಡು ಮಾಡಿ ಪುನಃ ತನ್ನಿ ಇಲ್ಲದಿದ್ದರೆ ಆಳುವ ಪಕ್ಷಕ್ಕೆ ಕೆಟ್ಟ ಹೆಸರು ಬರುತ್ತದೆ ಎಂದು ವಿನಂತಿ ಮಾಡುತ್ತೇನೆ. ಈಗ ನಮ್ಮ ಅನುಭವದಲ್ಲಿ ಸರಕಾರಿ ಮಟ್ಟದಲ್ಲಿ, ಗ್ರಾಮಾಂತರ ಮಟ್ಟದಲ್ಲಿ,ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕಿನಿಂದ ಸಿಗತಕ್ಕ ಸಾಲ, ಸೊಸೈಟಿಗಳಿಂದ ಸಿಗುವ ಸಾಲ ಹೀಗೆ ಎಷ್ಟೋ ಸಾಲಗಳು ಸಿಗುತ್ತಿದೆ. ಆದರೆ ನ್ಯಾಯವಾಗಿ ಯಾರಿಗೆ ಸಿಗಬೇಕೋ ಅವರಿಗಿಲ್ಲ. ರೈತರಿಗೆ ಅದರಲ್ಲೂ ಟಿಲರ್ ಆಫ್ ದಿ ಸಾಯಿಲ್ ಆಗಿ ದುಡಿಯತಕ್ಕ ಬಡ ರೈತನಿಗೆ ಸಾಲಗಳು ಸಿಗುತ್ತಿಲ್ಲ. ಗ್ರಾಮಾಂತರ ಪ್ರದೇಶಗಳಲ್ಲಿ ಸರಕಾರದವರು ತಮ್ಮ ಕಡೆಯವರಿಂದಲೇ ಎಷ್ಟು ಜನಕ್ಕೆ ಸಾಲ ಸಿಗುತ್ತಿದೆ ಎನ್ನುವುದನ್ನು ಸರಿಯಾಗಿ ನೋಡಿದರೆ ಶೇಕಡಾ ಒಂದರಷ್ಟು ಜನಕ್ಕೂ ಸಾಲಗಳು ಸರಿಯಾಗಿ ಸಿಗುತ್ತಿಲ್ಲ. ಇದು ನಿಜವಲ್ಲ ಎಂದು ತಾವು ರುಜುವಾತು ಪಡಿಸುವುದಾದರೆ ನಾನು ಈ ಸಭೆಯ ಸದಸ್ಯತ್ವಕ್ಕೆ ರಾಜೀನಾಮೆ ಕೊಟ್ಟು ಹೋಗುತ್ತೇನೆ. ಆದುದರಿಂದ ಇಂತಹ ಶಾಸನಗಳನ್ನು ತಾವು ತರುವುದರಿಂದ ಈ ದೇಶಕ್ಕೆ ಒಳ್ಳೆಯದಾಗುವುದಿಲ್ಲ. ಇದನ್ನು ಸೂಕ್ತವಾಗಿ ಮಾರ್ಪಾಡು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇದರಿಂದ ಬಡವರಿಗೆ ಸಾಲಗಳು ಹೋಗುತ್ತಿಲ್ಲ. ಎಲ್ಲ ಪುಡಾರಿಗಳಿಗೆ, ಪ್ರಭಾವವಿರುವವರಿಗೆ ಸಾಲಗಳು ಸಿಗುತ್ತಿವೆ. ಸಾಲಗಳನ್ನು ಕೊಡುವಾಗ ಅವನ ಕ್ರೆಡಿಟ್ ವರ್ದಿನೆಸ್ ಎಂದರೆ, ಅವನ ಧಡೂತಿಯನ್ನು ನೋಡಿ, ಅವನು ಸಾಲ ತೆಗೆದುಕೊಂಡರೆ ವಾಪಸು ಕೊಡಲು ಶಕ್ತಿ ಇದೆಯೇ ಎನ್ನುವುದನ್ನು ನೋಡಿ, ಆ ಮೇಲೆ ಸಾಲ ಕೊಡಬೇಕು. ಆದರೆ ಈಗಿರುವ ಕಾನೂನು ನೋಡಿದರೆ ಬರೀ ಬಂಡವಾಳಶಾಹಿ ದಾರಿಯಲ್ಲೇ ಹೋಗುತ್ತಿರುವಂತೆ ತೋರುತ್ತೆ. ಎಲ್ಲ ಪುಡಾರಿಗಳಿಗೆ ಹಾಗೂ ವಿದ್ಯೆ ಇರುವವರಿಗೆ ಸಾಲಗಳು ಸಿಗುತ್ತಿದೆ. ಅವಿದ್ಯಾವಂತರಾದ ಬಡವರಿಗೆ ಸಾಲಗಳು ಸಿಗುತ್ತಿಲ್ಲ. ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕುಗಳಲ್ಲಿ ಬರೀ ಜಮೀನಿನ ಆಧಾರದ ಮೇಲೆ ಸಾಲಗಳನ್ನು ಕೊಡುವಾಗ ನಂಬಿಕೆಯ ಮೇಲೆ ಅಲ್ಲಿರುವ ಕೋ-ಆಪರೇಟೀವ್ ಅಧಿಕಾರಿಗಳು ವಿಚಾರಣೆ ಮಾಡಿ ಕೊಡುವಂತೆ ಏರ್ಪಾಡು ಮಾಡುವುದೊಳ್ಳೆಯದು ಎಂದು ನಾನು ಸಲಹೆ ಮಾಡುತ್ತೇನೆ. ಇನ್ನು ಇದರ ಡೀಟೈಲ್ಸ್ ಬಗ್ಗೆ ಹೇಳುವಾಗ ಸೆಕ್ಷನ್ 20 ರಲ್ಲಿ

"A member shall be deemed to be a defaulter and shall not have the right of vote at a meeting of the Society if he has failed to pay any arrears of any kind due by him to the society at least one month before the date of such meeting......

ಎಂದು ಇರುವುದಕ್ಕೆ ಬದಲಾಗಿ

If he happens to be a defaulter on the date of acceptance
ಎಂದು ಇದ್ದರೆ ಚೆನ್ನಾಗಿರುತ್ತದೆ. ಅಂತಹವರನ್ನು ಕ್ಯಾಂಡಿಡೇಟುಗಳಾಗಿ ಇರುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನು ಸಲಹೆ ಮಾಡುತ್ತೇನೆ.
ಇನ್ನು ಕ್ಲಾಸು 11ರಲ್ಲಿ 57 ಸೆಕ್ಷನ್ನು ಇದರಲ್ಲಿ

'No co-operative society shall pay a dividend to its members on their paid-up share-capital at a rate exceeding the prescribed limit."

ತಾವು ಕಾನೂನಿನಲ್ಲಿ ಹೀಗೆ ಡಿಸ್‌ಕ್ರಿಷನರಿ ಪವರುಗಳನ್ನು ಕೊಟ್ಟರೆ ಅದು ದುರುಪಯೋಗವಾಗಲು ಅವಕಾಶವಾಗುತ್ತದೆ. ಅದಕ್ಕಾಗಿ ಲಿಮಿಟ್ಟನ್ನೂ ಕಾನೂನಿನಲ್ಲೇ ತೋರಿಸುವುದು ಒಳ್ಳೆಯದು ಎಂದು ನಾನು ಹೇಳುತ್ತೇನೆ.

ಇನ್ನು ಸೆಕ್ಷನ್ನು 14ರಲ್ಲಿ ಟ್ರಾಕ್ಟರುಗಳನ್ನು ಮತ್ತು ಇತರ ಸಾಮಾನುಗಳನ್ನು ಕೊಳ್ಳಲು ಸಾಲವನ್ನಾಗಿ ಕೊಡುತ್ತಿದ್ದೀರಿ. ಇದಲ್ಲದೆ ಲ್ಯಾಂಡ್ ಇಂಪ್ರೂವ್‌ಮೆಂಟ್ ಲೋನು ಮತ್ತು ತಕಾವಿ ಸಾಲಗಳು ಇತ್ಯಾದಿಯಾಗಿ ಕೊಡುತ್ತಿದ್ದರೂ ನೇರವಾಗಿ ರೈತರಿಗೆ ಸಾಲಗಳು ದೊರಕುತ್ತಿಲ್ಲ. ಎಲ್ಲಾ ಬಂಡವಾಳಗಾರರಿಗೆ ಸಿಗುವುದಕ್ಕೆ ಅವಕಾಶವಾಗಿದೆ. ಇದನ್ನು ಸ್ವಲ್ಪ ಬಡ ರೈತರಿಗೆ ಸಿಗುವ ಹಾಗೆ ಪರಿವರ್ತನೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಪುಟ 13ರಲ್ಲಿ ಸೆಕ್ಷನ್ನು 82 (ಬಿ) ನಲ್ಲಿ ಹೇಳಿರುವಂತೆ ಸಬ್‌ಜಕ್ಷನ್ನುಗಳನ್ನು ಕೊಡಬೇಕಾದರೆ "ಪರ್ಸನಲ್ಲಾಗಿಯೇ" ಬರಬೇಕೆಂದು ಹೇಳಿದರೆ ಸರಿಯಾಗಿರುವುದಿಲ್ಲ. ಯಾರಾದರೂ ಕಾಯಿಲೆ ಇರಬಹುದು ಅಥವಾ ಮುದುಕರಾಗಿರಬಹುದು, ಇಂತಹವರು ಅವರ ಅಟಾರ್ನಿಯವರಂತೆ ಒಬ್ಬರು ಅಡ್ವೋಕೇಟರು ಬರಲನುಕೂಲವಾಗುವಂತೆ ಇದರಲ್ಲಿ ಮಾರ್ಪಾಡು ಮಾಡಬೇಕು.

17ನೇ ಕ್ಲಾಸಿನಲ್ಲಿ 85 (ಎ)ಗೆ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕುಗಳಲ್ಲಿ ರಿಜಿಸ್ಟ್ರೇಷನ್ನು ಮಾಡುವಾಗ ಎರಡು ಸಾರಿ ರೈತರ ಮೇಲೆ ರಿಜಿಸ್ಟ್ರೇಷನ್ನು ಖರ್ಚು ಬರುತ್ತದೆ. ಇದು ಈಗಿರುವ ಕಾನೂನಿಗೆ ವಿರುದ್ಧವಾಗುತ್ತದೆ. ಈಗಲೇ ಒಂದು ಪತ್ರ ರಿಜಿಸ್ಟ್ರರು ಮಾಡಬೇಕಾದರೆ ಎಷ್ಟೋ ಕಷ್ಟಪಟ್ಟಿರುತ್ತಾನೆ, ಹಾಗಿರುವಾಗ ಎರಡು ಖರ್ಚುಗಳನ್ನೂ ವಹಿಸುವುದು ಅಂದರೆ ಕಷ್ಟ, ಇದನ್ನು ಸೂಕ್ತವಾಗಿ ಮಾರ್ಪಾಡು ಮಾಡಬೇಕು.

ಇನ್ನು 36ನೇ ಪುಟದಲ್ಲಿ ಸಬ್ ಕ್ಲಾಜ್ (ಎಫ್)ನಲ್ಲಿ 10 ಪರ್ಸೆಂಟ್ ಎಂದು ಹೇಳಿದ್ದಾರೆ. ಇದನ್ನು ಒಂದು ಪರ್ಸೆಂಟಿಗೆ ಇಳಿಸಬೇಕೆಂದು ಹೇಳುತ್ತೇನೆ. ಇಲ್ಲವೆ 2 ಪರ್ಸೆಂಟೆಂತಲಾದರೂ ಮಾಡಿ. ಅದಕ್ಕೆ ಜಾಸ್ತಿ ಮಾಡುವುದು ಸರಿಯಲ್ಲ.

4-30 P.M.

ಇನ್ನು ಪುಟ 38ರಲ್ಲಿ ಸಾಲ ತೀರ್ವೆಯ ಅವದಿಯ ಬಗ್ಗೆ 15 ವರ್ಷಗಳೆಂದು ಹೇಳಿದ್ದಾರೆ. ಇದು ಬಹಳ ಕಡಮೆಯಾಯಿತು. ಇದನ್ನು ಕನಿಷ್ಟಪಕ್ಷ 25 ವರ್ಷಗಳಾದರೂ ಏರಿಸಬೇಕೆಂದು ನಾನು ಹೇಳುತ್ತೇನೆ. ಈ ದಿವಸ ಹೌಸ್‌ಬಿಲ್ಡಿಂಗ್ ಸೊಸೈಟಿಗಳಿಗೂ ಕೂಡ 25, 30 ವರ್ಷಗಳ ಸಾಲ ತೀರ್ವೆಯ ಅವಧಿಯನ್ನು ಕೊಡಲಾಗಿದೆ. ಹಾಗಿರುವಾಗ ಇದರಲ್ಲಿ ಏಕೆ ಇದನ್ನು ಕಡಮೆ ಮಾಡಿದ್ದಾರೆಂಬುದು ಗೊತ್ತಾಗುವುದಿಲ್ಲ. ಇದನ್ನು 25 ವರ್ಷಗಳಿಗೆ ಏರಿಸಲೇಬೇಕು. ಸಾಲ ತೀರ್ವೆಯ ಅವಧಿ ಕಡಮೆಯಾದರೆ ಕಂತುಗಳ ಹಣ ಜಾಸ್ತಿಯಾಗುತ್ತದೆ. ಆಗ ಸಾಲಗಾರನಿಗೆ ಸಾಲ ತೀರಿಸಲು ಬಹಳ ತೊಂದರೆಯಾಗುತ್ತದೆ.

ಇನ್ನು ಪುಟ 42ರಲ್ಲಿ 88ನೇ ಕ್ಲಾಜಿನಲ್ಲಿ ಒಬ್ಬ ಸಾಲಗಾರ ತಾನು ಪಾವತಿ ಮಾಡತಕ್ಕ ಕಂತಿನ ಹಣವನ್ನು ಒಂದು ತಿಂಗಳ ಕಾಲ ಕೊಡದಿದ್ದಲ್ಲಿ ಆತನನ್ನು ಡಿಫಾಲ್ಟರನೆಂದು ಹೇಳಿದೆ. ಈ ಅವಧಿಯನ್ನು 3 ತಿಂಗಳಿಗೆ ಏರಿಸಬೇಕೆಂದು ಹೇಳುತ್ತೇನೆ. ಇಲ್ಲಿ ತಿಳಿಸಿರತಕ್ಕ ಒಂದು ತಿಂಗಳ ಅವಧಿ ಬಹಳ ಕಡಮೆಯಾಯಿತು.

ಇನ್ನು ಕ್ಲಾಜ್ 90ರಲ್ಲಿ:— ಇಲ್ಲಿ ಸಾಲಕ್ಕೆ ಅಗತ್ಯವಿರುವಷ್ಟು ಆಧಾರವನ್ನು ಕೊಡಬೇಕೆಂದು ಹೇಳಲಾಗಿದೆ. ಒಂದು ವೇಳೆ ಕೊಟ್ಟಿದ್ದ ಆಧಾರ ಸಾಲದಾದಾಗ ಅಥವಾ ಅದು ಹಾಳಾದಾಗ ಅದಕ್ಕೆ ಬೇರೆ ಆಧಾರವನ್ನು ಸಾಲಗಾರ ಒದಗಿಸಬೇಕೆಂದು ಹೇಳಿದೆ. ಆದರೆ ಕೆಲವು ಸಂದರ್ಭಗಳಲ್ಲಿ ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕಿನಲ್ಲಿ ಸಾಲ ಮಾಡಿರತಕ್ಕ ಹಣ ಕೇವಲ 2-3 ಸಾವಿರ ಇದ್ದರೂ ಅದಕ್ಕೆ ಲಕ್ಷಾಂತರ ರೂಪಾಯಿಗಳ ಆಸ್ತಿಯನ್ನು ಆಧಾರ ಮಾಡಿಕೊಂಡಿರುತ್ತಾರೆ. ಅವರ ಸಾಲಕ್ಕೆ ಅಗತ್ಯವಿರುವಷ್ಟು ಆಸ್ತಿಯನ್ನು ಇಟ್ಟುಕೊಂಡು ಉಳಿದುದನ್ನು ಆ ಸಾಲಗಾರನಿಗೆ ಬಿಟ್ಟುಕೊಡುವುದಕ್ಕೆ ಇದರಲ್ಲಿ ತಾವು ಒಂದು ಹೊಸ ಪ್ರಾವಿಷನ್ ಸೇರಿಸಬೇಕೆಂದು ಹೇಳುತ್ತೇನೆ.

ಇನ್ನು ಪುಟ 58ರಲ್ಲಿ: ರೂಲ್ಸ್‌ಗಳ ವಿಚಾರ ಹೇಳಿದ್ದಾರೆ: ಅವುಗಳಿನ್ನೂ ಮಾಡಿಲ್ಲ. ಈ ದಿವಸ ಪ್ರೈಮರಿ ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕಿನ ನೌಕರರು ಅದೇ ಬ್ಯಾಂಕಿನ ಅಧಿಕಾರಕ್ಕೊಳಪಟ್ಟಿದ್ದಾರೆ. ಇದು ಸರಿಯಲ್ಲ. ಇವರನ್ನು ಸ್ಟೇಟ್ ಪ್ರೈಮರಿ ಬ್ಯಾಂಕಿನ ಅಧಿಕಾರಕ್ಕೊಳಪಡಿಸಬೇಕೆಂದು ಹೇಳುತ್ತೇನೆ. ಇದನ್ನು ರೂಲ್ಸಿನಲ್ಲಿ ಅಡಕಮಾಡಬೇಕು. ಇನ್ನು ಬ್ಯಾಂಕಿಗೆ ಬರತಕ್ಕ ಗ್ರಾಸ್ ಪ್ರಾಫಿಟ್ಟನ್ನು ದುಂದುವೆಚ್ಚಕ್ಕೆ ಉಪಯೋಗ ಮಾಡಲಾಗುತ್ತಿದೆ. ಇದನ್ನು ಸರ್ಕಾರದವರು ತಡೆಗಟ್ಟಬೇಕು. ಹೀಗಾದರೆ ಕೊನೆಗೆ ಅಲ್ಲಿ ಲಾಭ ಬರುವುದಕ್ಕೆ ಬದಲಾಗಿ ನಷ್ಟ ಉಂಟಾಗತಕ್ಕ ಅವಕಾಶವಾಗುತ್ತದೆ. ಈ ಖರ್ಚು ವೆಚ್ಚಗಳನ್ನು ನಿಗದಿ ಮಾಡಲೇಬೇಕು. ಇಲ್ಲವಾದರೆ ಸೊಸೈಟಿಗಳು ಬೆಳೆಯುವುದಿಲ್ಲ.

ಇನ್ನು ಫೈನಾನ್ಷಿಯಲ್ ಮೆಮೊರಾಂಡಂನಲ್ಲಿ: ಇಂಥ ಒಂದು ಟ್ರಿಬುನಲ್ ಏಕಿರಬೇಕೆಂದು ಈಗಾಗಲೇ ಅನೇಕ ಸದಸ್ಯರು ಹೇಳಿದ್ದಾರೆ. ಇಲ್ಲಿ ಕಾಂಗ್ರೆಸ್ ಸೈಡಿನಲ್ಲಿ ಯಾರಿಗಾದರೂ ಮಂತ್ರಿ ಪದವಿ ಸಿಗದಿದ್ದಲ್ಲಿ ಅಂಥವರಿಗೆ ಇಲ್ಲಿ ಒಂದು ಜಾಗ ಮಾಡಲು ಹೀಗೆ ಮಾಡಿದ್ದಾರೆಂದು ಜನರು ಆಕ್ಷೇಪಣೆ ಮಾಡುತ್ತಾರೆ. ಅದಕ್ಕೆ ಅವಕಾಶ ಮಾಡಬೇಡಿ. ಬೇಕಾದರೆ ಇನ್ನೂ ಅಧಿಕಾರಿಗಳನ್ನೇ ಜಾಸ್ತಿ ಮಾಡಿ ಅಧಿಕಾರಿಗಳಿದ್ದರೆ ನ್ಯಾಯ ತೀರ್ಮಾನ ಚೆನ್ನಾಗಿ ಆಗುತ್ತದೆ. ಇಷ್ಟು ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

†Sri V. S. PATIL (Belgaum I).—Sir, this is one of the important Bills that have been brought before us and it is also of the same trend as we had the other Bills. It appears that this Session has been called by the Government to make provision for their own hirelings by creating different kinds of posts for those who have failed in the election

(SRI V. S. PATIL)

or for those who have helped our friends on the other side during the last elections. There is no other reason as to why the Government should go on creating these new posts when we know definitely that our finances are not only meagre but inadequate. The work of the Tribunal was being done by the Mysore Appelate Tribunal uptill now. I do not think there is any complaint against the work done by that Tribunal or that there is any lack of intelligence or study of this particular law or whether it has come to the notice of the Government that the present Members of the Tribunal, whom they themselves have appointed, have no knowledge of the Co-operative Societies Act. I do not find or I have not come across any case where the decision taken by the present Tribunal was set aside by the Hon'ble High Court on the basis of illegality. This new clause 2 (b) is a creation of a new Tribunal that is to be called a Co-operative Appellate Tribunal consisting of a Chairman and other two Members. What are their qualifications ?

[MR. DEPUTY SPEAKER in the Chair.]

The Chairman is to be a District Judge and he should have three years' experience. This is too meagre. Three years experience means quite a raw man because as we know, the seniority list of the Judicial Department which has been approved by the Central Government as required under the States Reorganisation Act has been kept in cold storage by this Government because they do not like to have the persons from a particular area to be appointed as District Judges and now they are trying to get new recruits. This is the way in which our Government is very keenly trying to put down the rights of others and get their own hirelings. This is the way in which even the District Judges are going to be appointed by taking only new recruits. A man to sit on the tribunal must be a person of a State level, not even district level ; he must be of a higher grade. That is why a person having 10 or 15 years experience as the District Judge ought to have been mentioned, rather than 3 years' experience.

Sri KONDAJJI BASAPPA.—That is the minimum number of years.

Sri V. S. PATIL.—Minimum is sufficient for you to take your own man. There must be a condition that minimum experience of a District Judge who is to be the Chairman of the Board or Tribunal must not be less than 10 years as a District Judge. Then of course we can safely find justice at his hands. The other member is Joint Registrar. I have nothing to say about him because he is a man who must have experience in this branch of the Government. I do not dispute that. But the third person who has to come here is an Advocate having practice, experience in the co-operative movement for a period of not less than 10 years. I fail to understand what is the meaning to be attached to these words "having practice, experience in the co-operative movement for a period of not less than 10 years". Because, the co-operative practice so faras advocates are concerned,

is not confined to any particular class. What is the principle that is required to take it or presume that he has got experience in that branch; that is not mentioned here. Supposing an advocate has appeared in one or two cases in a year for the last ten years; will that be suffcient? How is the Government going to judge that the experience of that man is sufficient to appoint him on the Bench. What is the standard? That is why it appears that Government wants to create posts after fixing up particular individuals who are to be appointed, and that has come in vogue. Even in the Centre whenever their ownman is qualified or is doing a particular work......

Mr. DEPUTY SPEAKER.—Let not the Hon'ble Member comment on the Central Government.

Sri V. S. PATIL.—We have to, because it is the same thing coming round here. Then the notification clearly says that he must be qualified or obtained a degree, so and so, he must have so many months or years experience in a particular branch. Then alone his qualification will be there. Similar is the case here. I apprehend that Government must have made up their mind about the three individuals who are to be appointed as members of the tribunal and they have prescribed these qualifications in this Bill. That will be detrimental to the efficient working of the department for which we are going to have this law. That is why I should like to say that having this tribunal and incurring an additional expenditure of about Rs. 1,10,000 per year, is not appealing to us, and especially when we are incurring heavy debts, it is no use creating new posts and incurring an additional expenditure when the work can be done by the present machinery. But I do not think that our Minister will accept or concede this request. They must have determined to appoint three persons and they have brought this law before us and as the majority which we often call the brut majority, they will get it passed and the public finances will be spent without any necessity.

Substitution of new section for sec. 4.

I refer to clause 4. Here the proviso is:

> "Provided that no co-operative society shall be registered if it is likely to be economically unsound, or the registration of which may have an adverse effect on development of the co-operative movement."

What is the meaning of this, and how far it will affect so many co-operative branches started by......

Mr. DEPUTY SPEAKER.—Who is to judge that it is like that?

Sri V. S. PATIL.—Take the instance of handpounding societies. That kind of society is always working at a loss. If this provision is retained, certainly all these societies will have to be scrapped off from the Registrar's books, So I should like to tell the Minister in charge that if this is retained, then gur making societies, handpounding societies and some other kinds of societies will have to be scrapped. Let the Minister think over it again.

(SRI V. S. PATIL)

Clause 7—Amendment of section 16. The proposed sub-section (2) runs like this :

"No co-operative society shall, without sifficient cause, refuse admission to membership to any person duly qualified therefor under the provisions of this Act and its bye-laws."

This is a very welcome amendment that is brought forward. I was thinking of such an amendment for the last 20 years. I have experience that some of these co-operative societies and co-operative banks have framed their bye-laws that they will never allow any outsider to come there and disturb the present set up and that is why our own friends, to quote an example, Mr.........

MR. DEPUTY SPEAKER.—No names need be mentioned.

SRI V. S. PATIL.—He was an ex-Revenue Minister of this House. He tried his level best to be member of the District Co-operative Bank at Belgaun, for nearly 5 or 6 years.

Even that man was not allowed to become a member because of the stringent byelaws prepared by that bank. From that time, we were trying to persuade the Bombay Government as well as this Government to see that this bye-law making power is curtailed to such an extent that any honest man who subscribes to the share-capital must be allowed to become a member. But the danger is about the bye-law—the bye-laws prepared by the societies or banks must be scrutinised by the Government and if necessary the impediments created for becoming members must be removed.

[MR. SPEAKER in the Chair.]

I support clause 14 because it will help tenants to purchase lands.

The idea of this Bill is to set-up land development banks which would issue debentures and capital. When there are so many other banks,why another bank to do the same work ? There are the District Co-operative Banks which also give loans to societies.

SRI RAMAKRISHNA HEGDE.—The purpose is to convert the exis- Land Mortgage Banks into Land Development Banks. The district central banks give short-term credit.

SRI V. S. PATIL.—What is rather strange in clause 21 section 81-A is that the sale of defaulter's immoveable property is handed over to the bank itself. Till now, the award is passed by the arbitrators and the decree is executed by the court. In this bill a change is effected so that not only the decree but also the sale is to be effected by the bank. I think this will create troubles. If any redress is to be sought from the Directors of the Board. there will be no remedy at all. We know local politics. They will try to harass some of their opponents. Therefore it is desirable that some third person, that is, the court, should have the

power or it might be the Deputy Commissioner, to whom a reference has been made in Section 89 (C) (2). When the possession is to be handed over the Deputy Commissioner is to be approached and why should not the sale take place at the hands of the D. C. ? The bank being the plaintiff in this case, should not be allowed to be the court. Otherwise the plaintiff himself would be the judge and he will decide against the defendants, who will have no remedies at all.

† ಶ್ರೀ ಎಸ್. ಗೋಪಾಲ ಗೌಡ.—ಸ್ವಾಮಿ, ಸಹಕಾರ ಶಾಖೆಯ ಸಚಿವರು ಈ ಸಭೆಯ ಮುಂದೆ ಮಂಡಿಸಿರುವ 1964ನೇ ಇಸವಿಯ ಸಹಕಾರ ಸಂಘಗಳಿಗೆ ಸಂಬಂಧಪಟ್ಟ ತಿದ್ದುಪಡಿ ವಿಧೇಯಕದ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಮಾನ್ಯ ಸಚಿವರು ತಮ್ಮ ಭಾಷಣದಲ್ಲಿ ಈ ತಿದ್ದುಪಡಿಯ ಅವಶ್ಯಕತೆಯನ್ನು ಹೇಳಿದ್ದಾರೆ. ಈ ಸಹಕಾರ ಸಂಸ್ಥೆಗಳಿಗೆ ಸಂಬಂಧಪಟ್ಟಹಾಗೆ ರಾಯಚೂರು ಜಿಲ್ಲೆಯಲ್ಲಿರುವ ಸಹಕಾರ ಸಂಸ್ಥೆಯಲ್ಲಿ ಹಣದುರ್ವ್ಯಯವಾಗಿದೆ ಎನ್ನುವ ವಿಷಯ ಈ ದಿನ ಬೆಳಿಗ್ಗೆ ಈ ಸಭೆಯ ಮುಂದೆ ಬಂತು. ಆ ರೀತಿ ಹಣ ದುರುಪಯೋಗವಾಗುತ್ತಿರುವುದನ್ನು ತಡೆಗಟ್ಟುವುದಕ್ಕೆ ಸರ್ಕಾರದವರೇನಾದರೂ ಕ್ರಮವನ್ನು ಕೈಗೊಳ್ಳಬಹುದೇನೋ ಎಂದು ಹೇಳಿ ನಾನು ಭಾವಿಸಿದ್ದೆ. ಆದರೆ ಇದು ಬೇರೆ ಉದ್ದೇಶಗಳನ್ನು ಒಳಗೊಂಡಿದೆ. ಮೊದಲನೆಯದಾಗಿ, ಈ ಮಸೂದೆಯ ಡ್ರಾಫ್ಟ್ ಬಗ್ಗೆ ಹೇಳುವುದಾದರೆ, ಇದರಲ್ಲಿ ಕೆಲವು ಸ್ಪೆಲಿಂಗ್ ಮಿಸ್ಟೇಕ್ಸ್ ಮತ್ತು ಪ್ರಿಂಟಿಂಗ್ ಮಿಸ್ಟೇಕ್ಸ್ ಇವೆ. ಅವುಗಳನ್ನು ತಿದ್ದುಪಡಿಮಾಡುತ್ತಾರೆಂದು ನಾನು ಭಾವಿಸುತ್ತೇನೆ. ಈ ಕಾನೂನು ಬಗ್ಗೆ ಹೇಳುವುದಾದರೆ, ಈಗ ಈ ಮಸೂದೆಯಲ್ಲಿ ತಂದಿರತಕ್ಕ ಕೆಲವು ತಿದ್ದುಪಡಿಗಳೇನಿವೆ ಅವು ಮೂಲ ಮಸೂದೆಯಲ್ಲಿದ್ದಂತಹ ಕಾನೂನಿನ ಬಗ್ಗೆ ತದ್ವಿರುದ್ಧವಾದ ಕೆಲವು ಪೂರಕವಾದ ಬೇರೆ ಅಭಿಪ್ರಾಯಗಳನ್ನು ಹೊಂದಿವೆ ಎಂದು ಹೇಳಬಹುದು. ಮಾನ್ಯ ಸಹಕಾರ ಸಚಿವರ ಅಭಿಪ್ರಾಯದಲ್ಲಿ ಎಲ್ಲಾ ಜನರ ಕಾರ್ಯಕ್ರಮಗಳನ್ನೂ, ಆರ್ಥಿಕ ಕಾರ್ಯಕ್ರಮಗಳನ್ನೂ ಸಹಕಾರ ಪದ್ಧತಿಯ ಮೇಲೆ ರೂಢಿಸಿಕೊಂಡು ಹೋಗಬೇಕು ಎಂದು ಸಮಾಜವಾದಕ್ಕೆ ಸಬ್‌ಸ್ಟಿಟ್ಯೂಟ್ ರೀತಿಯ ಧೋರಣೆಯನ್ನು ಹೊಂದಿರುವಂತಹ ಅಭಿಪ್ರಾಯ ಕಂಡುಬರುತ್ತದೆ. ಇದರಲ್ಲಿ ಸ್ವಲ್ಪಮಟ್ಟಿಗೆ ಅವರ ಅಭಿಪ್ರಾಯ ಕಾರ್ಯಗತವಾಗುತ್ತದೆ. ಆದರೂ ಸಮಾಜವಾದ ಸಮಾಜದ ತತ್ವದ ಆಧಾರದ ಮೇಲೆ ಸಹಕಾರ ಸಂಸ್ಥೆಗಳನ್ನು ಸ್ಥಾಪನೆ ಮಾಡುವುದಾದರೆ, ಕೆಲವು ಮಟ್ಟಿಗೆ ಜನಗಳ ಆರ್ಥಿಕಮಟ್ಟವನ್ನು, ಆರ್ಥಿಕ ಭದ್ರತೆಯನ್ನು ಸುಧಾರಣೆ ಮಾಡಬಹುದು ಎಂದು ನನಗೆ ಅನಿಸುತ್ತದೆ. ಈಗಿನ ವ್ಯವಸ್ಥೆಯನ್ನು ನೋಡಿದರೆ, ಆಡಳಿತಯಂತ್ರ ವಿಸ್ತಾರವಾಗುತ್ತಾ ಇರುವುದನ್ನು ನೋಡಿದರೆ ನಮಗೆ ಬಹಳ ಭಯ ಉಂಟಾಗುತ್ತಿದೆ ಎಂದು ಹೇಳಬಹುದು.

ಪಾರ್ಕಿನಸನ್ ಥಿಯರಿ ಎಂದರೆ ಯಾವುದಾದರೂ ಒಂದು ಹೊಸ ಆಫೀಸನ್ನು ಮಾಡಿದರೆ ಅವರು ಕೆಲಸವನ್ನು ಹುಡುಕಿಕೊಳ್ಳುತ್ತಾರೆ ಆ ಆಫೀಸಿನ ಜಸ್ಟಿಫಿಕೇಷನ್‌ಗಾಗಿ......

5-00 P.M.

ಅಧ್ಯಕ್ಷರು.—ಪಾರ್ಕಿನ್‌ಸನ್ ಲಾ ಜನರನ್ನು ಹೆಚ್ಚು ಮಾಡುವುದಕ್ಕೆ ಅನ್ವಯಿಸುತ್ತದೆ. ಹೊಸ ಆಫೀಸು ಮಾಡಿದರೆ ಅದಕ್ಕೆ ಹೇಳುವುದಿಲ್ಲ.

ಶ್ರೀ ಎಸ್. ಗೋಪಾಲ ಗೌಡ.—ರಿಜಿಸ್ಟ್ರಾರ್ ಎನ್ನುವವರು ಒಂದು ಕಾಲದಲ್ಲಿ ಏನೇ ತೆಗೆದುಕೊಂಡು ಹೋಗಲಿ ರಿಜಿಸ್ಟರ್ ಮಾಡುವವರು ಎಂದು ಇತ್ತು. ಒಂದು ಮೂಲಭೂತವಾದ ಹಕ್ಕಿನ ಪ್ರಕಾರ ಕಣ್ಣು ಮುಚ್ಚಿಕೊಂಡು ರಿಜಿಸ್ಟರ್ ಮಾಡುವವರು ಎಂದು ಇತ್ತು. ಇವತ್ತು ಇದರಲ್ಲಿ 2-ಎ ಎಂದು ಏನು ಕ್ಲಾಜ್ ಹಾಕಿದ್ದಾರೆಯೋ ಅದನ್ನು ಓದಿದರೆ ಗೊತ್ತಾಗುತ್ತದೆ. ಇದು ಪಾರ್ಕಿನಸನ್ ಥಿಯರಿ ಅಲ್ಲವೇ ! ಇದು ಹೇಗೆ ಜಸ್ಟಿಫೈ ಆಗುತ್ತದೆ? ಇದರಿಂದ ಸರ್ಕಾರದ ಮತ್ತೊಂದು ಸೆಕ್ರೆಟೇರಿಯಟ್ ಬೆಳೆಯುತ್ತದೆ. ಈಗ ಹೇಗೆ ಚೀಫ್ ಸೆಕ್ರೆಟರಿ, ಸೆಕ್ರೆಟರಿ, ಅಂಡರ್ ಸೆಕ್ರೆಟರಿ, ಎಂದು ಇದ್ದಾರೆಯೋ ಹಾಗೆಯೇ ಸಹಕಾರಿ ಸಂಸ್ಥೆಗೂ ಒಂದು ಹೊಸ ಕಟ್ಟಡವನ್ನು ಕಟ್ಟಿಸಬೇಕು, ಹೆಚ್ಚು ಸಿಬ್ಬಂದಿ ಬೇಕು, ಹೀಗೆ ಬಹಳ ದೊಡ್ಡ ವ್ಯವಸ್ಥೆಯಾಗಿ ಬೆಳೆಯುತ್ತಿದೆ, ಎಲ್ಲ ಕಡೆಯಲ್ಲಿಯೂ ಬೆಳೆಯುತ್ತಿದೆ. ಸಚಿವರ ದೃಷ್ಟಿಯಿಂದ ಹೇಳುವುದಾದರೆ ದೊಡ್ಡ ದೊಡ್ಡ ಹುದ್ದೆಗಳಿಗೆ ನೇಮಕ ಮಾಡತಕ್ಕ ಪೋರ್ಟ್‌ಫೋಲಿಯೋ ಇರಲಿಲ್ಲ ಇದುವರೆಗೂ ಎನ್ನುವ ದೃಷ್ಟಿಯಿಂದ ಇದು ಸಮರ್ಥನೀಯ. ಕೆಲವು ಪೋರ್ಟ್‌ಫೋಲಿಯೋಗಳಿಗೆ ನೇಮಕ ಮಾಡುವ, ವರ್ಗ ಮಾಡುವ ಅಧಿಕಾರಗಳಿರಲಿಲ್ಲ. ಈ ಕಾನೂನಾದರೆ ಆ ಪೋರ್ಟ್‌ಫೋಲಿಯೋ ಮಾಡಿಕೊಳ್ಳಬಹುದು.

(ಶ್ರೀ ಎಸ್. ಗೋಪಾಲಗೌಡ)

"All officers and persons employed in the administration of this Act shall observe and follow the orders, instructions and directions of the State Government and the Registrar, and the officer or officers to whom each officer appointed under this Act shall be subordinate shall be determined by the State Government."

ಇದು ಯಾವ ಕಾನೂನಿನಲ್ಲಿದೆಯೋ, ಇರಬೇಕೋ ನನಗೆ ಗೊತ್ತಿಲ್ಲ. ಸರ್ಕಾರದಿಂದ ಸಂಬಳ ಕೊಡ ಡುವ ಒಂದು ಹುದ್ದೆಗೆ ನೇಮಕ ಮಾಡಲ್ಪಟ್ಟ ಮೇಲೆ ನೇಮಕ ಮಾಡಲ್ಪಟ್ಟವರು ಯಾವುದನ್ನು obey ಮಾಡಬೇಕು, ಮಾಡಬಾರದು ಎಂದು ಹೆಚ್ಚು ಕರಾರು ಹಾಕಿದ ಹಾಗೆ ಇದೆ. ಇದು ಬೇರೆ ಯಾವುದೋ ಆಕ್ಟ್‌ನಲ್ಲಿ ಇದೆಯೋ ಏನೋ—ನಮ್ಮವರು ಕಾಪಿ ಹೊಡೆಯುವುದರಲ್ಲಿ ನಿಷ್ಣಾತರು. ಅವರು ಇದನ್ನು ಏತಕ್ಕಾಗಿ ಹಾಕಿದ್ದಾರೆಯೋ ಗೊತ್ತಿಲ್ಲ. ರಿಜಿಸ್ಟ್ರಾರ್ ಆದವರು ಟೆಲಿಫೋನ್ ಮಾಡಿದರೆ ಕೊಟ್ಟ ಸೂಚನೆಗಳಂತೆ ನಡೆಯುವುದಿಲ್ಲವೆಂದೋ ಏನೋ ಗೊತ್ತಿಲ್ಲ. ಆದರೆ ಟ್ರಿಬ್ಯುನಲ್‌ಗೆ ಮಾತ್ರ ಇನ್‌ಸ್ಟ್ರಕ್ಷನ್ ಕೊಡುವುದಿಲ್ಲ ಎಂದು ಹೇಳಿದ್ದಾರೆ, ಅದೂ ಪ್ರಾವಿಸೋದಲ್ಲಿ.

The State Government shall constitute a Co-operative Appellate Tribunal consisting of a Chairman and two other members to exercise the functions conferred on the Tribunal by or under this Act. The Chairman of the Tribunal shall be a District Judge who has held office as such Judge for not less than three years......"

ಈಗ ಪ್ರತಿನಿತ್ಯ ನಡೆಯುತ್ತದೆ, ಆದ್ದರಿಂದ ಪ್ರತ್ಯೇಕವಾಗಿ ಹೇಳಿದ್ದಾರೆಂದು ನನಗನ್ನಿಸುತ್ತದೆ. ಇದರ ಬಗ್ಗೆ ನಮಗೆ ಸಾಕಷ್ಟು ಸಮಾಧಾನವಿಲ್ಲ. ಹೊಸದಾಗಿ ಈ ಕ್ಲಾಜನ್ನು ಯಾವ ಉದ್ದೇಶ ದಿಂದ ಮಾಡಿದ್ದಾರೆ? ರಿಜಿಸ್ಟ್ರಾರುಗಳ ಸಂಖ್ಯೆಯನ್ನು ಹೆಚ್ಚಿಸುವುದಕ್ಕೆ ಮಾಡಿಕೊಂಡಿದ್ದರೆ ಚಿಂತೆ ಇಲ್ಲ.

"...may appoint as many Joint Registrars of Cooperative Societies......"

ಇತ್ಯಾದಿ ಇಲ್ಲಿದೆ. ಆದುದರಿಂದ ಈ ಮಸೂದೆಯನ್ನು ಅವಸರವಸರವಾಗಿ ತರುವುದರ ಉದ್ದೇಶ ನಮಗೆ ಬೇರೆಯಾಗಿ ಕಾಣುತ್ತದೆ. ಇದು ಇಲಾಖೆಯವರಿಂದ ಬಂತೋ, ಕೇಂದ್ರದಿಂದ ಏನಾದರೂ ಆದೇಶ ಬಂದಿತ್ತೋ ಅಥವಾ ಬೇರೆ ಯಾವ ರಾಜ್ಯದ ಕಾನೂನನ್ನು ಇವರು ಅನುಕರಣೆ ಮಾಡು ವುದಕ್ಕೆ ಹೊರಟಿದ್ದಾರೆಯೋ ಅಥವಾ ಮಾನ್ಯ ಸಚಿವರ ಮನದಿಂದಲೇ ಬಂತೋ ಗೊತ್ತಿಲ್ಲ. ಈ ಇಲಾಖೆಯ ತಲೆಯನ್ನು ಇನ್ನಷ್ಟು ದೊಡ್ಡದಾಗಿ ಬೆಳಸುವುದಕ್ಕೆ ಈ ಕ್ಲಾಜನ್ನು ತರಲಾಗಿದೆ.

ಟ್ರಿಬ್ಯುನಲ್ ವಿಷಯ ಈಗಾಗಲೇ ಮಾನ್ಯ ಸ್ನೇಹಿತರು ಹೇಳಿದ್ದಾರೆ. ಶ್ರೀಮಾನ್ ಹೆಗ್ಗಡೆ ಯವರು ಹೊಸಬರಾದರೂ ಬಹಳ ಚೆನ್ನಾಗಿ ಮಾತನಾಡಿ ಆರ್ಬಿಟ್ರೇಟರ್ಸ್ ಮುಂದೆ ಸಾವಿರಾರು ಕೇಸುಗಳು ಬಿದ್ದಿವೆ, ಆದುದರಿಂದ 'ಸಿ' ಟ್ರಿಬ್ಯುನಲ್ ಅವಶ್ಯಕತೆ ಇದೆ ಎಂದು ಹೇಳಿದರು. ರೆವೆನ್ಯೂ ಅಪೆಲೇಟ್ ಟ್ರಿಬ್ಯುನಲ್‌ನಲ್ಲಿ ಇದಕ್ಕೆ ಸಂಬಂಧಪಟ್ಟ ಹಾಗೆ ಎಷ್ಟು ಕೇಸುಗಳಿವೆ ಎಂದು ನೋಡಿದ್ದಾ ರಯೇ ಸ್ವಾಮಿ ? ಈ ಟ್ರಿಬ್ಯುನಲ್ ವಿಷಯವಾಗಿ ಶ್ರೀಮಾನ್ ವಿ. ಎಸ್. ಪಾಟೀಲರು ಈಗಾಗಲೇ ಹೇಳಿದ್ದಾರೆ, ಜಡ್ಜ್ ಯಾವ ತರಹ ಇರಬೇಕು ಎಂದು. ಅಡ್ವೊಕೇಟ್ ಆಗಿರುವವನು ಇರಬೇಕೇ ಎನ್ನುವ ಪ್ರಶ್ನೆ ಬರುತ್ತದೆ. ಯಾವ ತರಹ ಅಡ್ವೊಕೇಟ್ ಇರಬೇಕು ಎಂದರೆ ಸಹಕಾರ ಚಳುವಳಿಯಲ್ಲಿ ಅನುಭವವಿದ್ದವರು ಇರಬೇಕು ಎಂದು ಹೇಳುತ್ತಾರೆ. ನಮ್ಮಲ್ಲಿ ಬಹಳ ಜನ ಕಾಂಗ್ರೆಸ್ ಕೆಲಸಗಾರ ಗೆ ಸಹಕಾರ ಚಳುವಳಿಯಲ್ಲಿ ಅನುಭವವಿದೆ. ಇವರನ್ನು ಯಾರನ್ನಾದರೂ ದೃಷ್ಟಿಯಲ್ಲಿ ಇಟ್ಟು ಕೊಂಡು ಮಾಡಿದ್ದಾರೆಯೇ ಎನ್ನುವ ಭಯ ಬರುತ್ತದೆ. ಬೆಳಗ್ಗೆ ತಾನೇ ಲಕ್ಷಗಟ್ಟಲೆ ಹಣ ದುರುಪ ಯೋಗವಾಗಿದೆ ಎಂದು ಸರ್ಕಾರದವರು ಹೇಳಿದರು. ಕಾನೂನು ಪ್ರಕಾರ ಅನುಭವವಿರುವವರು ಬಹಳ ಜನ ಅಡ್ವೊಕೇಟರುಗಳಿದ್ದಾರೆ ಬೇರೆ ಯಾರಾದರೂ ಸರಿ ಅವರು ವಜಾ ಮಾಡಬಹುದು. ಯಾವ ತರಹ ಜನರಿದ್ದರೆ ನ್ಯಾಯ ದೊರಕುತ್ತದೆ ಎಂಬುದನ್ನು ನೋಡಬಹುದು. ಹೊಸ ಲ್ಯಾಂಡ್

ರೆವೆನ್ಯೂ ಕೋಡ್ ಪ್ರಕಾರ ಬಹಳ ದೊಡ್ಡ ಟ್ರೈಬ್ಯುನಲ್ಲನ್ನು ನಾವು ಸೃಷ್ಟಿ ಮಾಡಿದ್ದೇವೆ. ಈ ರಾಜ್ಯದಲ್ಲಿ ಬರತಕ್ಕ ಎಲ್ಲ ಅಪೀಲುಗಳನ್ನೂ ಕೇಳುವುದಕ್ಕೆ ಎಷ್ಟು ದೊಡ್ಡ ಟ್ರೈಬ್ಯುನಲ್ ಬೇಕೋ— ಅನಿವಾರ್ಯವಾಗಿ ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟಿಗೆ ಹೋಗುವುದನ್ನು ಬಿಟ್ಟು—ಅಷ್ಟು ದೊಡ್ಡದನ್ನು ಮಾಡಿದ್ದೇವೆ. ಎಲ್ಲ ಅಪೀಲುಗಳನ್ನೂ ಅಲ್ಲಿ ತೀರ್ಮಾನ ಮಾಡಬೇಕಾಗಿದೆ. ಹೊಸ ರೆವೆನ್ಯೂ ಕೋಡನ್ನು ದಯವಿಟ್ಟು ನೋಡಬೇಕು. ಈ ಟ್ರೈಬ್ಯುನಲ್ ರಚನೆ ಮಾಡುವುದಕ್ಕೆ ಹೊರಟವರು ಈ ರಾಜ್ಯದಲ್ಲಿ ಇನ್ನು ಮೇಲೆ ಕನಿಷ್ಟ 1,09,000 ರೂಪಾಯಿಗಳನ್ನು ಹೆಚ್ಚು ಖರ್ಚು ಮಾಡುವಂಥ ಟ್ರೈಬ್ಯುನಲ್ ಆಗಿದೆ ಇದು. ಈಗಾಗಲೇ ಇರತಕ್ಕ ಎಷ್ಟೋ ಟ್ರೈಬ್ಯುನಲ್‌ಗಳಿಗೆ ಅಥವಾ ಆಫೀಸುಗಳಿಗೆ ಕೆಲಸವಿಲ್ಲ. ಆಫೀಸುಗಳಲ್ಲಿ ಅವರು ಕೆಲಸ ಮಾಡುವುದಿಲ್ಲ ಎನ್ನುವುದು ಬೇರೆ ಮಾತು. ಆಫೀಸುಗಳಲ್ಲಿ ಸಾಕಷ್ಟು ಕೆಲಸ ಇಲ್ಲವೇ ಇಲ್ಲ. ಹೀಗಿರುವಾಗ ಮಾನ್ಯ ಸಚಿವರು ಈ ಟ್ರೈಬ್ಯುನಲ್ ಅಷ್ಟೊಂದು ಅಗತ್ಯವೆಂದು ಹೇಗೆ ಮನಗಂಡರು ಎನ್ನುವುದು ನನಗೆ ಗೊತ್ತಿಲ್ಲ. ಟ್ರೈಬ್ಯುನಲ್ಲನ್ನು ಇವರ ಕೈಗೊಂಬೆ ಮಾಡಿಕೊಳ್ಳುತ್ತಾರೆ ಎಂದು ಅಪಾದನೆ ಮಾಡುವುದಕ್ಕೆ ಹೋಗುವುದಿಲ್ಲ. ಪ್ರಾವಿಸೋದಲ್ಲಿ ಅವರಿಗೆ ಇನ್‌ಸ್ಟ್ರಕ್ಷನ್ ಕೊಡುವುದಿಲ್ಲ ಎಂದು ಹೇಳಿದ್ದಾರೆ. ಒಟ್ಟಿನಲ್ಲಿ ರೆವೆನ್ಯೂ ಅಪಲೇಟ್ ಟ್ರೈಬ್ಯುನಲ್ ಇರುವುದರಿಂದ ರೆವೆನ್ಯೂ ಬೋರ್ಡ್ ಇರುವುದರಿಂದ ಸಹಕಾರ ಸಂಘಗಳಿಗೆ ಸಂಬಂಧಪಟ್ಟ ಹಾಗೆ ಒಂದು ಟ್ರಿಬ್ಯುನಲ್ ಮಾಡುವುದು ಅವಶ್ಯಕತೆ ಇಲ್ಲವೆನ್ನುವುದು ನನ್ನ ಖಚಿತವಾದ ಅಭಿಪ್ರಾಯ.

ಫೈನಾನ್‌ಷಿಯಲ್ ಮೆಮೊರಾಂಡಂನಲ್ಲಿ ತೋರಿಸಿರುವಂತೆ ಹಣವನ್ನು ಖರ್ಚು ಮಾಡುವುದಕ್ಕೆ ನಾವು ಅಧ್ಯಕ್ಷರ ಅಪ್ಪಣೆ ಪಡೆಯುವುದು ಅಗತ್ಯ ಎಂದು ಇದೆ. ಅದನ್ನು ಮಾನ್ಯ ಸಚಿವರು ಪಡೆದಿದ್ದಾರೆಯೋ ಏನೋ ? ಆ ರೀತಿ ಅಪ್ಪಣೆಯನ್ನು ಪಡೆಯದೆ ಇದ್ದರೆ ಇಲ್ಲಿ ಬರುವುದಕ್ಕೆ ತಾವು ಬಿಡುವುದಿಲ್ಲ.

Mr. SPEAKER.—The member is mistaken. It is only when there is a taxation proposal that it has to go to the President and it is not everything that has to go to the President.

ಶ್ರೀ ಎಸ್. ಗೋಪಾಲ ಗೌಡ.—ಕನ್‌ಸಾಲಿಡೇಟೆಡ್ ಫಂಡಿನಿಂದ ಹೆಚ್ಚುವರಿ ಖರ್ಚು ಮಾಡುವುದಕ್ಕೆ ಏನೂ ಇಲ್ಲವೇ ಸ್ವಾಮಿ ? ಜನರ ಮೇಲೆ ಹೊಸ ತೆರಿಗೆ ಹಾಕುವುದಕ್ಕೆ ಅಪ್ಪಣೆ ಪಡೆಯಬೇಕು. ಕನ್‌ಸಾಲಿಡೇಟೆಡ್ ಫಂಡಿನಿಂದ ಒಂದೊಂದು ಲಕ್ಷ ರೂಪಾಯಿಯನ್ನು ಟ್ರೆಜರಿಯಿಂದ ಹೊರಗಡೆಗೆ ಕೊಟ್ಟರೆ ಹೇಗೆ ಎನ್ನುವುದನ್ನು ವಿಚಾರ ಮಾಡಬೇಕು.

ನಮ್ಮ ಮಂತ್ರಿ ಮಂಡಲದಲ್ಲಿ ಈ ಮಸೂದೆಗಳನ್ನು ಇದುವರೆಗೂ ಇಟ್ಟುಕೊಂಡು ಪುನರ್ವಿಮರ್ಶೆ ಮಾಡತಕ್ಕ ಅಭಿಪ್ರಾಯವಿಲ್ಲ ಎಂದು ಈಚೆಗೆ ತಂದಿದೆ. ಆಯಾ ಖಾತೆಗೆ ಸಂಬಂಧಪಟ್ಟ ಮಂತ್ರಿಗಳು ಮತ್ತು ಅಧಿಕಾರಿಗಳಿಗೆ ಒಂದು ಹೊಸ ಕಾನೂನನ್ನು ರಚನೆ ಮಾಡಬೇಕೆಂದು ಒಂದು ರಾತ್ರಿ ತಲೆಯೊಳಗೆ ಬಂದರೆ ಒಂದಲ್ಲ ಒಂದು ರೀತಿಯಲ್ಲಿ ಈ ಸಭೆಯ ಮುಂದೆ ಈ ರೀತಿ ಕಾನೂನು ರಚನೆಯಾಗಿ ಬರುತ್ತದೆಂದು ಕಾಣುತ್ತದೆ. ಹಿಂದೆ ಹಣಕಾಸಿನ ಮಂತ್ರಿಗಳೂ ರೆವಿನ್ಯೂ ಮಂತ್ರಿಗಳೂ ಇದರ ಅಗತ್ಯವಿಲ್ಲವೆಂದು ಹೇಳುತ್ತಿದ್ದರು. ರೆವಿನ್ಯೂ ಟ್ರಿಬ್ಯುನಲ್ ಇದೆ, ಅದರಲ್ಲೇ ಇದಕ್ಕೆ ಸಂಬಂಧಪಟ್ಟ ಅಪೀಲುಗಳನ್ನೂ ಇತ್ಯರ್ಥ ಮಾಡುತ್ತಾರೆ ಎಂದು ಹೇಳುತ್ತಿದ್ದರು. ಒಂದು ಒಳ್ಳೆಯ ವ್ಯವಸ್ಥೆಯನ್ನು ಮಾಡುತ್ತೇವೆಂದು ಹೇಳಿದರೆ ಅದಕ್ಕೆ ನಮ್ಮ ಅಭ್ಯಂತರವಿಲ್ಲ. ಹಾಗೆ ಮಾಡುವುದಾದರೆ ಈಗ ಇರುವ ವ್ಯವಸ್ಥೆಯಲ್ಲೇ ಮಾಡಿ ಎಂದು ನಾವು ಹೇಳುವುದು. ಒಬ್ಬರು ರಿಜಿಸ್ಟ್ರಾರ್ ನ್ಯಾಯವನ್ನು ಕೊಡುವುದಿಲ್ಲವೆಂದು ತೋರಿದರೆ. ಇರುವವರಲ್ಲೇ ಬೇರೆಯವರನ್ನು ಆ ಕೆಲಸಕ್ಕೆ ನೇಮಕ ಮಾಡಲಿ. ಅವರಿಂದ ಸರಿಯಾಗಿ ಕೆಲಸ ಮಾಡಿಸಲಿ. ಅದು ಬಿಟ್ಟು ಹೊಸ ಟ್ರಿಬ್ಯೂನಲ್ ರಚನೆ ಮಾಡಿದರೆ ಅದರಿಂದ ನ್ಯಾಯ ದೊರಕುತ್ತದೆ, ಬೇಗ ತೀರ್ಮಾನವಾಗುತ್ತದೆ ಎಂದು ನಾನಂತೂ ಭಾವಿಸುವುದಿಲ್ಲ.

ಇನ್ನು 7ನೆಯ ಸೆಕ್ಷನ್ನಿಗೆ ತಂದಿರುವ ತಿದ್ದುಪಡಿಯ ವಿಚಾರವನ್ನು ಈಗಾಗಲೇ ಶ್ರೀಮಾನ್ ಮುಕ್ಕಣ್ಣಪ್ಪನವರು ಹೇಳಿದ್ದಾರೆ. ರಿಜಿಸ್ಟ್ರಾರ್ ಒಂದು ಅರ್ಜಿಯನ್ನು ಫೈಸಲು ಮಾಡುವುದಕ್ಕೆ ಅಸಮರ್ಥರಾದರೆ ಅವರು ಆರು ತಿಂಗಳೊಳಗಾಗಿ ಅದನ್ನು ಸರಕಾರಕ್ಕೆ ಕಳುಹಿಸಬೇಕೆಂದಿದೆ. ಇದರ ಪರಿಣಾಮವೇನಾಗಬಹುದೆಂದು ಮುಕ್ಕಣ್ಣಪ್ಪನವರು ಅನುಮಾನಪಟ್ಟರು. ಯಾವುದೋ ಒಂದು ಅರ್ಜಿ ಹಾಕಿಸುವುದು, ರಿಜಿಸ್ಟ್ರಾರ್ ತಡ ಮಾಡಿದರೆಂದು ಅದನ್ನು ಸರಕಾರ ತರಿಸಿಕೊಂಡು, ಫೈಸಲು ಮಾಡುವುದು, ಹೀಗಾಗಬಹುದೆಂದು ಅನುಮಾನಪಟ್ಟರು. ಆ ಅನುಮಾನ ಸಾಕಷ್ಟು ಅನುಮಾನದಿಂದ ಬಂದಿರುವುದು. ಈ ಕಾನೂನಿನಲ್ಲಿ ಈ ಅನುಮಾನಕ್ಕೆ ಗ್ಯಾರಂಟಿ ಕೊಟ್ಟಹಾಗಿದೆ, ಇದಕ್ಕೆ ಅವಶ್ಯಕತೆಯಿರಲಿಲ್ಲ. ಒಂದು

(ಶ್ರೀ ಎಸ್. ಗೋಪಾಲಗೌಡ)

ಕಾನೂನಿನ ಚೌಕಟ್ಟಿನಲ್ಲಿ ಆಡಳಿತ ಮಾಡುವಾಗ, ಒಂದು ಕಾನೂನಿನ ನಿಬಂಧನೆಗೊಳಪಟ್ಟು ಒಂದು ಕೆಲಸವನ್ನು ಯಾರು ಮಾಡಬೇಕೆಂಬುದು ಕಾನೂನಿನಲ್ಲಿ ವಿಧಾಯಕವಾಗಿರುವಾಗ, ಮತ್ತೆ ಅದನ್ನು ಹೊರಕ್ಕೆಳೆದು ಪರೀಕ್ಷೆ ಮಾಡುವುದಕ್ಕೆ ಅಗತ್ಯವಿಲ್ಲ. ಸರಕಾರಕ್ಕೆ ತನ್ನ ಆಡಳಿತದಲ್ಲಿ ತನಗೇ ನಂಬಿಕೆ ಇಲ್ಲದೆ, ಪದೇ ಪದೇ ಹೊರಗೆಳೆದು ಪರೀಕ್ಷೆ ಮಾಡುವುದೆ ? ತಮ್ಮ ಹಿತಸಾಧನೆಯಾಗುತ್ತದೆಯೇ ಇಲ್ಲವೆ ಎಂದು ಮಂತ್ರಿಗಳು ನೋಡುವುದೆ ? ಸಿರಸಿಯಲ್ಲಿ ಇಂತಹ ಒಂದು ಸಹಕಾರ ಸಂಘವಾದರೆ ತಮ್ಮ ಹಿತಸಾಧನೆಯಾಗುತ್ತದೆಯೆ ಇಲ್ಲವೆ ಎನ್ನುವುದು ಅವರ ದೃಷ್ಟಿಯಾದರೆ, ಅದಕ್ಕೆ ಕಾನೂನೇ ಬೇಕಾಗಿಲ್ಲ. ಅದನ್ನು ಅವರೇ ಮಾಡಬಹುದು, ಮಾಡುತ್ತಿದ್ದಾರೆ. ಹೀಗಿರುವಾಗ ಈ ಕಾನೂನೇಕೆ ? ನಾವು ಕಾನೂನುಬದ್ಧವಾಗಿ ಎಲ್ಲವನ್ನೂ ಮಾಡುತ್ತಿದ್ದೇವೆಂದು ಪ್ರಪಂಚಕ್ಕೆ ತೋರಿಸುವುದಕ್ಕೆ ?

ಇದೊಂದು ತೋರಿಕೆಗಾಗಿ. ಇದರಲ್ಲಿ ಸದುದ್ದೇಶವೇನೂ ನನಗೆ ಕಂಡುಬರುವುದಿಲ್ಲ. ಸರಕಾರ ಅರ್ಜಿ ತರಿಸಿಕೊಂಡೇನು ಮಾಡುವುದು ? ಸರಕಾರದ ಆದೇಶದಂತೆ ಅಥವಾ ಸೂಚನೆಯಂತೆ ಅದೇ ರಿಜಿಸ್ಟ್ರಾರ್ ತನ್ನ ಮುದ್ರೆಯೊತ್ತಬೇಕು......

ಶ್ರೀ ಕೊಂಡಜ್ಜಿ ಬಸಪ್ಪ.—ತೀರ್ಮಾನವಾಗುವುದು ಆರುತಿಂಗಳಿಗಿಂತ ಹೆಚ್ಚಾದರೆ, ಅಷ್ಟರೊಳಗೆ ಮಾಡದಿದ್ದರೆ, ಏಕೆ ತಡವಾಯಿತೆಂದು ಸರಕಾರ ಕೇಳಬಹುದು.

ಶ್ರೀ ಎಸ್. ಗೋಪಾಲ ಗೌಡ.—ಆರು ತಿಂಗಳಲ್ಲಿ ತೀರ್ಮಾನ ಮಾಡದಿದ್ದರೆ, ಸರಿಯಾದ ಕಾರಣವಿಲ್ಲದಿದ್ದರೆ ಅಂತಹ ಅಧಿಕಾರಿಯನ್ನು ಡಿಸ್‌ಮಿಸ್ ಮಾಡಿ ಬೇಕಾದರೆ. ಅದುಬಿಟ್ಟು ರಿಜಿಸ್ಟ್ರಾರ್ ಮಾಡಬೇಕಾದುದನ್ನು ಆತ ಮಾಡದಿದ್ದರೆ ಆ ಅರ್ಜಿಯನ್ನು ಅವರಿಂದ ತರಿಸಿಕೊಂಡು ನೀವೇನು ಮಾಡುವುದು ? ನೀವೇನೂ ರಿಜಿಸ್ಟರ್ ಮಾಡುವಹಾಗಿಲ್ಲ. ಅವನಿಗೆ ಬೇಕಾದರೆ ಹೇಳಿ, ಆರು ತಿಂಗಳಲ್ಲಿ ನೀನು ಅರ್ಜಿಯನ್ನು, ಫೈಸಲು ಮಾಡದಿದ್ದರೆ ನಿನ್ನನ್ನೇ ಫೈಸಲು ಮಾಡುತ್ತೇವೆಂದು ಹೇಳಿ. ಮುಕ್ಕಣ್ಣಪ್ಪನವರು ಎತ್ತಿದ ಪ್ರಶ್ನೆಗೆ ಮಂತ್ರಿಗಳು ಸರಿಯಾದ ಉತ್ತರವನ್ನು ಹೇಳಲಿಲ್ಲ. ಆದುದರಿಂದ ಅವರು ಹೇಳಿದ ಹಾಗೆ ಇದರಲ್ಲೇನೋ ರಾಜಕೀಯ ಕಾರಣಗಳಿರಬಹುದು. ಇದರಲ್ಲಿ ಘನವಾದ ಉದ್ದೇಶ ಅಥವಾ ಸರಿಯಾದ ಕಾರಣವಿಲ್ಲವೆಂದು ನಾನು ಭಾವಿಸುತ್ತೇನೆ.

ಇನ್ನು 4ನೆಯ ಕ್ಲಾಜಿಗೆ ಬಂದರೆ, ಯಾವ ಸೊಸೈಟಿಗಳನ್ನು ರಿಜಿಸ್ಟರು ಮಾಡಬಹುದೆಂಬುದು ಇದರಲ್ಲಿದೆ. ಇದುವರೆಗೆ ಕೆಲವು ಜನರು ಸಹಕಾರ ಸಂಘಗಳನ್ನು ಮಾಡಿಕೊಂಡು ಮಿಕ್ಕವರಿಗೆ ಅವಕಾಶಕೊಡುತ್ತಿಲ್ಲವೆಂದು ಮಂತ್ರಿಗಳು ಹೇಳಿದರು. ಅದನ್ನು ನಾನೂ ಒಪ್ಪುತ್ತೇನೆ. ಆದರೆ ಪಕ್ಷಾತೀತ ಸಂಸ್ಥೆಗಳೆಂದು ಹೇಳುವ ಸಹಕಾರ ಸಂಸ್ಥೆಗಳಿಗೂ ಇನ್ನು ಮೇಲೆ ಎಲ್ಲ ಕಡೆಯೂ ರಾಜಕೀಯ ಅನಿಷ್ಟ ಬಡಿದು ಈಗಾಗಲೇ ಸತ್ತು ಬದುಕುತ್ತಿರುವ ಕೆಲವು ಸಂಸ್ಥೆಗಳು ಕೂಡ ಇದರಿಂದ ಸತ್ತುಹೋಗುವ ಪರಿಸ್ಥಿತಿಯುಂಟಾಗಬಹುದು ಎಂಬ ಭಯ ನನಗಿದೆ. ಕೆಲವು ಸಹಕಾರ ಸಂಸ್ಥೆಗಳಲ್ಲಿ ಬೇರೆ ಸದಸ್ಯರನ್ನು ಸೇರಿಸದೇಯಿರುವುದು ನಿಜ. ಕೆಲವು ಸಹಕಾರ ಸಂಸ್ಥೆಗಳನ್ನು ರಿಜಿಸ್ಟರ್ ಮಾಡಬಾರದೆಂದೂ ಅವರಿಗೆ ಅವಕಾಶ ಕೊಡಬಾರದೆಂದೂ ಸರಕಾರದ ತನಕ ಒತ್ತಾಯ ಬಂದಿರುವ ಸಂದರ್ಭಗಳು ನನಗೆ ಗೊತ್ತಿವೆ. ಹೀಗೆಯೇ ಕೆಲವರು ಹತ್ತು ವರ್ಷಗಳಿಂದ ಪ್ರಯತ್ನಪಟ್ಟರೂ ಕೂಡ ಅವರಿಗೆ ಷೇರನ್ನು ಕೊಡದೆ, ಅವರು ಸದಸ್ಯರಾಗುವುದಕ್ಕೆ ಅವಕಾಶ ಕೊಡದೇಯಿರುವ ಸಂದರ್ಭಗಳನ್ನೂ ನೋಡಿದ್ದೇನೆ. ಇದನ್ನು ಸರಿಪಡಿಸುವುದಕ್ಕೆ ಬೇರೆ ರೀತಿಯಲ್ಲಿ ತಿದ್ದುಪಡಿಯನ್ನು ತರಬಹುದಾಗಿತ್ತು. ಹೊಸದಾಗಿ ಒಂದು ವಿಧಿಯನ್ನು ಹಾಕಬಹುದಾಗಿತ್ತು. ಆದರೆ ಇದರಲ್ಲಿ ಯಾವುದೂ ಸ್ಪಷ್ಟವಾಗಿಲ್ಲ. ಸಾರ್ವಜನಿಕ ಹಿತದೃಷ್ಟಿಯಿಂದ ಎಂದಿದೆ. ಅದು ಸ್ಪಷ್ಟವಾಗಿಲ್ಲ. ನಾನು ಭಾಷಣ ಮಾಡುತ್ತಿರುವುದೂ, ನೀವು ಅಲ್ಲಿ ಕುಳಿತಿರುವುದೂ ಕೂಡ ಸಾರ್ವಜನಿಕ ಹಿತದೃಷ್ಟಿಯಿಂದ. ಈ ರೀತಿ ಇರುವುದರಿಂದ ಅನಾಹುತಕ್ಕೆ ಎಡೆ ಕೊಡುತ್ತದೆ. ಇಂಥ ಸಂಸ್ಥೆಗಳಲ್ಲಿ ರಾಜಕೀಯ ಇರಬಾರದು. ಆದರೆ ಬಹುತೇಕ ಎಲ್ಲ ಸಂಸ್ಥೆಗಳಲ್ಲಿ ರಾಜಕೀಯ ಇದೆ. ಹೊಸ ಅಥವಾ ಹಳೆಯದು ಯಾವುದಾದರೂ ಒಂದು ಹೋಗಲೇ ಬೇಕಾದ ಸ್ಥಿತಿ ಬರುತ್ತದೋ ಏನೋ ಎಂಬ ಭಯ ಇದೆ. ಆದುದರಿಂದ ಈ ವಿಷಯ ಬಗ್ಗೆ ಸರಕಾರ ವಿವರಣೆ ಕೊಟ್ಟು ಹೇಗೆ ಕೆಲಸ ಮಾಡುತ್ತಾರೆ ಎಂಬುದನ್ನು ಸಭೆಗೆ ತಿಳಿಸಬೇಕು.

ಸಹಕಾರ ಸಂಘಗಳ ತತ್ವವನ್ನು ನಾವು ಅನುಷ್ಠಾನಕ್ಕೆ ತರುವಾಗ್ಗೆ ನಾಮಿನೇಷನ್ ಮಾಡುವ ಪದ್ಧತಿ ಹೋಗಬೇಕು. ನಾಮಿನೇಷನ್ ಮಾಡಬೇಕೆಂಬ ಸರಕಾರದ ಅಭಿಪ್ರಾಯದಲ್ಲಿ ಪ್ರಾಮಾಣಿಕತೆ ಇಲ್ಲ. ನಾಮಕರಣ ಮಾಡುವಾಗ್ಗೆ ಒತ್ತಾಯ ಬರುತ್ತದೆ. ನಾಮಕರಣ ಮಾಡಿದ ಸದಸ್ಯರು ಇರುವುದರಿಂದ ಅನೇಕ ಸಲ ನಿರೀಕ್ಷಿಸಿದಷ್ಟು ಕೆಲಸವಾಗುವುದಿಲ್ಲ. ನಮ್ಮ ಉದ್ದೇಶ ಬಹಳ ಸಲ ಈಡೇರುವುದಿಲ್ಲ ಎಂಬುದು ನಮಗೆ ಸಾಕಷ್ಟು ಅನುಭವ ಬಂದಿದೆ. ಆದುದರಿಂದ ಸೂಕ್ತವಾ

ರೀತಿಯಲ್ಲಿ ಚುನಾವಣೆಯಾಗಬೇಕು. ಚುನಾವಣೆ ಮಾಡುವುದಕ್ಕೆ ಕಾಲಹರಣವಾಗಬಾರದು. ಇದಲ್ಲದೆ ನಾಮಿನೇಟ ಆಗಿರುವ ಮೆಂಬರನ್ನು ಡ್ಯೂರಿಂಗ್ ದಿ ಪ್ಲೆಜರ್ ಆಫ್ ದಿ ಸ್ಟೇಟ್ ಗವರ್ನಮೆಂಟ್ ಎಂದು ಇರುವುದು ಇದರ ಅರ್ಥವೇನು. ಸರಕಾರದ ಅಂದರೆ ಮಿನಿಸ್ಟರ ಅವರ ಪ್ಲೆಜರ್ ಅಂದ ಹಾಗೆ ಆಗುವುದಿಲ್ಲವೇ ? ಈ ತಿದ್ದುಪಡಿ ಸರಿಯಾಗಿಲ್ಲ. ಆದುದರಿಂದ ನಾಮಕರಣ ಮಾಡುವುದು ಹೋಗಬೇಕು. ಯಾಕಂದರೆ ನಾಮಕರಣ ಮಾಡಿದ ಸದಸ್ಯನು ಸರಕಾರದ ಆದೇಶದಂತೆ ನಡೆಯಬೇಕು. ಸರಕಾರದ ಮರ್ಜಿ ಹಿಡಿದು ನಡೆಯಬೇಕು ಎನ್ನುವ ಮಾತು ಅವಮಾನಕರವಾಗಿದೆ. ಅನಪೇಕ್ಷಣೀಯವಾದ ಲೋಪದೋಷಗಳು ಬರುತ್ತವೆ. ಇದರಿಂದ ಅನಾಹುತ ಉಂಟು ಮಾಡುವುದಕ್ಕೆ ಹಾದೀ ಮಾಡಿಕೊಡುತ್ತೇವೆ. ಆದುದರಿಂದ ಇದನ್ನು ಪುನಃ ಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು 13ನೇ ಕ್ಲಾಜಿನಲ್ಲಿ ಲ್ಯಾಂಡ್ ಮಾರ್ಟಗೇಜ್ ಬ್ಯಾಂಕು ಎಂಬುದಕ್ಕೆ ಬದಲಾಗಿ ಲ್ಯಾಂಡು ಡೆವಲಪ್‌ಮೆಂಟ ಬ್ಯಾಂಕ್ ಎಂದು ಬದಲಾವಣೆ ಮಾಡುವ ತಿದ್ದುಪಡಿ ಇದೆ. ತಾವು ವಕೀಲರಾಗಿದ್ದೀರಿ ತಮಗೆ ವಿಷಯ ಸರಿಯಾಗಿ ಗೊತ್ತಿದೆ. ಲ್ಯಾಂಡ್ ಮಾರ್ಟಗೇಜ ಬ್ಯಾಂಕ ಹೇಗೆ ಅಸ್ತಿತ್ವಕ್ಕೆ ಬಂದುವು ಎಂಬುದು ತಮಗೆ ಗೊತ್ತಿದೆ. ಸಾಲಗಾರ ಭೂಮಿಯನ್ನು ಜಮೀನುದಾರನಿಗೆ ಬಿಟ್ಟುಕೊಡದೆ ಹರಾಜು ಮಾಡಿ ಮಾರಾಟ ಮಾಡುವ ಪರಿಸ್ಥಿತಿ ಉಂಟಾದಾಗ್ಗೆ ಭೂಮಿ ಮಾರ್ಟ ಗೇಜ್ ಮಾಡಿಕೊಂಡು ದುಡ್ಡು ಕೊಡಲು ಲ್ಯಾಂಡ ಮಾರ್ಟಗೇಜ ಬ್ಯಾಂಕುಗಳು ಮುಂದೆ ಬಂದುವು. ಲ್ಯಾಂಡ್ ಮಾರ್ಟಗೇಜ ಮಾತ್ತು ಲ್ಯಾಂಡ್ ಡೆವಲಪ್ಪಮೆಂಟ್ ಈ ಎರಡು ಪದಗಳಲ್ಲಿ ಬಹಳ ಅಂತರವಿದೆ. ಕೇವಲ ಹೆಸರು ಬದಲಿಸುವುದರಿಂದ ಚಮತ್ಕಾರ ಮಾಡುತ್ತೇವೆಂದು ಹೊರಟಿದ್ದೀರಿ. ಈ ಚಮತ್ಕಾರ ನಡೆಯುವುದಿಲ್ಲ. ಮುಖ್ಯವಾಗಿ ಬಡವರಿಗೆ ಅನುಕೂಲವಾಗಬೇಕು. ಬಡವರಿಗೆ ಅನುಕೂಲಮಾಡಿ ಕೊಡುವುದಕ್ಕಾಗಿ ಬೇರೆ ಕಾನೂನು ತರಬೇಕು, ಬರೀ ಡೆವಲಪ್ಪಮೆಂಟ ಬ್ಯಾಂಕ್ ಎಂದು ಹೆಸರು ಬದಲಿಸುವುದರಿಂದ ಅನುಕೂಲವಾಗುತ್ತದೆ ಎಂದು ಭಾವಿಸುತ್ತಿದ್ದರೆ ಅದು ತಪ್ಪು. ಲ್ಯಾಂಡ್ ಮಾರ್ಟಗೇಜ ಬ್ಯಾಂಕಿನ ಉದ್ದೇಶವೇ ಬೇರೆ, ಡೆವಲಪ್ಪಮೆಂಟ್ ಬ್ಯಾಂಕಿನ ಉದ್ದೇಶವೇ ಬೇರೆ. ಇವು ಎರಡೂ ಬೇರೆ ಬೇರೆ ಹೆಸರುಗಳು. ಬರೀ ಹೆಸರು ಬದಲಿಸುವುದರಿಂದ ಲಾಂಡ್ ಮಾರ್ಟಗೇಜ ಬ್ಯಾಂಕಿನ ಉದ್ದೇಶ ಇದರ ಮೂಲಕ ಈಡೇರುವುದಿಲ್ಲ. ಮುಖ್ಯವಾಗಿ ದೇಶದಲ್ಲಿ ಇಂದು ಭೂಸುಧಾರಣೆ ಕಾನೂನು ಜಾರಿಗೆ ಬರಬೇಕು. ಆಹಾರ ಧಾನ್ಯಗಳ ಉತ್ಪತ್ತಿ ಹೆಚ್ಚಿಸ ಬೇಕಾಗಿದೆ. ಆದುದರಿಂದ ಈ ತಿದ್ದುಪಡಿ ಪುನರ್ವಿಮರ್ಶೆ ಮಾಡುವುದು ಒಳ್ಳೆಯದು.

ಕೊನೆಯದಾಗಿ ಒಂದು ಮಾತನ್ನು ವಿನಂತಿ ಮಾಡಿಕೊಳ್ಳಲು ಇಷ್ಟಪಡುತ್ತೇನೆ. ಬೇರೆ ಬೇರೆ ಕ್ಷೇತ್ರದಲ್ಲಿ ಡೆವಲಪ್ಪಮೆಂಟ್ ಮಾಡುವ ಹಾಗೆ ವ್ಯವಸಾಯ ಕ್ಷೇತ್ರದಲ್ಲಿಯೂ ಡೆವಲಪ್ಪಮೆಂಟ್ ಮಾಡಬೇಕಾಗಿದೆ. ಕಂಜೂಮರ್ಸ ಸೊಸೈಟಿ ಏರ್ಪಾಡು ಮಾಡಿ ಅನುಕೂಲ ಮಾಡಕೊಡಬೇಕಾದುದು ಅಗತ್ಯ. ಕಾಲ ವಿಳಂಬವಿಲ್ಲದ ಹಾಗೆ ಕೊಡತಕ್ಕಂಥ ಸಾಲದ ಹಣ ನೂರಕ್ಕೆ ನೂರರಷ್ಟು ಅವರಿಗೆ ಮುಟ್ಟಬೇಕು. ನೇರವಾಗಿ ಕೊಡದೆ ಮಧ್ಯೆ ಏಜೆನ್ಸಿ ಇಟ್ಟುಕೊಂಡರೆ ಪೂರ್ತಿ ಹಣ ಸರಿಯಾಗಿ ಅವನ ಕೈಸೇರುವುದಿಲ್ಲ. ಕೋಟ್ಯಾಂತರ ರೂಪಾಯಿ ವ್ಯವಹಾರ ಮಾಡಿ ಇಲಾಖೆಯ ಮೂಲಕ ಹಣ ಕೊಡಲಾಗುತ್ತಿದೆ. ಇದಕ್ಕಾಗಿ ಅನೇಕ ಜನ ಅಧಿಕಾರಿಗಳನ್ನು ನೇಮಕ ಮಾಡಿದ್ದೀರಿ. ಬಡರೈತನಿಗೆ ಸಹಾಯ ದೊರೆಯ ಬೇಕು. ಇಲ್ಲದಿದ್ದರೆ ಈ ಮಸೂದೆಯ ಉದ್ದೇಶ ಸಾರ್ಥಕವಾಗುವುದಿಲ್ಲ ಆದುದರಿಂದ ಇದನ್ನು ಪುನರ್ವಿಮರ್ಶೆ ಮಾಡಿ ಉತ್ತಮ ರೀತಿಯಲ್ಲಿ ಮಸೂದೆ ತರಲು ಪ್ರಯತ್ನ ಮಾಡಬೇಕು ಎಂದು ಹೇಳಿ ನನ್ನ ಮಾತು ಮುಗಿಸುತ್ತೇನೆ.

5-30 P.M.

†ಶ್ರೀ ಬೈರಪ್ಪಾಜಿ (ತುರುವೇಕೆರೆ).-ಮಾನ್ಯ ಅಧ್ಯಕ್ಷರೇ, ಸಹಕಾರ ಸಂಸ್ಥೆಗಳ ಅಮೆಂಡ್‌ಮೆಂಟು ಬಿಲ್ಲಿನ ಮೇಲೆ ಮಾತನಾಡುತ್ತಾ ಸರಕಾರದ ಗಮನವನ್ನು ಕೆಲವು ವಿಷಯಗಳಬಗ್ಗೆ ಸೆಳೆಯಲು ಪ್ರಯತ್ನ ಪಡುತ್ತೇನೆ.

ಇದರಲ್ಲಿ ಟ್ರಿಬ್ಯುನಲ್ ಸ್ಥಾಪನೆಮಾಡುವ ವಿಚಾರದಲ್ಲಿ ಅನೇಕ ಸ್ನೇಹಿತರು ಸರಕಾರಕ್ಕೆ ಸೂಚನೆಗಳನ್ನು ಕೊಟ್ಟಿದ್ದಾರೆ. ಈ ಸೂಚನೆಯನ್ನು ಸರಕಾರ ಕಾರ್ಯಗತ ಮಾಡಿದರೆ ದೇಶದ ಜನತೆಗ ಮತ್ತು ಸರಕಾರಕ್ಕೆ ಒಳ್ಳೆಯ ಹೆಸರನ್ನು ತರತಕ್ಕಂತಹ ಕಾರ್ಯವನ್ನು ಮಾಡಿದ ಹಾಗಾಗುತ್ತದೆಯೇ? ನಾನು ಸರಕಾರದವರನ್ನು ಕೇಳುತ್ತಿದ್ದೇನೆ. ಈ ಟ್ರಿಬ್ಯುನಲ್ಲಿಗೆ ಚೇರ್ಮನ್ನರನ್ನಾಗಿ ಜಿಲ್ಲಾ ನ್ಯಾಯಧೀಶರು ಮತ್ತು ಇನ್ನು ಇಬ್ಬರು ಈ ಚೇರ್ಮನ್ನರವರ ಸಹಕಾರಕ್ಕಾಗಿ ಒಬ್ಬರು ಜಾಯಿಂಟು ರಿಜಿಸ್ಟ್ರಾರ್‌ರವರು ಮತ್ತು ಇನೊಬ್ಬರು ಸಹಕಾರ ಕ್ಷೇತ್ರದಲ್ಲಿ ನುರಿತಂತಹ ಒಬ್ಬರು ಅಡ್ವೋಕೇಟರು ಎಂದು ಇರುವುದನ್ನೂ ನೋಡಿದರೆ ಇಲ್ಲಿ ಯಾವ ರಾಜಕೀಯ ಅಡಗಿದೆಯೋ ಯಾವ ದೂರದೃಷ್ಟಿ ಇಟ್ಟುಕೊಂಡು ಈ ಮಸೂದೆಯಲ್ಲಿ ಟ್ರಿಬ್ಯುನಲ್ ಮಾಡಬೇಕೆಂದು ಉದ್ದೇಶಿಸಿದ್ದಾರೋ

(ಶ್ರೀ ಬೈರಪ್ಪಾಜಿ)

ತಿಳಿಯುತ್ತಿಲ್ಲ. ಅಂತೂ ಇದು ಬಹಳ ಶೋಚನೀಯವಾದ ಸಂಗತಿಯಾಗಿದೆ. ಈಗಿನ ರೆವೆನ್ಯೂ ಟ್ರಿಬ್ಯುನಲ್ಲಿಗೇನೆ ಕೆಲಸವಿಲ್ಲದೆ ಇರುವಾಗ ಇಲ್ಲಿ ಸಹಕಾರಿ ಟ್ರಿಬ್ಯುನಲ್ ಎಂದು ಆಲೋಚನೆ ಮಾಡುವುದರ ಔಚಿತ್ಯವಾದರು ಏನು ಎಂದು ಸರಕಾರವನ್ನು ಕೇಳಬಯಸುತ್ತೇನೆ. ಸರಕಾರ ಬರೀ ಇಂತಹ ಟ್ರಿಬ್ಯುನಲ್‌ಗಳನ್ನು ಮಾಡಿ ತಮ್ಮ ಜನರನ್ನು ತೃಪ್ತಿ ಪಡಿಸತಕ್ಕಂತಹ ಹವ್ಯಾಸದಲ್ಲಿ ಕೈಹಾಕುವುದು ಬಹಳ ದುಃಖಕರವಾದ ಸಂಗತಿ. ಇಂತಹ ಟ್ರಿಬ್ಯುನಲ್‌ಗಳನ್ನು ಕಡಿಮೆಮಾಡಿ ಇದಕ್ಕೆ ಖರ್ಚಾಗತಕ್ಕಂತ ಒಂದು ಲಕ್ಷದಷ್ಟು ಹಣವನ್ನು ಇದಕ್ಕಿಂತ ಉತ್ತಮವಾದ ಕಾರ್ಯಗಳಲ್ಲಿ ಸರಕಾರ ವಿನಿಯೋಗಿಸುವುದು ಕ್ರಮ ಎಂದೂ ಸರಕಾರಕ್ಕೆ ಸೂಚನೆಕೂಡ ಬಯಸುತ್ತೇನೆ.

ಇದರಲ್ಲಿರುವ ಕ್ಲಾಸು 11 ರಲ್ಲಿ ಸೆಕ್ಷನ್ನು 57 ಕ್ಕಿರುವ ಅಮೆಂಡುಮೆಂಟನಲ್ಲಿ ಡಿವಿಡೆಂಡು ಕೊಡುವಾಗ ಒಂದು ಮಿತಿಗಿಂತ ಮೇಲೆ ಕೊಡಕೂಡದು ಎಂದು ಹೇಳಿರುವುದನ್ನು ನೋಡಿದರೆ, ಕಂಪಲ್ಸರಿಯಾಗಿ ಇದರಲ್ಲೇನೋ ಕೈವಾಡವಿವೆ ಎಂದು ಇಲ್ಲಿಹೇಳಬೇಕಾಗುತ್ತದೆ. ಸಹಕಾರ ಕ್ಷೇತ್ರದಲ್ಲಿರತಕ್ಕ ಎಲ್ಲ ಅಧ್ಯಕ್ಷರುಗಳೂ, ಕಾರ್ಯದರ್ಶಿಗಳೂ ಕೂಡ ಒಂದು ರಾಜಕೀಯ ಪಕ್ಷಕ್ಕೆ ಒಳಪಟ್ಟಿರತಕ್ಕವರು ಇಂತಹ ಒಂದು ಗುಂಪಿನ ಬೆಳವಣಿಗೆಗೋಸ್ಕರ ಇಂತಹ ಪವಿತ್ರವಾದ ಉತ್ತಮವಾದ ಹಣವನ್ನು ವಿನಿಯೋಗಿಸುವಾಗ ಯಾವ ಒಂದು ಕೈವಾಡ ಇರಕೂಡದು ಎಂದು ನಾನಾದರೂ ಇಲ್ಲಿ ಹೇಳುತ್ತಿದ್ದೇನೆ. ಇಂತಹ ಒಂದು ಒಳ್ಳೆಯ ಉದ್ದೇಶಕ್ಕಾಗಿ ಕೊಟ್ಟಂತಹ ಹಣವನ್ನು ವ್ಯರ್ಥವಾಗಿ ಖರ್ಚುಮಾಡುವುದು ಸರಿಯಲ್ಲ. ಒಂದು ಪಕ್ಷದ ಬೆಳವಣಿಗೆಗೆಂದು ಇಂತಹ ಅಸ್ತ್ರವನ್ನು ಉಪಯೋಗಿಸಿಕೊಳ್ಳುವ ಒಂದು ಕೆಟ್ಟ ಪದ್ಧತಿಯನ್ನು ಬಿಡಬೇಕು. ಇದಕ್ಕೆಬದಲು ಜನತೆಯ ಕಲ್ಯಾಣಕ್ಕಾಗಿ ಸಹಕಾರದ ಸಂಸ್ಥೆಗಳಿಂದ ಹಣವನ್ನು ತೆಗೆದುಕೊಂಡರೆ ಅದರಿಂದ ತೊಂದರೆಯೇನೂ ಇಲ್ಲ. ಕೇವಲ ಒಂದು ಗುಂಪು ಅಥವಾ ಬೇರೆ ಸಂಸ್ಥೆಗಳನ್ನು ಬೆಳೆಸುವ ಹವ್ಯಾಸಕ್ಕೆ ಕೈಹಾಕಬಾರದು ಎಂದು ಹೇಳುತ್ತೇನೆ.

ಲ್ಯಾಂಡು ಮಾರ್ಟ್‌ಗೇಜ ಬ್ಯಾಂಕುಗಳ ಡೆವಲಪ್‌ಮೆಂಟಿಗೆ ಒಂದು ಬಿಲ್ಲನ್ನು ತಂದಿದ್ದಾರೆ. ಇದರಲ್ಲಿ ಕೆಲವು ಬದಲಾವಣೆಗಳಾಗುವುದು ಅತ್ಯವಶ್ಯಕ. ಕಾರಣವೇನೆಂದರೆ ಈದಿವಸ ರೈತರು ಅನೇಕ ವಿಧವಾದ ಸಾಲ ಸಹಾಯಗಳನ್ನು ಪಡೆಯುತ್ತಿದ್ದಾರೆ. ಹಿಂದಿನ ಸಾಲಗಳನ್ನು ತೀರಿಸದೆ ಇದ್ದರೆ ಹೊಸದಾಗಿ ಸಾಲ ತಗೆಯಲು ಬೇರೆ ಮಾರ್ಗಗಳನ್ನು ಹುಡುಕಿಕೊಂಡು ಕಷ್ಟಪಡುತ್ತಿದ್ದಾರೆ. ಹಿಂದೆ ಮಾಡಿದಂತಹ ಸಾಲಗಳನ್ನು ರೈತರು ಯಾವರೀತಿ ತೀರಿಸುವುದಕ್ಕೆ ಸಾಧ್ಯವೆನ್ನುವುದನ್ನು ತಾವೂಕೂಡ ಸ್ವಲ್ಪ ಯೋಚನೆಮಾಡಬೇಕು. ಲ್ಯಾಂಡು ಡೆವಲಪ್‌ಮೆಂಟು ಬ್ಯಾಂಕುಗಳೆಂದು ಸಹಸ್ರಾರು ಮಾಡುವುದರಿಂದೇನೂ ಪ್ರಯೋಜನವಾಗುವುದಿಲ್ಲ. ರೈತರಿಗೆ ಮುಖ್ಯವಾಗಿ ಎರಡು ಸೌಕರ್ಯಗಳು ಸಿಗಬೇಕು. ಶೇಕಡ 50 ಭಾಗದಷ್ಟು ಸಾಲತೀರಿಸುವುದಕ್ಕೆ ತಾನುಕೊಟ್ಟು ಇನ್ನುಳಿದ 50 ಭಾಗವನ್ನು ಜಮೀನು ಆಬಾದುಮಾಡಿ ಹೆಚ್ಚುಉತ್ಪನ್ನ ಪಡೆಯುವುದಕ್ಕಾಗಿ ಕೊಡಬೇಕು. ಇದಕ್ಕೆ side by side ಆಗಿ ರೈತರ ಕಷ್ಟನಿವಾರಣೆ ಮಾಡಬೇಕು. ಕಷ್ಟಪಡತಕ್ಕ ರೈತರ ಹೊರೆಯನ್ನು ಕಡಿಮೆ ಮಾಡಲು ಏನಾದರೂ ಪರಿವರ್ತನೆಯಾಗುವ ಮಾರ್ಗವೊಂದನ್ನು ಹುಡಕಬೇಕೆಂದು ನಾನಾದರೂ ಇಲ್ಲಿ ಹೇಳುತ್ತೇನೆ. ಈ ಬ್ಯಾಂಕುಗಳಲ್ಲಿ ಅನೇಕ ಲೋಪದೋಷಗಳಿವೆ. ಇವುಗಳನ್ನೆಲ್ಲಾ ತಪ್ಪಿಸಬೇಕು. ಉದಾಹರಣೆಗೆ ಹೇಳುವುದಾದರೆ ಕೆಲವು ಸೊಸೈಟಿಗಳಲ್ಲಿ ವಾರ್ಷಿಕ ವರದಿ ವೆಚ್ಚವೆಂದು ವಿಶೇಷ ಹಣವನ್ನು ವ್ಯಯ ಮಾಡುತ್ತಾರೆ. ಹಾಗೇ ಟಿ. ಎ. ಮತ್ತು ಡಿ. ಎ. ಗಳೆಂದು ಹಣವನ್ನು ಖರ್ಚು ಮಾಡುತ್ತಿದ್ದಾರೆ. ಹೀಗೆ ಸಾವಿರಾರು ರೂಪಾಯಿಗಳನ್ನು ಖರ್ಚುಮಾಡಿ ಅಲ್ಲಿ ಬರತಕ್ಕ ಲಾಭವನ್ನೆಲ್ಲಾ ತಿಂದು ಹಾಕಿ ಲುಕ್ಸಾನನ್ನು ತೋರಿಸುತ್ತಾರೆ. ಅಂಥಾ ದುರಾಚಾರಗಳನ್ನು ತಪ್ಪಿಸಲು ಇದರಲ್ಲಿ ಯಾವ ಕಲಂಗಳನ್ನೂ ಸೇರಿಸಿಲ್ಲ. ಸರ್ಕಾರದವರ ಸೌಕರ್ಯಕ್ಕೆ ಬೇಕಾದಂಥ ಕಲಂಗಳನ್ನು ಇದರಲ್ಲಿ ಸೇರಿಸಿ ಇದನ್ನು ಒಂದು ತಿದ್ದುಪಡಿ ಮಸೂದೆಯೆಂದು ಹೇಳಿ ತಂದಿದ್ದಾರೆ. ಇಂಥಾ ಮಹತ್ಕಾರ್ಯದಲ್ಲಿ ಸರ್ಕಾರ ತೊಡಗಿದೆಯೇ ವಿನಾ ರೈತನ ಹಣ ಅನ್ಯಾಯವಾಗದಂತೆ ಅದನ್ನು ತಡೆಗಟ್ಟುವ ಕಡೆಗೆ ಸರ್ಕಾರದವರ ಗಮನವೇ ಹೋಗಿಲ್ಲ. ಅಷ್ಟೇ ಅಲ್ಲದೆ ಈ ದಿವಸ ಒಬ್ಬ ವ್ಯಕ್ತಿ ಒಂದು ತರಗತಿಯ ಸೊಸೈಟಿಯಲ್ಲಿ ಸದಸ್ಯನಾಗಿದ್ದರೆ ಆತ ಅದೇತರಗತಿಯ ಇನ್ನೊಂದು ಸೊಸೈಟಿಯಲ್ಲಿ ಸದಸ್ಯನಾಗಿರಕೂಡದೆಂದು ಒಂದು ನಿರ್ಬಂಧವಿದ್ದರೂ ಇಲ್ಲಿ ಹೇಳಿರುವಂತೆ ಆತ ಎಷ್ಟು ಸೊಸೈಟಿಗಳಲ್ಲಿ ಬೇಕಾದರೂ ಸದಸ್ಯನಾಗಿರಬಹುದು. ಆದರೆ ಇದರಲ್ಲಿ ಈ ವಿಚಾರವನ್ನು ವಿಶದವಾಗಿ ತಿಳಿಸಿಲ್ಲ. ಇಲ್ಲಿ ಇಂಥ ಒಂದು ಅವಕಾಶವಿರುವುದರಿಂದ ಆತ ತನಗೆ ಬೇಕಾದ ಸೌಕರ್ಯಗಳನ್ನು ಮಾಡಿಕೊಂಡು ಇತರರಿಗೆ ಅನ್ಯಾಯಮಾಡತಕ್ಕ ಅವಕಾಶ ಪೂರಾ ಇರುತ್ತದೆ. ಇದರಿಂದ ಇಂಥಾ ಒಂದು ದುರ್‌ವ್ಯವಹಾರಕ್ಕೆ ಅವಕಾಶವಾಗುತ್ತದೆ. ಈ ಮಸೂದೆಯಲ್ಲಿ ಇಷ್ಟೆಲ್ಲಾ ದೋಷಗಳಿರುವುದರಿಂದ ಇದರ ಬಗ್ಗೆ ಯಾವ ತಿದ್ದುಪಡಿ

ಸೂಚನೆಯನ್ನೂ ಬಯಸುವುದಕ್ಕೆ ಆಗುವುದಿಲ್ಲ ಎಂದು ಹೇಳಿ ನಾನು ಇದನ್ನು ಸಂಪೂರ್ಣವಾಗಿ ವಿರೋಧಿಸುತ್ತೇನೆ. ಸೊಸೈಟಿಯಲ್ಲಿ ಸದಸ್ಯರು ಇಡತಕ್ಕ ಹಣದ ಭದ್ರತೆಯನ್ನು ಹಾಗೂ ಸದಸ್ಯನ ಹಿತರಕ್ಷಣೆ ಮಾಡತಕ್ಕಂಥ ಮಸೂದೆ ಇದಲ್ಲ. ಇಲ್ಲಿ ಟ್ರೈಬ್ಯುನಲ್ ವಿಚಾರ ಹೇಳಿದ್ದಾರೆ. ಇದನ್ನು ಸಂಪೂರ್ಣವಾಗಿ ಮನ್ನಾಮಾಡಬೇಕು. ಈ ಮಸೂದೆಯನ್ನು ತಿದ್ದುಪಡಿ ಮಾಡಲು ಇದನ್ನು ಒಂದು ಜಾಯಿಂಟ್ ಸೆಲೆಕ್ಟ್ ಸಮಿತಿಯ ಪರಿಶೀಲನೆಗೆ ಒಪ್ಪಿಸುವುದು ಒಳ್ಳೆಯದೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಅಧ್ಯಕ್ಷರೇ ನಾವು ಸರ್ಕಾರದವರೊಂದು ಹೊಸ ಮಸೂದೆಯನ್ನು ತರುತ್ತಾರೆ, ಸಹಕಾರ ತತ್ವಗಳು ಅಳಿಸಿಹೋಗತಕ್ಕಂಥ ಈ ಸಮಯದಲ್ಲಿ ಸರ್ಕಾರದವರು ತರತಕ್ಕ ಬಿಲ್ಲು ಉತ್ತಮ ರೀತಿಯಲ್ಲೇ ಇರಬಹುದು ಎಂದು ನಮ್ಮೆಲ್ಲರ ಗಮನವಿತ್ತು. ಈಗ ನಮ್ಮ ಮುಂದಿರತಕ್ಕ ಮಸೂದೆಯನ್ನು ನೋಡುವುದಾದರೆ ಇದರಲ್ಲಿ ಇನ್ನಷ್ಟು ಜನರನ್ನು ಸೇರಿಸಿ, ಪ್ರತಿನಿಮಿಷದಲ್ಲಿಯೂ ಒಬ್ಬರಿಗಲ್ಲದಿದ್ದರೆ ಇನ್ನೊಬ್ಬರಿಗೆ ಫೋನ್ ಮಾಡುತ್ತಾ ಸಂಸ್ಥೆಯನ್ನು ಬೆಳೆಸತಕ್ಕ ಕಡೆಗೆ ಇವರು ತಮ್ಮ ಗಮನ ಕೊಡದೆ ತಮ್ಮ ಪ್ರತಿಷ್ಠೆಯನ್ನು ಬೆಳೆಸಿಕೊಳ್ಳಲು ಈ ಮಸೂದೆಯಲ್ಲಿ ಒಂದು ಮಾರ್ಗ ಮಾಡಿಕೊಂಡಿದ್ದಾರೆಯೇ ಹೊರತು ಇದರಲ್ಲಿ ಇನ್ನೇನೂ ಇಲ್ಲ. ನಮ್ಮ ಭಾರತದಲ್ಲಿ ಸಹಕಾರತತ್ವ ಉಳಿಯಬೇಕು ಹಾಗೂ ಅವು ಬೆಳೆಯಬೇಕೆಂಬುವವರಲ್ಲಿ ನಾನೂ ಒಬ್ಬ. ಆದರೆ ಈಗ ತಂದಿರತಕ್ಕ ಮಸೂದೆಯೇನಿದೆ ಇದೊಂದು ವಿಶ್ವಾಮಿತ್ರ ಸೃಷ್ಟಿಯಾಗಿದೆ. ಇದರಲ್ಲಿ ಸಾಹುಕಾರರಿಗೂ ಅನುಕೂಲವಿಲ್ಲ. ಬಡವರಿಗೂ ಅನುಕೂಲವಿಲ್ಲ, ಮಧ್ಯವರ್ತಿಯ ಒಂದು ತರಗತಿಯವರಿಗಾಗಿ ಇದನ್ನು ತಂದಿರುವಂತೆ ನನಗೆ ಕಂಡುಬರುತ್ತಿದೆ. ಈ ಮಧ್ಯವರ್ತಿಯವರಿಂದಲೇ ಇಲ್ಲಿಯವರೆಗೂ ಈ ಸಂಸ್ಥೆಗಳಲ್ಲಿ ವಿಶೇಷ ಹಣ ದುರುಪಯೋಗವಾಗಿರುವುದು. ಇಲ್ಲಿಯವರೆಗೂ ಎಷ್ಟು ಸೊಸೈಟಿಗಳಲ್ಲಿ ಹಣ ದುರುಪಯೋಗವಾಗಿಲ್ಲ? ಅವುಗಳ ವಿಚಾರದಲ್ಲಿ ಸರ್ಕಾರದವರು ಇಲ್ಲಿಯವರೆಗೇನು ಕಾರ್ಯಕ್ರಮವನ್ನ ಕೈಗೊಂಡಿದ್ದಾರೆ? ಇಲ್ಲಿಯತನಕ ಈ ಸೊಸೈಟಿಗಳ ಒಂದು ವಿಶೇಷವ್ಯವಹಾರ ನಡೆದಿದೆಯೆಂದರೆ ಅದು ಹೆಂಡದಿಂದ ಬೆಲ್ಲಾ ತಯಾರಿಸುವುದಕ್ಕಾಗಿ, ಇಲ್ಲವೇ ನೀರಾ ಕೇಂದ್ರಗಳನ್ನು ತೆರೆಯುವುದಕ್ಕಾಗಿ ಇಲ್ಲವೇ ಕೊಟ್ಟಣದಕ್ಕಿಯನ್ನು ತಯಾರಿಸತಕ್ಕ ಸಹಕಾರ ಸಂಘ ಇಂಥವುಗಳಿಗೇ ವಿಶೇಷವಾಗಿ ಹಣವನ್ನು ಚೆಲ್ಲಿ ಈ ಸಹಕಾರ ಸಂಘಗಳು ಅಧೋಗತಿಗಿಳಿದವು. ಈಗ ನಾನು ಹೇಳಿದ ತರಗತೀ ವ್ಯವಹಾರವನ್ನು ಬೇರೆ ಯಾವ ಜನರ ಆರ್ಥಿಕ ಮಟ್ಟ ಉತ್ತಮವಾಗಿದೆ ಎಂಬುದನ್ನು ಸರ್ಕಾರದವರು ಹೇಳಲಿ. ಹಣ ದುರುಪಯೋಗವಾಗಿರತಕ್ಕ ಸಂದರ್ಭಗಳಲ್ಲೆಲ್ಲಾ ಮಂತ್ರಿಗಳು ರಿಜಿಷ್ಟ್ರಾರ್ ಅವರಿಗೆ ಆ ಆಡಿಟ್ ರಿಪೋರ್ಟನ್ನು ಸ್ವಲ್ಪ ಹಿಂದಕ್ಕಿಡಿ, ಇಂಥವರ ಮೇಲೆ ಆಕ್ಷನ್ ತೆಗೆದುಕೊಳ್ಳಬೇಡಿ ಎಂದು ಹೇಳುವುದರಲ್ಲೇ ಇವರ ಕಾಲವೆಲ್ಲಾ ಹರಣವಾಗಿದೆ. ಇನ್ನಾದರೂ ಈ ಸೊಸೈಟಿಗಳು ಉದ್ಧಾರವಾಗಬೇಕಾಗಿದ್ದರೆ ಸರ್ಕಾರದವರ ಕೈವಾಡ ಈ ಭಾಗದಲ್ಲಿ ಸಂಪೂರ್ಣವಾಗಿ ನಿಲ್ಲಬೇಕು. ಇವುಗಳ ಆಡಳಿತದಲ್ಲಿ ಅಧಿಕಾರಿಗಳಿಗೆ ಹೆಚ್ಚಿನ ಅಧಿಕಾರವಿರಲಿ ಎಂದು ಹೇಳುತ್ತೇನೆ. ಸರ್ಕಾರದವರನ್ನು ನಾನು ಕೇಳಿಕೊಳ್ಳುವುದಿಷ್ಟೇ. ಇನ್ನಾದರೂ ಇವರು ಇದರಲ್ಲಿ ಹಸ್ತಕ್ಷೇಪವನ್ನು ಬಿಟ್ಟು ಈ ಸಂಸ್ಥೆಗಳು ಒಂದು ಉತ್ತಮ ದಾರಿಗೆ ಬರಲು ಅವಕಾಶ ಮಾಡಿಕೊಡಿ ಎಂದು ಇವರು ಮಾಡಿರತಕ್ಕ ಆ ಕೂಡೊಕ್ಕಲು ಸಂಘದ ವಿಚಾರವನ್ನು ಹೇಳುವುದಕ್ಕೇ ಬರುವುದಿಲ್ಲ. ಯಾರಾದರೂ ಅಥವಾ ಅಧ್ಯಕ್ಷರೇ ನನ್ನ ಜೊತೆಯಲ್ಲಿ ಬರಲಿ ಅವುಗಳ ಪರಿಸ್ಥಿತಿಯೇನಾಗಿದೆ ಎಂಬುದು ಗೊತ್ತಾಗುತ್ತದೆ. ನಾಲ್ಕು ದಿಕ್ಕಿನಲ್ಲಿ ಯಾವ ಕಡೆ ನೋಡಿದರೂ ಒಂದೂ ಸರಿಯಾಗಿ ನಡೆಯುತ್ತಿಲ್ಲ ನಾನು ಇದನ್ನು ಬಹಳ ದುಃಖದಿಂದ ಹೇಳಬೇಕಾಗಿದೆ.

† ಶ್ರೀ ಗೋಪಾಲ ಸಾಲೆನ್ಸ (ಮೂಡಬಿದ್ರಿ).—ಸ್ವಾಮಿ, ಸಹಕಾರ ಚಳುವಳಿಯಲ್ಲಿ ಸಾಧ್ಯವಾದ ಮಟ್ಟಿಗೆ ನಮ್ಮ ರಾಷ್ಟ್ರದ ಆರ್ಥಿಕ ಸ್ಥಿತಿ ಉನ್ನತಗೊಳ್ಳಬೇಕಾಗಿತ್ತು. ಆದರೆ ಹಲವು ಕಾರಣಗಳಿಂದ ಅದರ ಸೂಕ್ಷ್ಮವಾದ ನಡುವಳಿಕೆಯನ್ನು ಕಾರ್ಯಗತವಾಗುವಂತೆ ಮಾಡಲು ಫಂಡಮೆಂಟಲ್ ಅಂದರೆ ಅದರ ತಳಹದಿಯನ್ನು ಹುಡುಕುವುದರಲ್ಲಿ ನಾವು ತಪ್ಪಿಬಿದ್ದಿದ್ದೇವೆಂಬ ಕಡೆಗೆ ಸಹಕಾರ ಇಲಾಖೆ ಗಮನವನ್ನು ಸೆಳೆಯುತ್ತಾ ಸರ್ಕಾರವೂ ಸಹ ಆ ಕಡೆಗೆ ಗಮನ ಕೊಟ್ಟಿಲ್ಲವೆಂದೂ ನಾನು ಹೇಳುತ್ತೇನೆ. ಆದ್ದರಿಂದಲೇ ಈ ಪರಿಸ್ಥಿತಿಗೆ ಕಾರಣವಾಗಿದೆ. ಈಗ ಇವರು ಯಾವ ಮಸೂದೆಯನ್ನು ತಂದಿದ್ದಾರೋ ಅದು ನಿಜವಾಗಿ ಒಳ್ಳೆಯ ಉದ್ದೇಶದಿಂದಲೇ ತಂದಿದ್ದಾರೆ. ಉದ್ದೇಶವೇನೋ ಒಳ್ಳೆಯದು. ಆದರೆ ಇದು ನ್ಯಾಯವಾಗಿ ಕಾರ್ಯಗತವಾಗುವಾಗ ಇದಕ್ಕಿಂತಲೂ ಇನ್ನೂ ಕೆಲವು ವಿಶೇಷವಾದಂಥ ವಿಚಾರಗಳನ್ನು ಇದರಲ್ಲಿ ಅಳವಡಿಸಬಹುದಿತ್ತು. ಮುಖ್ಯವಾಗಿ ನೋಡಿದರೆ ರಾಯಚೂರಿನ ಕೆಲವು ವಿಚಾರಗಳನ್ನು ಪರಿಶೀಲಿಸಿದರೆ 60ನೇ ಇಸವಿಯಿಂದ ಆಗಿದ್ದಂತಹ ಹಣದುರುಪಯೋಗ ವಿಷಯ ಈಗ ತಾನೇ ಬೆಳಕಿಗೆ ಬರುತ್ತಿದೆ. ಇದಕ್ಕೆ ಕಾರಣವೇನೆಂದರೆ 60ರಲ್ಲಿ ಹಣದುರುಪಯೋಗವಾಗುವ ಕಾಲಕ್ಕೆ ಯಾವುದಾದರೂ ಆಡಳಿತ ದೋಷವೆಂದು ಕೊಡುತ್ತಿದ್ದರು. ಆಗ ಒಂದು ಲಕ್ಷ ಚಿಲ್ಲರೆ ದುರುಪಯೋಗವಾಯಿತು. ಈಗ ನಾಲ್ಕು ವರ್ಷಗಳನಂತರ ಬರುತ್ತಿದೆ. ಅದನ್ನೂ ಕೂಡ

(ಶ್ರೀ ಗೋಪಾಲ ಸಾಲೆನ್ನ)

ಇಲ್ಲಿ ತಪ್ಪಾಗಿ ಹಾಕಿದ್ದಾರೆ. ಇದನ್ನು ಎಲ್ಲಿ ಯಾವ ರೀತಿ ಕೊಡಬೇಕೆಂಬ ಬಗ್ಗೆ ಪ್ರಶ್ನೆ ಮಾಡಿ ನೋಡಬೇಕಾಗಿದೆ. ಧೀರ್ಘಾವದಿ ಕಾಲ ಕೊಟ್ಟದ್ದರಿಂದ ಆ ರೀತಿಯಾಯಿತು. ಇದಕ್ಕೆ ಉತ್ತರೆ ಈ ಮಸೂದೆಯಲ್ಲಿಯೇ ಅಳವಡಿಸಬೇಕು. ಇದರಲ್ಲಿ ಜಾಯಿಂಟ್ ರಿಜಿಸ್ಟ್ರಾರ್ ಇರತಕ್ಕ ಟ್ರಿಬ್ಯೂನಲ್ ಬೇಕು ಎಂದು ಹೇಳುತ್ತಾರೆ. ಈಗಾಗಲೇ ಅನೇಕ ಮಿತ್ರರು ಹೇಳಿದರು. ಈ ಟ್ರಿಬ್ಯೂನಲ್ ಬೇಡವೆಂದೂ ನಾನು ಹೇಳುತ್ತೇನೆ ಇದರಲ್ಲಿ ವಿಶೇಷವಾದಂಥ ಮತ್ತು ವಿಶದವಾದಂಥ ಒಂದು ರಾಜಕೀಯದ ಹಿನ್ನೆಲೆ ಇದೆ. ಆದ್ದರಿಂದಲೇ ಈ ಸಂಸ್ಥೆಗಳು ಇಷ್ಟು ಹೆಚ್ಚುತ್ತಿವೆ. ಆದರೆ ಸಹಕಾರದ ತಳಹದಿಯ ಮೇಲೆ ಇವುಗಳ ಇತ್ಯರ್ಥವಾಗಬೇಕು, ಕೇವಲ ಜುಡಿಷಿಯಲ್, ಕ್ರಿಮಿನಲ್ ಮತ್ತು ಸಿವಿಲ್ ತತ್ವದ ಮೇಲೆ ಹೋಗುವುದು ಸಹಕಾರವಲ್ಲ, ಇದಕ್ಕೆ ಪ್ರತ್ಯೇಕವಾಗಿ ಟ್ರಬ್ಯೂನಲ್ ಬೇಕು. ಅದರ ಸಂಖ್ಯೆ ಎಷ್ಟಿರಬೇಕು ವಕೀಲರನ್ನು ತರಬೇಕೇ ಅಥವಾ ಹೊರಗಿನವರನ್ನು ತರಬೇಕೇ ಎಂಬುದನ್ನು ಸರ್ಕಾರ ಗಮನಿಸಬೇಕು. ಸಹಕಾರ ತತ್ವದ ಮೇಲೆ ವಿಶ್ವಾಸವುಳ್ಳಂಥ ಒಂದೆರಡು ಜನರನ್ನು ಇಟ್ಟುಕೊಂಡರೆ ಸಾಕು ಅದಕ್ಕೆ ವಕೀಲರ ಮಟ್ಟಿಗೆ ಜನರನ್ನು ಜಾಸ್ತಿ ಇಟ್ಟು ಕೊಳ್ಳುವುದು ಸರಿಯಲ್ಲ. ಆದ್ದರಿಂದ ಸಣ್ಣ ಟ್ರಿಬ್ಯೂನಲ್ ರಚನೆ ಮಾಡಬೇಕು. ದೊಡ್ಡ ದೊಡ್ಡ ಟ್ರಿಬ್ಯೂನಲ್‌ಗಳಿಗೆ ಅಗುವ ಖರ್ಚು ಸಣ್ಣ ಸಣ್ಣ ಟ್ರಿಬ್ಯೂನಲ್‌ಗಳಿಗೆ ಮಾಡಿ ಅಲ್ಲಿ ಸಣ್ಣ ಸಣ್ಣ ಜೂನಿಯರ್ ಇನ್ಸ್‌ಪೆಕ್ಟರುಗಳನ್ನು ಮತ್ತು ಜೂನಿಯರ್ ಆಡಿಟರುಗಳನ್ನು ನೇಮಿಸಿ ಆ ಸಂಖ್ಯೆಯನ್ನು ಜಾಸ್ತಿ ಮಾಡಿ ಸಹಕಾರ ಸಂಘಗಳಿಗೆ ಅವರು ಭೇಟಿ ಇತ್ತು ಆಗಾಗ್ಗೆ ಅಲ್ಲಿರುವವರಿಗೆ ತಿಳುವಳಿಕೆ ಕೊಟ್ಟು ಅವರನ್ನು ಒಳ್ಳೆಯದಾರಿಗೆ ತರುವಂತೆ ಮಾಡಿದರೆ ಈ ಸಹಕಾರ ತತ್ವ ಯಶಸ್ವಿಯಾದೀತು, ಎಂಬುದಾಗಿ ಅನೇಕ ಜನರು ಹೇಳಿದರು. ಮೊಕದ್ದಮೆ ಹೂಡಬೇಕು, ಜೈಲಿಗೆ ಕಳುಹಿಸಬೇಕು ಎಂದು ಹೇಳಿರುವುದರಿಂದ ನಮ್ಮ ರಾಜ್ಯದ ಜೈಲುಗಳು ಅದಕ್ಕೆ ಸಾಕಾಗುವುದಿಲ್ಲ, ಇಂತಹ ಕೇಸುಗಳು ಅಷ್ಟು ಸಂಖ್ಯೆಯಲ್ಲಿ ಅಷ್ಟು ಶಿಕ್ಷೆಗೆ ಒಳಗಾಗಿರತಕ್ಕ ನಮ್ಮ ರಾಜ್ಯದಲ್ಲಿರಬಹುದು. ಸುಮಾರು 16 ಸೊಸೈಟಿಗಳು ಹೀಗೇಯೇ ಬಂದಿವೆ. ಆದ್ದರಿಂದ ಈ ವಿಚಾರದ ಕಡೆ ಸರ್ಕಾರ ಸ್ವಲ್ಪ ತೀವ್ರವಾಗಿ ಗಮನಿಸಬೇಕು. ಒಂದು ವೇಳೆ ಅಲ್ಲಿ ಡಿಫಾಲ್ಟರ್ ಆದರೆ ಆತನಿಗೆ ಓಟು ಕೊಡಲಿಕ್ಕೆ ಹಕ್ಕಿಲ್ಲ. ಆ ಒಂದು ತತ್ವವನ್ನು ಮೊದಲಿನಿಂದಲೂ ಜಾರಿಗೆ ತರಬೇಕು. ಸಾಲ ತೆಗೆದುಕೊಂಡಿದ್ದನ್ನು ಸರಿಯಾಗಿ ಕೊಡಬೇಕು. ಯಾವ ಹಣ ಎಂಬುದು ಸರಿಯಾಗಿ ಗೊತ್ತಾಗುವುದಕ್ಕೆ ಎರಡು ತಿಂಗಳು ಮೊದಲೇ ನೋಟಿಸ್ ಕೊಡಬೇಕು. ಅಧ್ಯಕ್ಷರಾಗಲೀ ಅಥವಾ ಸೆಕ್ರೆಟರಿಯಾಗಲೀ ಯಾರಾದರೂ ಆರೀತಿ ಕೊಡಬಹುದು. ಅವರಿಗೇನಾದರೂ ಹಣ ಬಾಕಿ ಇದ್ದರೆ ಅಥವಾ ಯಾವ ರೂಪದಲ್ಲಾದರೂ ಅವನು ಸಸ್ಪೆಂಡ್ ಆಗಿದ್ದಾನೆ ಎಂದು ಕಂಡು ಬಂದರೆ ಅವನನ್ನು ಸದಸ್ಯಸ್ಥಾನಕ್ಕೆ disqualify ಎಂದು ಸೆಕ್ರೆಟರಿಯಾಗಲೀ ಅಥವಾ ಅಧ್ಯಕ್ಷನ್ನಾಗಲೀ ಮಾಡಬಹುದು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಟಿ. ಎನ್. ಮಾದಪ್ಪ ಗೌಡ (ನಾಗಮಂಗಲ).—ಸ್ವಾಮಿ, ಈ ಸಭೆಯ ಮುಂದೆ ಮೈಸೂರು ಸಂಸ್ಥಾನದ ಸಹಕಾರ ಸಂಘಗಳ ತಿದ್ದುಪಡಿ ಮಸೂದೆಯನ್ನು ತಂದಿರುವ ಉದ್ದೇಶ ಸಾಧುವಾದರೂ ಈ ರಾಜ್ಯವನ್ನು ಸಹಕಾರದ ತಳಹದಿಯಮೇಲೆ ಕಟ್ಟಬೇಕೆಂಬ ಗುರಿಯಲ್ಲಿ ಎಲ್ಲರಿಗೂ ಒಂದೇ ಅಭಿಪ್ರಾಯವಿದ್ದರೂ ಅಲ್ಲಿ ನಡೆಯುತ್ತಿರುವ ಕೆಲವು ಲೋಪದೋಷಗಳ ವಿಚಾರದಲ್ಲಿ ನಾನು ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈಗಾಗಲೇ ಅನೇಕ ಮಾನ್ಯ ಮಿತ್ರರು ಇದರಲ್ಲಿರತಕ್ಕ ಲೋಪದೋಷಗಳನ್ನು ಮತ್ತು ಅಲ್ಲಿನ ರೀತಿ ನೀತಿಗಳನ್ನು ಈ ಸಭೆಯ ಗಮನಕ್ಕೆ ತಂದಿದ್ದಾರೆ. ಆದ್ದರಿಂದ ಮತ್ತೆ ನಾನು ಅದನ್ನು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಹಿಂದೆ ಅಲ್ಲಿ ನಾಮಿನೇಷನ್ ಪದ್ಧತಿ ನಡೆಯುತ್ತಿತ್ತು. ಇನ್ನುಮುಂದೆ ಆ ನಾಮಿನೇಷನ್ ಪದ್ಧತಿ ಇರುವುದಿಲ್ಲವೆಂದು ಮಾನ್ಯ ಮಂತ್ರಿಗಳು ಹೇಳಿದರು. ಆದರೆ ಈಗ ಹೊಸದಾಗಿ ತಂದಿರುವ ಈ ಮಸೂದೆಯಲ್ಲಿ ನಾಮಿನೇಷನ್ನಿಗೆ ಅವಕಾಶವಿದೆ. ಈ ನಾಮಿನೇಷನ್ ಇರುವಾಗ ಸರ್ಕಾರಿ ಅಧಿಕಾರಿಗಳೂ ಸಹ ಇರಬೇಕು. ಯಾವುದೇ ಸಂಘಕ್ಕೆ ಆಗಲೀ ಖಾಸಗೀ ವ್ಯಕ್ತಿ ನಾಮಿನೇಷನ್ ಮೂಲಕ ಬರುವುದಕ್ಕೆ ಅವಕಾಶ ಇರಕೂಡದು ಎಂದು ನಾನು ಹೇಳುತ್ತೇನೆ. ಅಲ್ಲಿ ಒಂದು ಕ್ಲಾಜಿನಲ್ಲಿ ಹೇಳುತ್ತಾರೆ. ನಾಮನಿರ್ದೇಶನ ಅಧಿಕಾರ ಪಡೆದು ಹೋಗುವುದಕ್ಕೆ ಪುರಸತ್ತೂ ಇಲ್ಲದೆ ಹೋದರೆ ಆಗ ಅವನ ಪರವಾಗಿ ಬೇರೆಯವರನ್ನು ಕಳುಹಿಸಬಹುದು ಎಂದು. ಅದು ಆ ರೀತಿ ಇರಬಾರದು. ಆ ಅಧಿಕಾರಿ ಆ ಸ್ಥಳದಲ್ಲಿಯೇ ಇರುವಹಾಗೆ ಮಾಡಬೇಕು. ಹೆಚ್ಚಿಗೆ ಲ್ಯಾಂಡ್‌ಮಾರ್ಟ್‌ಗೇಜ್ ಬ್ಯಾಂಕ್ ಅಧಿಕಾರವನ್ನು ಅಭಿವೃದ್ಧಿ ಪಡಿಸುವ ಸಲುವಾಗಿ ಈ ತಿದ್ದುಪಡಿಯನ್ನು ತರಬೇಕೆಂದು ನಾನು ಹೇಳುತ್ತಿದ್ದೇನೆ. ಆದರೆ ಯಾವುದೇ ವಿಧದಲ್ಲಾಗಲೀ ಖಾಸಗೀ ಜನಗಳಿಗೆ ತಿಳುವಳಿಕೆ ಕಡಿಮೆ. ಈಗಿರುವ ಗುಂಪುಗಾರಿಕೆಗಳಿಂದ ಈಗ ಅನೇಕ ಅನಾಹುತಗಳು ನಡೆಯುತ್ತಿವೆ. ಆದ್ದರಿಂದ ನನ್ನ ಸ್ಥಳದ ಒಂದು

ಉದಾಹರಣೆಯನ್ನು ಮತ್ತು ನಿದರ್ಶನವನ್ನು ಕೊಡುತ್ತೇನೆ. ಅಲ್ಲಿರತಕ್ಕ ಲ್ಯಾಂಡ್‌ಮಾರ್ಟ್‌ಗೇಜ್ ಬ್ಯಾಂಕಿಗೆ ಬಂದಿರತಕ್ಕ ಡೈರೆಕ್ಟರುಗಳಲ್ಲೊಬ್ಬರ ವಿನಹ ಬಾಕಿಯವರೆಲ್ಲಾ ಅವರು ತಮ್ಮ ಹೊಟ್ಟೇ ಪಾಡನ್ನು ಕುರಿತು ಕೆಲಸ ಮಾಡಿಕೊಂಡು ಹೋಗುವ ಜನ. ಒಬ್ಬ ಖದೀಮ ನಾನ್-ಅಫಿಷಿಯಲ್ಲ ಕಾರ್ಯದರ್ಶಿಯಾಗಿ ಮಾಡಿ ಕೊಂಡಿದ್ದಾರೆ. ಈ ಕಾರ್ಯದರ್ಶಿ ಏನು ಮಾಡುತ್ತಿದ್ದಾನೆಂದರೆ ಅವನ ಗುಮಾಸ್ತನ ಕೈಲಿ by circulation ಮೀಟಿಂಗ್ ನೋಟೀಸ್ ಕಳುಹಿಸುವುದು. ಇವನ ಸಂಬಳ 180 ರಿಂದ 500 ರೂಪಾಯಿಗಳ ಗ್ರೇಡ್ ಹಾಕಿಕೊಂಡು ಸುಮ್ಮನೆ ರುಜುಗಳನ್ನು ತೆಗೆದುಕೊಂಡು $1\frac{1}{2}$ ವರ್ಷಗಳಿಂದಲೂ ಸಂಬಳ ತೆಗೆದುಕೊಂಡಿದ್ದಾನೆ. ಜೊತೆಗೆ ಉದ್ದೇಶ ಪೂರ್ವಕವಾಗಿ ಇವರು ಹೀಗೆ ಮಾಡುತ್ತಿದ್ದಾರೆಂದು ಶ್ರೀಮಾನ್ ಕೇಶವ ಮೂರ್ತಿಯವರು ಮಾತನಾಡುತ್ತಾ ಹೇಳಿದರು. ಬಡ್ಜೆಟ್ ಮಾಡುವಾಗ ಸರ್ಕಾರದ ಉದ್ದೇಶ ಎಷ್ಟೋ ದೊಡ್ಡದು ಇದ್ದರೂ ರೈತರಿಗೆ ಉಪಕಾರ ಮಾಡುವ ಸದುದ್ದೇಶದಿಂದ ಸಾಲ ಕೊಡುವಾಗ ಸಣ್ಣ ಪುಟ್ಟ ಜನಗಳಿಂದ ಬಹಳವಾಗಿ ಕಿರುಕುಳವಾಗುತ್ತಿದೆ. ಮಾನಿಷ್ಠರಿಗೆ, ಜಮೀನು ಇರತಕ್ಕವರಿಗೆ ನಿಜವಾಗಿಯೂ, ಅವರ ಅನುಕೂಲಕ್ಕೆ ಬೇಕಾದಂತವರಿಗೆ ಸಾಲ ದೊರೆಯುವುದಿಲ್ಲ. ಪುಂಡರಿಗೆ, ಪೋಕರಿಯವರಿಗೆ ರಿಕಾರ್ಡ್ಸ್ ಮೇಲೆ ರಿಕಾರ್ಡ್ಸ್ ನಡೆದು ಅತಿಜಾಗ್ರತೆಯಾಗಿಯೇ ಅವರಿಗೆ ಹಣ ಸಿಗುತ್ತದೆ.

6-00 P.M.

ಇನ್ನೊಂದು ದೊಡ್ಡ ಅಭಿಪ್ರಾಯವೇನೆಂದರೆ ರೈತನಾದವನು ರಿಜಿಸ್ಟರ್‌ಮಾಡಿ ಪತ್ರಕೊಡುತ್ತಾನೆ. ಆ ಪತ್ರ ಕೊಟ್ಟನಂತರ ಸೆಂಟ್ರಲ್ ಬ್ಯಾಂಕಿನಿಂದ ಅಥವಾ ಲ್ಯಾಂಡ್‌ಮಾರ್ಟ್‌ಗೇಜ್ ಬ್ಯಾಂಕಿನಿಂದ ಚೆಕ್ ಬರುತ್ತದೆ. ಅದಕ್ಕಾಗಿ ಯಾರು ಕಾರ್ಯದರ್ಶಿಯೋ ಅವನೇ ಬೆಂಗಳೂರಿಗೆ ಬರುತ್ತಾನೆ. ಅವನೇ ಸ್ವತಃ ಬರುತ್ತಾನೆ. ಆದರೆ ಪಾರ್ಟಿಗಳಿಗೆ ಇಂಟಿಮೇಷನ್ ಕೊಡುವುದೇ ಇಲ್ಲ. ಅವನಿಗೆ ಸಾಲದ ಹಣ ಮಂಜೂರಾಗಿದ್ದರೆ, ಅವನಿಗೆ ಒಂದೂವರೆ ವರ್ಷಕ್ಕೆ ತಲುಪಿದೆ. ಹೀಗೆ ಖರ್ಚು ಇಟ್ಟು ಆ ಹಣವನ್ನು ತೆಗೆದುಕೊಂಡು ಕಳುಹಿಸಿದರೂ ಆಯಿತು. ಇಂತಹ ಪರಿಸ್ಥಿತಿಯಾಗುತ್ತದೆ. ಆದ್ದರಿಂದ ಯಾವುದೇ ಕಾರ್ಯಕ್ಕಾಗಿ ಸರ್ಕಾರದ ಅಧಿಕಾರದಲ್ಲಿರತಕ್ಕವನಿಗೆ ಇಂತಹ ಜವಾಬ್ದಾರಿಯನು ವಹಿಸಿದರೆ, ಅಂತಹವನು ಇಂತಹ ಜವಾಬ್ದಾರಿ ಜಾಗದಲ್ಲಿದ್ದರೆ ಸಂಘದ ಆಡಳಿತ ಒಂದು ಹತೋಟಿಗೆ ಸಿಕ್ಕುತ್ತದೆ. ಆಗ ಸರ್ಕಾರದವರು ಈ ಬಗ್ಗೆ ಏನು ಗುರಿಯನ್ನು ಇಟ್ಟುಕೊಂಡಿದ್ದಾರೋ ಆ ರೀತಿಯಲ್ಲಿ ಕೆಲಸ ಮಾಡಿಸುವುದಕ್ಕೆ ಸಾಧ್ಯವಾಗುತ್ತದೆ.

ಆದ್ದರಿಂದ ನಾವು ಬಯಸಿರತಕ್ಕ ಉಪಯೋಗ ರೈತನಿಗೆ ಸಿಕ್ಕುತ್ತದೆ. ಇಲ್ಲದೆ ಹೋದರೆ ಗುಂಪುಗಾರಿಕೆ, ಪಂಗಡಗಾರಿಕೆಯ ಮನೋಭಾವದಿಂದ ರೈತರಿಗೆ ಸಿಕ್ಕುವಂತಹ ಅನುಕೂಲ ಅವರಿಗೆ ಸಿಕ್ಕುವುದಿಲ್ಲ, ಬಹಳ ತೊಂದರೆಯಾಗುತ್ತದೆ ಎಂದು ಇಷ್ಟು ಮಾತನ್ನು ಹೇಳಿ ಯಾವುದೇ ವಿಧವಾಗಿ ಯಾದರೂ ಕೂಡ ಲೇಣಿದೇಣಿ, ಸೊಸೈಟಿಗಳಿಗೆ ನಾನ್‌ಅಫಿಷಿಯಲ್ ಗೌರವ ಕಾರ್ಯದರ್ಶಿಯಾಗಿ ಇರಕೂಡದು ಅವರಿಗೆ ಅಧಿಕಾರ ಇರಕೂಡದು. ಏನಿದ್ದರೂ ಸರ್ಕಾರಕ್ಕೆ ಸಂಬಂಧಪಟ್ಟ ಆಫೀಸರು ಇರುವ ಒಂದು ಕ್ರಮವನ್ನು ಕಡ್ಡಾಯವಾಗಿ ಜಾರಿಗೆ ತರಬೇಕೆಂದು ವಿನಯದಿಂದ ಕೇಳಿಕೊಂಡು ಈ ಎರಡು ಮಾತುಗಳನ್ನಾಡುವುದಕ್ಕೆ ನನಗೆ ಅವಕಾಶವನ್ನು ಕೊಟ್ಟದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Mr. SPEAKER.—The House now stands adjourned to reassemble at 12 NOON tomorrow.

The House adjourned at Five Minutes past Six of the Clock to meet again at Twelve of the Clock on Tuesday, the 7th July 1964.

WD 3312—GPB—900 10-10-64